ಜನಶಕ್ತಿ

ಕನ್ನಡ ವಾರಪತ್ರಿಕೆ


Blog: janashakthi.wordpress.com e-mail : js_weekly@yahoo.com

ಸಂಪುಟ 7 ಸಂಚಿಕೆ 31
ಆಗಸ್ಟ್ 04, 2013 ಪುಟ 16 ರೂ. 10/-





'ಕಂಪೆನಿ ಕೃಷಿಯನ್ನು ಹಿಮ್ಮೆಟ್ಟಿಸಿ - ರೈತ ಕೂಲಿಕಾರರನ್ನು ಸಂರಕ್ಷಿಸಿ'



ಪಶ್ಚಿಮ ಬಂಗಾಳ ಪಂಚಾಯತ್ ಚುನಾವಣೆ :

ರಿಗ್ಗಿಂಗ್ _ ತೃಣ ಮೂಲ ಹಿಂಸಾಚಾರ - ಪ್ರಜಾಪ್ರಭುತ್ವದ ಮೇಲೆ ಅತ್ಯಾಚಾರ



ಜುಲೈ 26, ಕ್ಯೂಬಾ ಬಂಡಾಯದ ದಿನ



ಬಿಸಿಯೂಟದಲ್ಲಿನ ಕೊರತೆಗಳಿಗೆ ಖಾಸಗೀಕರಣ ಪರಿಹಾರವೇ?.

'ಉತ್ತಮ ಹಾಸ್ಟೆಲ್ ಸೌಕರ್ಯ ಕೊಡಿ ಮನೆ ಬಿಟ್ಟು ಬಂದ ವಿದ್ಯಾರ್ಥಿಗಳಲ್ಲಿ ಅನಾಥ ಭಾವನೆ ತರಬೇಡಿ'

ಎಸ್‌ಸಿ-ಎಸ್‌ಟಿ-ಬಿಸಿಎಂ ಹಾಸ್ಟೆಲ್ ವಿದ್ಯಾರ್ಥಿಗಳ ಸಮಸ್ಯೆಗಳ ಪರಿಹಾರಕ್ಕೆ ಎಸ್‌ಎಫ್‌ಐ ಆಗ್ರಹ

ಓದುವ ಉದ್ದೇಶಕ್ಕಾಗಿ ತಮ್ಮ ತಂದೆ-ತಾಯಿ, ಪೋಷಕರ ಆರೈಕೆ ಮತ್ತು ಪ್ರೀತಿಯಿಂದ ದೂರವಾಗಿ ಹಾಸ್ಟೇಲ್‌ಗಳಲ್ಲಿ ಉಳಿಯುವ ಮಕ್ಕಳಿಗೆ ತಾವು ಬಿಟ್ಟುಬಂದ ಪ್ರೀತಿಯನ್ನು ತುಂಬಿಕೊಡುವಂತಹ ಉತ್ತಮ ಪರಿಸರವನ್ನು ಹಾಸ್ಟೆಲ್‌ಗಳಲ್ಲಿ ನಿರ್ಮಿಸಬೇಕು. ಉತ್ತಮ ಶೈಕ್ಷಣಿಕ ಸೌಲಭ್ಯಗಳು ಮತ್ತು ಕ್ರೀಡಾ-ಸಾಂಸ್ಕೃತಿಕ ಅವಕಾಶಗಳನ್ನು ಒದಗಿಸಬೇಕು ಎಂದು ಹಾಸ್ಟೆಲ್ ವಿದ್ಯಾರ್ಥಿಗಳ ಸಮಸ್ಯೆಗಳ ಪರಿಹಾರದ ನಿಟ್ಟಿನಲ್ಲಿ ಎಂಭತ್ತರ ದಶಕದಲ್ಲಿ ರಚಿಸಲಾಗಿದ್ದ ಶಾಸಕ 'ಗುರುಪ್ರಸಾದ್ ಸಮಿತಿ' ವರದಿ ಹೇಳಿತ್ತು. ಈ ಆಶಯವನ್ನು ನೆನಪಿಸಿಕೊಳ್ಳುವುದು ಇಂದಿಗೂ ಅಗತ್ಯವಾಗಿದೆ.

ಶಾಲಾ ಕಾಲೇಜು ಆರಂಭವಾದ ಕೂಡಲೇ ಹಾಸ್ಟೆಲ್ ಆರಂಭಿಸಿ, ನೀರು ಕೊಡಿ, ಶೌಚಾಲಯ ಕಟ್ಟಿಸಿ ಕೊಡಿ, ಹಾಸ್ಟೆಲ್ ಕಟ್ಟಿಸಿಕೊಡಿ ಎಂದು ಇಂದಿಗೂ ಕೇಳಬೇಕಾದ ಸ್ಥಿತಿಯೇ ಮುಂದುವರಿದಿರುವುದು ನಿಜಕ್ಕೂ ದುರಂತ. ವರದಿ : ಚಿಕ್ಕರಾಜು

ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದಿರುವ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಯ ಉದ್ದೇಶಕ್ಕಾಗಿ ಸಂವಿಧಾನದ ಸಾಮಾಜಿಕ ನ್ಯಾಯದ ಆಶಯದಂತೆ ಹಿಂದುಳಿದ ವರ್ಗಗಳ ಇಲಾಖೆ ಮತ್ತು ಸಮಾಜ ಕಲ್ಯಾಣ ಇಲಾಖೆಗಳ ಅಡಿಯಲ್ಲಿ ಬಿಸಿಎಂ ಮತ್ತು ಎಸ್.ಸಿ/ಎಸ್.ಟಿ ಹಾಸ್ಟೆಲ್‌ಗಳನ್ನು ನಡೆಸಲಾಗುತ್ತಿದೆ ಎಂದು ಹೇಳಲಾಗುತ್ತದೆ. ಆದರೆ ಈ ಹಾಸ್ಟೆಲುಗಳಲ್ಲಿ ನಮ್ಮ ವಿದ್ಯಾರ್ಥಿಗಳು ಬದುಕಬೇಕಾದ ಪರಿಸರವನ್ನು, ಓದುವುದಕ್ಕಾಗಿ ಇರುವ ಸೌಕರ್ಯಗಳನ್ನು ಗಮನಿಸಿದರೆ ವಿದ್ಯಾರ್ಥಿಗಳ ಸ್ಥಿತಿ ಶೋಚನೀಯವಾಗಿದೆ. ವಿದ್ಯಾರ್ಥಿ ನಿಲಯಗಳು ಶೈಕ್ಷಣಿಕ ವಾತಾವರಣಕ್ಕೆ ಪೂರಕವಾಗಿಲ್ಲ. ಹಾಸ್ಟೆಲ್ ಬಯಸಿ ಬರುವ ಬಡ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗುತ್ತಿದ್ದರೂ ಹಾಸ್ಟೆಲ್‌ಗಳ ಸಂಖ್ಯೆ ಮಾತ್ರ ಹೆಚ್ಚಾಗುತ್ತಿಲ್ಲ. ಹೀಗಾಗಿ ಇಂದಿಗೂ ಶೇ. 88% ರಷ್ಟು ವಿದ್ಯಾರ್ಥಿಗಳು ಉನ್ನತ ಶಿಕ್ಷಣದಿಂದ ಹೊರಗುಳಿದಿದ್ದಾರೆ. ಅಂದರೆ ದೇಶದಲ್ಲಿ ಉನ್ನತ ಶಿಕ್ಷಣ ಪಡೆಯುತ್ತಿರುವವರು ಕೇವಲ 12% ಮಾತ್ರ. ಉನ್ನತ ಶಿಕ್ಷಣದ ಪರಿಧಿಯಿಂದ ಅತಿ ಹೆಚ್ಚು ಹೊರಹಾಕಲ್ಪಟ್ಟಿರುವುದು ಎಸ್.ಸಿ, ಎಸ್.ಟಿ ಮತ್ತು ಆರ್ಥಿಕವಾಗಿ ಹಿಂದುಳಿದ ವರ್ಗಗಳ ವಿದ್ಯಾರ್ಥಿ ಸಮುದಾಯ.

ದೇಶದೆಲ್ಲೆಡೆ ಆಹಾರ ಪದಾರ್ಥಗಳ ಬೆಲೆ ಗಗನಕ್ಕೇರುತ್ತಿರುವಾಗ ಹಾಸ್ಟೆಲ್ ವಿದ್ಯಾರ್ಥಿಗಳ ದಿನದ ಊಟಕ್ಕೆ ಸರ್ಕಾರ ನೀಡುತ್ತಿರುವುದು ಕಾಲೇಜು ವಿದ್ಯಾರ್ಥಿಗಳಿಗೆ ದಿನಕ್ಕೆ ಕೇವಲ 27.41ರೂ. (ಮಾಸಿಕ-850 ರೂ.) ಮತ್ತು ಶಾಲಾ ವಿದ್ಯಾರ್ಥಿಗಳಿಗೆ ದಿನಕ್ಕೆ ಕೇವಲ 24.19 ರೂ. (ಮಾಸಿಕ-750ರೂ.) ಮಾತ್ರ. ದೈಹಿಕವಾಗಿ-ಮಾನಸಿಕವಾಗಿ ಸದೃಢವಾಗಿ ಬೆಳವಣಿಗೆ ಹೊಂದಬೇಕಾದ ವಯೋಮಾನದ ಈ ವಿದ್ಯಾರ್ಥಿಗಳಿಗೆ ಗುಣಮಟ್ಟದ ಆಹಾರ ನೀಡಲು ಇದರಿಂದ ಸಾಧ್ಯವೇ ಇಲ್ಲ.

ಜೈಲಿನಲ್ಲಿರುವ ಖೈದಿಗಳಿಗೆ ರಾಜ್ಯ ಸರ್ಕಾರ ದಿನಕ್ಕೆ ಸುಮಾರು 120 ರೂ.ಗಳನ್ನು ಆಹಾರಕ್ಕಾಗಿ ಖರ್ಚು ಮಾಡುತ್ತಿದೆ. ಆದರೆ ವಿದ್ಯಾರ್ಥಿಗಳಿಗೆ-ಶೈಕ್ಷಣಿಕ ಪ್ರಗತಿಯ ಅಗತ್ಯಕ್ಕೆ ತಕ್ಕಂತೆ ಹಣ ಖರ್ಚು ಮಾಡಲು ಸರ್ಕಾರಗಳು ಸಿದ್ಧವಿಲ್ಲ.

ಬಹುತೇಕ ಹಾಸ್ಟೆಲ್‌ಗಳಲ್ಲಿ ವಿದ್ಯಾರ್ಥಿಗಳ ಅಗತ್ಯಕ್ಕೆ ಅನುಗುಣವಾಗಿ ಕನಿಷ್ಠ ಶೌಚಾಲಯಗಳಿಲ್ಲ. ಬಾಡಿಗೆ ಕಟ್ಟಡಗಳಲ್ಲಿ ನಡೆಸುತ್ತಿರುವ ಕೆಲವು ಹಾಸ್ಟೆಲ್‌ಗಳಂತೂ ಹಂದಿಗೂಡಿಗಿಂತಲೂ ಕೀಳಾಗಿವೆ. ಪ್ರತಿ ಹಾಸ್ಟೆಲ್‌ಗಳಿಗೂ ಗ್ರಂಥಾಲಯಗಳು ಇರಬೇಕೆಂದು ನಿಯಮವಿದೆ. ಆದರೆ ಅದು ಎಲ್ಲಿಯೂ ಜಾರಿಯಲ್ಲಿಲ್ಲ. ಪಠ್ಯಕ್ರಮ, ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಲು ಅಗತ್ಯವಿರುವ ಪುಸ್ತಕಗಳು, ದಿನಪತ್ರಿಕೆಗಳು ಮತ್ತು ಮಾಸ ಪತ್ರಿಕೆಗಳು ಹಾಸ್ಟೆಲ್‌ನ ಗ್ರಂಥಾಲಯಗಳಲ್ಲಿ ಸಿಗುತ್ತಿಲ್ಲ. ಕ್ರೀಡಾ ಸಾಮಗ್ರಿಗಳು, ಉಪಕರಣಗಳೂ ಕೂಡ ಸಿಗುತ್ತಿಲ್ಲ. ಅಷ್ಟೇ ಅಲ್ಲದೆ ಗುಣಮಟ್ಟದ ಆಹಾರ, ಶುದ್ಧ ಕುಡಿಯುವ ನೀರು, ಸೂಕ್ತ ಕಟ್ಟಡ, ಹಾಸಿಗೆ, ಹೊದಿಕೆಗಳಿಲ್ಲದೆ ವಿದ್ಯಾರ್ಥಿಗಳು ಅನಾರೋಗ್ಯದಿಂದ ಬಳಲುತ್ತಿದ್ದಾರೆ. ಹಾಸ್ಟೆಲ್ ಮತ್ತು ಶೌಚಾಲಯಗಳನ್ನು ಶುಚಿಗೊಳಿಸುವವರಿಗೆ ತಿಂಗಳಿಗೆ ಕೇವಲ 500-1,000 ರೂ.ಗಳನ್ನು ನೀಡಿ ಸರ್ಕಾರ ಅವರನ್ನು ಅವಮಾನಿಸುತ್ತಿದೆ. ಹಾಸ್ಟೆಲ್‌ಗಳಲ್ಲಿ ಖಾಯಂ ಅಡುಗೆ ಸಿಬ್ಬಂದಿ ನೇಮಕಾತಿ ನಿಂತುಹೋಗಿದೆ. ಹೊರಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿಕೊಳ್ಳಲಾಗುತ್ತಿದ್ದರೂ ಅವರಿಗೆ ಸರಿಯಾದ ಸಮಯಕ್ಕೆ ಸೂಕ್ತ ಸಂಬಳ ನೀಡುತ್ತಿಲ್ಲ. ಒಬ್ಬ ವಾರ್ಡನ್ 2ಕ್ಕಿಂತ ಹೆಚ್ಚು ಹಾಸ್ಟೆಲ್‌ಗಳ ಉಸ್ತುವಾರಿ ನೋಡಿಕೊಳ್ಳುತ್ತಿದ್ದಾರೆ.

ಈಗಾಗಲೇ ಪದವಿ ಪೂರ್ವ ಕಾಲೇಜುಗಳ ತರಗತಿಗಳು ಪ್ರಾರಂಭವಾಗಿ ಎರಡು ತಿಂಗಳುಗಳಾಗಿವೆ. ಪದವಿ ತರಗತಿಗಳು ಸೇರಿದಂತೆ ಡಿಪ್ಲೊಮೋ, ಇಂಜಿನಿಯರಿಂಗ್, ಇನ್ನಿತರ ಕೋರ್ಸುಗಳು ಕೂಡ ಪ್ರಾರಂಭವಾಗಿವೆ. ಉನ್ನತ ಶಿಕ್ಷಣಕ್ಕಾಗಿ ದೂರದ ಗ್ರಾಮೀಣ ಪ್ರದೇಶಗಳಿಂದ ಬೆಂಗಳೂರಿನಲ್ಲಿ ವಿದ್ಯಾರ್ಥಿಗಳು ಪ್ರವೇಶ ಪಡೆದಿರುತ್ತಾರೆ. ಹಾಸ್ಟೆಲ್‌ಗಳಿಗಾಗಿ ಎಸ್‌ಸಿ-ಎಸ್‌ಟಿ ಮತ್ತು ಬಿಸಿಎಂ ಇಲಾಖೆಗಳಿಗೆ ಅರ್ಜಿ ಸಲ್ಲಿಸಿ ತಿಂಗಳುಗಳೇ ಕಳೆದರೂ ಇನ್ನೂ ವಿದ್ಯಾರ್ಥಿಗಳ ಆಯ್ಕೆ ಪಟ್ಟಿ ಪ್ರಕಟಗೊಂಡಿಲ್ಲ. ಪ್ರವೇಶ ಕೂಡ ನೀಡಿಲ್ಲ. ಪ್ರತಿನಿತ್ಯ ದೂರದ ವಾಸಸ್ಥಳದಿಂದ ಕಾಲೇಜುಗಳಿಗೆ ಪ್ರಯಾಣ ಮಾಡಲು ಹಣವಿಲ್ಲದೆ ವಿದ್ಯಾರ್ಥಿಗಳು ತೀವ್ರ ತೊಂದರೆಯನ್ನು ನರಕಯಾತನೆಯನ್ನು ಅನುಭವಿಸುತ್ತಿದ್ದಾರೆ. ಇಲಾಖೆಯ ಅಧಿಕಾರಿಗಳು ವಿದ್ಯಾರ್ಥಿಗಳಿಗೆ ಸರಿಯಾದ ಮಾಹಿತಿಗಳನ್ನೊದಗಿಸದೆ ಬೇಜವಾಬ್ದಾರಿತನದಿಂದ ವರ್ತಿಸಿ ವಿದ್ಯಾರ್ಥಿಗಳ ಜೊತೆ ಅನುಚಿತವಾಗಿ ನಡೆದುಕೊಳ್ಳುತ್ತಿದ್ದಾರೆ.



ಇಲ್ಲಿಯವರೆಗೂ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳಿಗೆ 850 ರೂ. ಮತ್ತು ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳ ವಿದ್ಯಾರ್ಥಿಗಳಿಗೆ 750 ರೂ. ಮಾಸಿಕ ಆಹಾರ ಭತ್ಯೆಯನ್ನು ಕೊಡಲಾಗುತ್ತಿತ್ತು. ಇದರಿಂದಾಗಿ ಹಾಸ್ಟೆಲ್‌ಗಳಲ್ಲಿ ನೀಡುತ್ತಿದ್ದ ಹಾಲು, ಮೊಟ್ಟೆ, ಬಾಳೆಹಣ್ಣು, ಮಾಂಸಾಹಾರ ಇನ್ನಿತರ ಪೌಷ್ಠಿಕ ಆಹಾರದಿಂದ ಹಾಸ್ಟೆಲ್ ವಿದ್ಯಾರ್ಥಿಗಳು ವಂಚಿತರಾಗುತ್ತಿದ್ದಾರೆ ವಿದ್ಯಾರ್ಥಿಗಳ ಹೋರಾಟದ ಫಲವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮಂಡಿಸಿರುವ 2013-14ನೇ ಸಾಲಿನ ಆಯವ್ಯಯದಲ್ಲಿ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳಿಗೆ ಆಹಾರಭತ್ಯೆಯನ್ನು 1,000 ರೂಗೆ, ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಿಗೆ 900ರೂ.ಗಳಿಗೆ ಅಂದರೆ ತಲಾ ವಿದ್ಯಾರ್ಥಿಗೆ 150 ರೂ.ಗಳಷ್ಟು ಹೆಚ್ಚಿಸಲಾಗಿದೆ. ಇಷ್ಟಾದರೂ ಏನಾದರೂ ನೆಪ ಹೇಳಿ ವಿದ್ಯಾರ್ಥಿಗಳಿಗೆ ಪೌಷ್ಠಿಕ ಆಹಾರ ನೀಡದೇ ತಪ್ಪಿಸುವ ಆಪಾಯವೂ ಇದೆ. ಆದ್ದರಿಂದ ಹಾಸ್ಟೆಲ್‌ಗಳಲ್ಲಿ ಹಿಂದೆ ನೀಡುತ್ತಿದ್ದ ಹಾಲು, ಮೊಟ್ಟೆ, ಬಾಳೆಹಣ್ಣು, ಮಾಂಸಾಹಾರ ಇನ್ನಿತರ ಪೌಷ್ಠಿಕಾಂಶ ಆಹಾರವನ್ನು ಈ ತಿಂಗಳಿನಿಂದಲೇ ಮತ್ತೆ ನೀಡಬೇಕೆಂದು ಒತ್ತಡ ತರಬೇಕಾದ ಅಗತ್ಯ ಬಂದಿದೆ.

ವಿದ್ಯಾರ್ಥಿಗಳ ಇಂತಹ ಸಮಸ್ಯೆಗಳನ್ನು ಬಗೆಹರಿಸಬೇಕೆಂದು ಬೇಡಿಕೆಗಳನ್ನು ಈಡೇರಿಸಬೇಕೆಂದು ಎಸ್‌ಎಫ್‌ಐ ಬೆಂಗಳೂರು ಜಿಲ್ಲಾ ಸಮಿತಿಯು 22, ಜುಲೈ 2013ರಂದು ಜಿಲ್ಲಾ ಪಂಚಾಯತ್ ಕಛೇರಿಯ ಮುಂಭಾಗ ಪ್ರತಿಭಟನೆ ನಡೆಸಿತು. ಸಮಸ್ಯೆಗಳನ್ನು ಕೂಡಲೇ ಬಗೆಹರಿಸಿ ವಿಳಂಬ ಮಾಡಬೇಡಿ ಎಂದು ಈ ಸಂದರ್ಭದಲ್ಲಿ ಮಾತನಾಡಿದ ಎಸ್‌ಎಫ್‌ಐ ಮುಖಂಡರು ಆಗ್ರಹಿಸಿದರು.

ಅರ್ಜಿ ಹಾಕಿದ ಎಲ್ಲಾ ವಿದ್ಯಾರ್ಥಿಗಳಿಗೂ ಹಾಸ್ಟೆಲ್ ಸೌಲಭ್ಯ ಕಲ್ಪಿಸಬೇಕು. ವಿದ್ಯಾರ್ಥಿಗಳ ಮೊದಲನೇ ಹಂತದ ಆಯ್ಕೆ ಪಟ್ಟಿಯನ್ನು ಕೂಡಲೇ ಪ್ರಕಟಿಸಬೇಕು. ಎಸ್.ಸಿ/ಎಸ್.ಟಿ ಮತ್ತು ಬಿಸಿಎಂ ಹಾಸ್ಟೆಲ್ ವಿದ್ಯಾರ್ಥಿಗಳ ಮಾಸಿಕ ಆಹಾರ ಭತ್ಯೆಯನ್ನು ಬೆಲೆ ಏರಿಕೆಗೆ ತಕ್ಕಂತೆ ಮೆಟ್ರಿಕ್‌ಪೂರ್ವ ಹಾಸ್ಟೆಲ್ ವಿದ್ಯಾರ್ಥಿಗಳಿಗೆ ರೂ 3,000 ಮೆಟ್ರಿಕ್ ನಂತರದ ಹಾಸ್ಟೆಲ್ ವಿದ್ಯಾರ್ಥಿಗಳಿಗೆ ರೂ. 3,500 ಗಳನ್ನು ನೀಡಬೇಕು. ಅಗತ್ಯಕ್ಕೆ ತಕ್ಕಂತೆ ಹೆಚ್ಚು ಹಾಸ್ಟೆಲ್‌ಗಳನ್ನು ಪ್ರಾರಂಭಿಸಬೇಕು. ಎಲ್ಲಾ ಹಾಸ್ಟೆಲ್‌ಗಳಿಗೆ ಖಾಯಂ ಭದ್ರತಾ ಸಿಬ್ಬಂದಿ (ಕಾವಲುಗಾರರನ್ನು) ನೇಮಿಸಬೇಕು. ವಿದ್ಯಾರ್ಥಿನಿಯರಿಗೆ ಅಗತ್ಯಕ್ಕೆ ತಕ್ಕಂತೆ ಪ್ರತ್ಯೇಕ

ಪುಟ 6 ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ

ಸಂಪಾದಕೀಯ

ಕೆರೆ ಏರಿಗಳ ಮೇಲಿನ ರಸ್ತೆಗಳು ವಾಹನ ಸಂಚಾರಕ್ಕೆ ಎಷ್ಟು ಸುರಕ್ಷಿತ?

ಜುಲೈ 23 ರಂದು ಬೆಳಿಗ್ಗೆ ಸುಮಾರು 10 ಗಂಟೆಗೆ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ಸೇರಿದ ಬಸ್ಸೊಂದು ಹಾಸನ ಜಿಲ್ಲೆ ಬೇಲೂರು ಬಳಿ ವಿಷ್ಣು ಸಮುದ್ರ ಕೆರೆಗೆ ಉರುಳಿ 8 ಮಂದಿ ಜಲಸಮಾಧಿಯಾಗಿ 80ಕ್ಕೂ ಹೆಚ್ಚು ಜನ ಗಾಯಗೊಂಡಿರುವ ದಾರುಣ ಘಟನೆಯಿಂದ ಕೆರೆ ಏರಿಗಳ ಮೇಲಿನ ರಸ್ತೆಗಳು ವಾಹನ ಸಂಚಾರಕ್ಕೆ ಎಷ್ಟು ಸುರಕ್ಷಿತ ಎಂಬ ಪ್ರಶ್ನೆ ಮತ್ತೊಮ್ಮೆ ಚರ್ಚೆಗೆ ಗ್ರಾಸವಾಗಿದೆ. ಸಕಲೇಶಪುರದಿಂದ ಬೇಲೂರಿಗೆ ಹೊರಟಿದ್ದ ಬಸ್ ವಿಷ್ಣು ಸಮುದ್ರ ಕೆರೆಯ ಏರಿಯ ಮೇಲೆ ಬರುತ್ತಿದ್ದಾಗ ಚಾಲಕನ ನಿಯಂತ್ರಣ ತಪ್ಪಿ ಸುಮಾರು 20 ಅಡಿ ಕೆ-ರೆಗೆ ಆಳದ ಉರುಳಿತೆಂದೂ ಕೆರೆಯಲ್ಲಿ ನೀರಿನ ಪ್ರಮಾಣ ಕಡಿಮೆ ಇದ್ದುದರಿಂದ ಹೆಚ್ಚಿನವರು ಪಾರಾಗಿ ಬರಲು ಸಾಧ್ಯವಾಯಿತೆಂದೂ, ಬಸ್ ನಿರ್ವಾಹಕನೂ ಸೇರಿದಂತೆ ಕೆಳಭಾಗಕ್ಕೆ ತಳ್ಳಲ್ಪಟ್ಟವರು ಮಾತ್ರ ಸಾವನ್ನಪ್ಪಿದ್ದಾರೆ ಎಂದು ಹೇಳಲಾಗುತ್ತಿದೆ.

ರಾಜ್ಯದಲ್ಲಿ, ಕೆರೆಗಳಿಗೆ, ಕಾಲುವೆಗಳಿಗೆ ಮತ್ತು ನದಿಗಳಿಗೆ ವಾಹನಗಳು ಉರುಳಿಬಿದ್ದು ಪ್ರಯಾಣಿಕರನ್ನು ಬಲಿತೆಗೆದುಕೊಂಡ ಅನೇಕ ದುರಂತಗಳು ನಡೆದಿವೆ. 1985 ರಲ್ಲಿ ಚಿತ್ರದುರ್ಗ ಜಿಲ್ಲೆ ಹಿರಿಯೂರು ತಾಲೂಕಿನ ಹಳೇ ಯಳನಾಡು ಬಳಿ ವೇದಾತಿ ನದಿಗೆ ಖಾಸಗಿ ಬಸ್ಸೊಂದು ಬಿದ್ದು 19 ಮಂದಿ ಮೃತಪಟ್ಟಿದ್ದರು. 1992 ರಲ್ಲಿ ದಾವಣಗೆರೆ ಜಿಲ್ಲೆ ಹರಿಹರ ತಾಲೂಕು ...ಗೊಂದಿ ಗ್ರಾಮದ ಬಳಿ ಹರಿಹರ – ಶಿವಮೊಗ್ಗ ರಾಜ್ಯ ಹೆದ್ದಾರಿಯಲ್ಲಿ ಸೂಳೆಕೆರೆ ಹಳ್ಳಕ್ಕೆ ನಿರ್ಮಿಸಿರುವ ಸೇತುವೆ ಮೇಲಿಂದ ಬಸ್ ಹಳ್ಳಕ್ಕೆ ಉರುಳಿದಾಗ 15 ಜನ ಅಸುನೀಗಿದ್ದರು. 1997 ರಲ್ಲಿ ಚಿತ್ರದುರ್ಗ ನಗರದ ಮಧ್ಯದಲ್ಲಿರುವ ಸಂತೆ ಹೊಂಡಕ್ಕೆ ಖಾಸಗಿ ಬಸ್ ಬಿದ್ದು 61 ಮಂದಿ ಮರಣ ಹೊಂದಿದ್ದರು. 1999 ರ ಜೂನ್ ತಿಂಗಳಲ್ಲಿ ದಾವಣಗೆರೆಯಿಂದ ಹೊರಟಿದ್ದ ಖಾಸಗಿ ಬಸ್ ಹರಿಹರ ತಾಲೂಕು ದೇವರ ಬೆಳಕೆರೆ ಪಿಕಪ್ ಜಲಾಶಯಕ್ಕೆ ಬಿದ್ದು 94 ಜನ ಸಾವನ್ನಪ್ಪಿದ್ದರು. ಅದೇ ವರ್ಷ ಹರಪನಹಳ್ಳಿ ತಾಲೂಕು ಉಚ್ಚಂಗಿ ದುರ್ಗದಲ್ಲಿ ಅರಿಶಿಣ ಹೊಂಡಕ್ಕೆ ಬಸ್ ಉರುಳಿ ಬಿದ್ದು 41 ಜನ ಬಲಿಯಾಗಿದ್ದರು. 2005 ಜನವರಿ ತಿಂಗಳಲ್ಲಿ ವಿಜಾಪುರ ಜಿಲ್ಲೆ ನಿಡಗುಂದಿ ಸಮೀಪದ ಆಲಮಟ್ಟಿ ಎಡದಂಡೆ ಕಾಲುವೆಗೆ ರಾಜ್ಯ ರಸ್ತೆ ಸಾರಿಗೆ ಬಸ್ ಉರುಳಿ ಬಿದ್ದು 18 ಮಹಿಳೆಯರು, ಇಬ್ಬರು ಮಕ್ಕಳು ಸೇರಿ ಒಟ್ಟು 57 ಜನ ಸಾವಿಗೀಡಾಗಿದ್ದರು. 2006 ರಲ್ಲಿ ಆಲಮಟ್ಟಿ ಅಣೆಕಟ್ಟೆ ಸಮೀಪ ಕೃಷ್ಣಾ ನದಿಗೆ ಮ್ಯಾಕ್ಸಿಕ್ಯಾಬ್ ಉರುಳಿ 27 ಜನ ಜಲಸಮಾಧಿಯಾಗಿದ್ದರು. 2009 ರಲ್ಲಿ ಮೊಳಕಾಲ್ಮುರು ತಾಲೂಕು ಚೆನ್ನೋಬನಹಳ್ಳಿ ಬಳಿ ಚಿನ್ನಹಗರಿ ನದಿಗೆ ಎತ್ತಿನಗಾಡಿಯೊಂದು ಉರುಳಿ ಬಿದ್ದ ಪರಿಣಾಮವಾಗಿ 22 ಮಂದಿ ಮೃತಪಟ್ಟಿದ್ದರು. 2010 ರ ಡಿಸೆಂಬರ್ ತಿಂಗಳಲ್ಲಿ ಮೈಸೂರು – ನಂಜನಗೂಡು ನಡುವೆ ಇರುವ ಉಂಬತ್ತಿ ಕೆರೆಗೆ ಮ್ಯಾಕ್ಸಿಕ್ಯಾಬ್ ಉರುಳಿ ಬಿದ್ದು ಮೂರು ಕಂದಮ್ಮಗಳು ಸೇರಿದಂತೆ 23 ಮಂದಿ ಸಾವನ್ನಪ್ಪಿದ್ದರು.

ಇಂತಹ ದುರಂತಗಳು ಸಂಭವಿಸಿದಾಗೊಮ್ಮೆ ಪುಢಾರಿ ರಾಜಕಾರಣಿಗಳು ಮೊಸಳೆ ಕಣ್ಣೀರು ಸುರಿಸುತ್ತಾರೆ. ಮಂತ್ರಿಗಳು ಮೃತರ ಕುಟುಂಬಗಳಿಗೆ ಪರಿಹಾರ ಹಾಗೂ ಗಾಯಾಳುಗಳಿಗೆ ಉಚಿತ ಚಿಕಿತ್ಸೆಯ ಭರವಸೆಯನ್ನು ಘೋಷಿಸುತ್ತಾರೆ. ವಿರೋಧ ಪಕ್ಷಗಳ ನಾಯಕರು ಆಡಳಿತ ಪಕ್ಷದವರನ್ನು (ತಾವು ಹಿಂದೆ ಅಧಿಕಾರದಲ್ಲಿದ್ದಾಗ ಏನೂ ಮಾಡದಿರುವುದನ್ನು ಮರೆಮಾಚಿ) ಒಂದೆರಡು ಬಾರಿ ಹಿಗ್ಗಾಮುಗ್ಗಾ ಟೀಕಿಸಿ ಸುಮ್ಮನಾಗುತ್ತಾರೆ. ಇಂತಹ ದುರ್ಘಟನೆಗಳು ನಡೆದಾಗ ಸಾರ್ವಜನಿಕರೂ ಸಹ ಒಂದೆರಡು ದಿನ ತಮ್ಮ ಆತಂಕ, ಆಕ್ರೋಶ ವ್ಯಕ್ತಪಡಿಸುತ್ತಾರೆ. ಕೆರೆ ಏರಿಗಳ ಮೇಲಿರುವ ರಸ್ತೆಗಳ ಎರಡೂ ಬದಿಗೆ ತಡೆಗೋಡೆ ನಿರ್ಮಿಸಬೇಕೆಂದು ಸರ್ಕಾರಕ್ಕೆ ಸಲಹೆ ನೀಡುತ್ತಾರೆ. ಗುಜರಿಗೆ ಹಾಕಬೇಕಾದ ಆಯುಷ್ಯ ಮುಗಿದಿರುವ ಹಳೆಯ ಬಸ್‌ಗಳನ್ನು ರಸ್ತೆಯ ಮೇಲೆ ಬಿಡಬಾರದೆಂದು ಒತ್ತಾಯಿಸುತ್ತಾರೆ. ಇಂತಹ ಚರ್ಚೆ ಅಲ್ಲಲ್ಲಿ ಜೋರಾಗಿಯೇ ನಡೆಯುತ್ತದೆ. ಆನಂತರ ಎಲ್ಲರೂ ಸೇರಿ ಆ ವಿಷಯವನ್ನೇ ಮರೆಯುತ್ತಾರೆ, ಮತ್ತೊಂದು ಬಸ್ಸಿನ ಪ್ರಯಾಣಿಕರು ಕೆರೆಗೆ ಹಾರ ಆಗುವ ತನಕ!


ಸಂಚಾರಕ್ಕೆ ಸುರಕ್ಷಿತವಲ್ಲದ ಇಂತಹ ಅಪಾಯಕಾರಿ ರಸ್ತೆಗಳು ರಾಜ್ಯದೆಲ್ಲೆಡೆ ಇವೆ. ಕೆರೆ ಏರಿಯ ಮೇಲಿನ ರಸ್ತೆಗಳು ಬಹುತೇಕವಾಗಿ ವಾಹನ ಸಂಚಾರಕ್ಕೆ ಸುರಕ್ಷಿತವಾಗಿ ಇರುವುದೇ ಇಲ್ಲ. ಎರಡೆರಡು ವಾಹನಗಳು ಈ ರಸ್ತೆಗಳ ಮೇಲೆ ಒಟ್ಟಾಗಿ ಸಂಚರಿಸುವುದು ಸಾಧ್ಯವೇಇಲ್ಲ. ವಿರುದ್ಧ ಧಿಕ್ಕಿನಿಂದ ಇನ್ನೊಂದು ವಾಹನ ಬಂದರೆ ಪರಸ್ಪರ ಡಿಕ್ಕಿ ಹೊಡೆಯುವ ಇಲ್ಲವೆ ಎರಡರಲ್ಲಿ ಒಂದು ವಾಹನ ಕೆರೆಗೆ ಜಾರುವ ಪರಿಸ್ಥಿತಿ ಇರುತ್ತದೆ. ಪ್ರಯಾಣಿಕರು ತಮ್ಮ ಜೀವವನ್ನು ಕೈಯಲ್ಲಿ ಹಿಡಿದಿಟ್ಟು ಕೊಳ್ಳಬೇಕಾಗುತ್ತದೆ.

ಕೆರೆ ಏರಿಗಳ ಮೇಲಿನ ಇಕ್ಕಡೆಗಳಲ್ಲಿ ತಡೆಗೋಡೆಗಳನ್ನು ನಿರ್ಮಿಸಬೇಕೆಂಬ ಸೂಚನೆ ವ್ಯಾಪಕವಾಗಿ ಕೇಳಿಬರುತ್ತಿದೆ. ತಡೆಗೋಡೆಗಳ ನಿರ್ಮಾಣ ಆಗಬೇಕು. ಆ ಬಗ್ಗೆ ಎರಡು ಮಾತಿಲ್ಲ. ಆದರೆ ತಡೆಗೋಡೆಗಳಿಂದ ಮಾತ್ರ ಇಂತಹ ದುರಂತಗಳನ್ನು ತಪ್ಪಿಸಲು ಸಾಧ್ಯವಿಲ್ಲ. ತಡೆಗೋಡೆಗಳಿಗೆ ಡಿಕ್ಕಿಹೊಡೆದು ವಾಹನಗಳು ಕೆಳಕ್ಕೆ ಉರುಳುವ ಸಾಧ್ಯತೆ ಇದ್ದೇ ಇದೆ. ಆಗಬೇಕಾದದ್ದು ರಸ್ತೆಗಳ ಅಗಲೀಕರಣ. ಕೆರೆ ಏರಿಗಳ ಮೇಲಿನ ರಸ್ತೆಗಳು ಎಷ್ಟೋ

ಪುಟ 4 ಕ್ಕೆ

ಕಾಂಗ್ರೆಸ್ ಕಿತ್ತಾಟ:

ಆಡಳಿತ ಅಡ್ಡ ಹಾದಿ ಹಿಡಿಯದೇ?



ಜಾತಿ ಸಮೀಕರಣದಿಂದಲೇ ಅಧಿಕಾರವನ್ನು ಕ್ರೋಢೀಕರಿಸಿಕೊಳ್ಳಲು ರಾಜ್ಯದ ಕಾಂಗ್ರೆಸ್ ಕಸರತ್ತು ಮಾಡುತ್ತಿರುವಾಗಲೇ ಸ್ವತಃ ಅದೇ ಜಾತಿವಾದದ ಉರುಳಿಗೆ ತಲೆಯೊಡ್ಡಬೇಕಾದ ಆಂತರಿಕ ಬೇಗುದಿಗೆ ಅದು ಸಿಲುಕಿದೆ. ಒಡೆದ ಮನೆಯಾಗಿರುವ ಕಾಂಗ್ರೆಸ್ ತನ್ನ ಗುಂಪುಗಾರಿಕೆಯ ತೀವ್ರತೆಯನ್ನು ಅಧಿಕಾರದ ಕುರ್ಚಿ ಅರಸುತ್ತಿರುವ ಅದರ ನಾಯಕರೇ ಆಗೀಗ ಹೊರ ಹಾಕುವುದು ನಿತ್ಯದ ಮಾತಾಗುತ್ತಿದೆ. ಕೆಪಿಸಿಸಿಯ ರಾಜ್ಯಾಧ್ಯಕ್ಷರಾದ ಡಾ.ಪರಮೇಶ್ವರ್ ತಮ್ಮನ್ನು ಉಪ ಮುಖ್ಯಮಂತ್ರಿಯನ್ನಾಗಿಸಬೇಕೆಂದು ಬಹಿರಂಗವಾಗಿ ವಾದಿಸುತ್ತಾ, ಎಸ್. ಎಂ.ಕೃಷ್ಣರಂತಹ ಕೆಲ ಮಾಜಿ ಭಗ್ನ ಕನಸಿನ ಮುಖಂಡರ ಜೊತೆ ಲಾಭಿಗೆ ಓಡಾಡುತ್ತಾರೆ. ಕೃಷ್ಣರ ಆಪ್ತ ವಲಯದ ಡಿ.ಕೆ.ಶಿವಕುಮಾರ್ ಒಮ್ಮೆ ದೆಹಲಿಯಲ್ಲಿ ಹೈಕಮಾಂಡ್‌ನ ಬಾಗಿಲ ಮುಂದೆ ನಿಂತು 'ಕೆಮ್ಮು'ತ್ತಾರೆ, ಇನ್ನೊಮ್ಮೆ ಇಲ್ಲಿ 'ಕಾಲು ಕೆರೆ'ಯುತ್ತಾರೆ. ಕೇಂದ್ರದ ಸಚಿವ ಮಲ್ಲಿಕಾರ್ಜುನ ಖರ್ಗೆಯವರಿಗೆ ಕಾರ್ಮಿಕ ಖಾತೆಯಿಂದ ರೈಲ್ವೇ ಖಾತೆಗೆ ಬಡ್ತಿ ದೊರೆಕಿದ್ದು ಅಷ್ಟು ತೃಪ್ತಿ ತಂದಂತಿಲ್ಲ. ಸಿದ್ಧರಾಮಯ್ಯನವರು ತಮ್ಮ ಕ್ಯಾಬಿನೇಟ್ 'ಜನತಾ ಕಾಂಗ್ರೆಸ್ ಕ್ಯಾಬಿನೆಟ್' ಎಂಬ ಟೀಕೆಯನ್ನು ಆಗೀಗ ಕೇಳಿಸಿಕೊಳ್ಳುತ್ತಲೇ ಇರಬೇಕಾಗಿದೆ.

ಇದರೊಂದಿಗೆ ಮಾನ್ಯ ರಾಜ್ಯಪಾಲರು ಈ ಸರಕಾರದ ವಿರುದ್ಧ ಬಂಡಾಯದ ಭಾವುಟವನ್ನುಹಾರಿಸುವ ಮುನ್ಸೂಚನೆ ನೀಡಿದ್ದಾರೆ. 'ಈ ಸರಕಾರಕ್ಕೆ ನನ್ನ ಸಹಕಾರ ಅಗತ್ಯವಿಲ್ಲವೆಂದರೆ ಹೇಳಿ ಬಿಡಲಿ' ಎಂದೂ 'ನಾನು ಒಬ್ಬಂಟಿ' ಎಂದೂ ಹೇಳಿರುವುದು ಘನವೆತ್ತ ರಾಜ್ಯಪಾಲರ ಅತೀ ಕ್ರಿಯಾಶೀಲತೆಯ ಲೆಕ್ಕಾಚಾರ ಬಲ್ಲವರಿಗೆ ಅರ್ಥವೇನೆಂದು ತಿಳಿಯದ್ದೇನಲ್ಲ! ಈ ಭರದಲ್ಲಿ ವೈವಿಧ್ಯತೆ , ಬಹುಸಂಸ್ಕೃತಿಗಳನ್ನು ಪ್ರತಿಪಾದಿಸುತ್ತಿದ್ದ ರಾಜ್ಯಪಾಲರು ಸಂಸ್ಕೃತವೇ ಎಲ್ಲಾಭಾಷೆಗಳ ತಾಯಿಯೆಂದು ಹೇಳಿ ಇಂತಹ ಭಾಷೆಯ ವಿಶ್ವವಿದ್ಯಾಲಯವನ್ನು ಸರಕಾರ ಪೂರ್ಣ ನಿರ್ಲಕ್ಷಿಸಿದೆಯೆಂದು ಆರೋಪಿಸಿದ್ದಾರೆ. ಹೀಗೆ ಮುಂದೆ ಸೆಪ್ಟಂಬರ್‌ವರೆಗಿನ ಅವರ ಅವಧಿಯಲ್ಲಿ ಬರಲಿರುವ ಖ್ಯಾತೆ ಪ್ರಸಂಗಗಳ ಮುನ್ಸೂಚನೆ ನೀಡಿದ್ದಾರೆ. 'ಮಾತು ಕೇಳದಿದ್ದರೆ ಕಿವಿ ಹಿಂಡಿಸಿ' ಕೊಳ್ಳುವ ಸರದಿ ಈ ಕೈ ಸರಕಾರದ್ದು.

ಕಾಂಗ್ರೆಸ್‌ನೊಳಗಿನ ಕದನ ಇಷ್ಟಕ್ಕೇ ನಿಲ್ಲದೇ ಸರಕಾರದ ನಿತ್ಯದ ವ್ಯವಹಾರಗಳನ್ನೂ ಭಾಧಿಸತೊಡಗಿದೆ. ನಮ್ಮ ಸರಕಾರದಲ್ಲೊಂದು ತೆರಿಗೆ ವಿಚಕ್ಷಣಾ ದಳ ಎಂಬುದೊಂದಿದೆ. ಆದಾಯದ ಲೆಕ್ಕ ಪತ್ರಗಳ ಪರಿಶೀಲನೆ, ಅದಕ್ಕನುಗುಣವಾದ ತೆರಿಗೆ ಪಾವತಿಯ ಖಾತ್ರಿಯನ್ನು , ಆಗಿರಬಹುದಾದ ಅಕ್ರಮಗಳನ್ನು ಅದು ಪರಿಶೀಲಿಸುವುದು ಮುಖ್ಯ ಕರ್ತವ್ಯ. ನಮ್ಮ ಸರಕಾರದ ಆದಾಯದ ಮೂಲಗಳಲ್ಲಿ ತೆರಿಗೆ ಸಂಗ್ರಹವೂ ಒಂದು. ಹೀಗಾಗಿ ಅದು ತನ್ನ ಪಾಲಿನ ಕೆಲಸವನ್ನು ಮಾಡಲೇಬೇಕಿದೆ. ಈ ಹಿನ್ನೆಲೆಯಲ್ಲಿ ಮೊನ್ನೆ ಈ ದಳ ರಾಜ್ಯದ ಐದು ಕಡೆ ಶಿಕ್ಷಣ ಸಂಸ್ಥೆಗಳ ಆಡಳಿತ ಕಛೇರಿಗಳ ಮೇಲೆ ಧಾಳಿ ನಡೆಸಿತ್ತು. ಹಲವು ದಾಖಲೆಗಳನ್ನು ವಶಪಡಿಸಿಕೊಂಡು ಆಡಳಿತ ಕಛೇರಿಗಳಿಗೆ ಕೆಲವೆಡೆ ಬೀಗ ಜಡಿದಿತ್ತು. ಆದಿಚುಂಚನಗಿರಿ ಮಠ, ಡಿ.ಕೆ.ಶಿ.ಸಂಸ್ಥೆಗಳು , ಹೈ.ಕ . ಶಿಕ್ಷಣ ಸಂಸ್ಥೆಗಳಂತಹ 'ಪ್ರತಿಷ್ಟಿತ'ರ ಸಂಸ್ಥೆಗಳು ಇದರಲ್ಲಿದ್ದುದರಿಂದ ಮಾಧ್ಯಮಗಳ ರಂಗಿನ ಹಲ್ಲುಗಳಿಗೆ ರಸಗವಳವಾಗಿತ್ತು. ಇದನ್ನೇ ಬಳಸಿಕೊಂಡ ಕಾಂಗ್ರೆಸ್ ನ ಒಂದು ಗುಂಪು, ಬಿಜೆಪಿ ಮತ್ತು ಜೆಡಿ ಎಸ್ ನ ನಾಯಕರು ತೋಳೇರಿಸಿ, ಅವುಡುಗಚ್ಚಿ ಸರಕಾರದ ಮೇಲೆ ಪ್ರಹಾರ ಹಾಕಿದರು. ಆದಿಚುಂಚನಗಿರಿ ಮಠದ ಮೇಲೆಯೇ, ಇಡೀ ಒಕ್ಕಲಿಗರ

ಪುಟ 4 ಕ್ಕೆ



ಚಳ್ಳಕೆರೆ: ಕಾರ್ಮಿಕರ ಪ್ರತಿಭಟನೆ.

ಕೇಂದ್ರ ಮತ್ತು ರಾಜ್ಯ ಕಾಂಗ್ರೆಸ್ ಸರ್ಕಾರಗಳು ದುಡಿಯುವ ವರ್ಗವನ್ನು ಕಡೆಗಣಿಸುತ್ತಿದ್ದು, ಕಾರ್ಮಿಕ ವರ್ಗವನ್ನು ಬೀದಿಗೆ ಬೀಳುವಂತೆ ಮಾಡಿವೆ ಎಂದು ಸಿಐಟಿಯು ನೇತೃತ್ವದಲ್ಲಿ ನೂರಾರು ಕಾರ್ಮಿಕರು ಜೂನ್ 14 ರಂದು ಚಳ್ಳಕೆರೆ ತಾಹಶೀಲ್ದಾರ್ ಕಛೇರಿ ಮುಂಭಾಗದಲ್ಲಿ ಘೋಷಣೆಗಳನ್ನು ಕೂಗುತ್ತಾ ಪ್ರತಿಭಟನೆ



ನಡೆಸಿದರು.

ಈ ಸಂದರ್ಭದಲ್ಲಿ ಸಿಐಟಿಯುನ ಜಿಲ್ಲಾ ಕಾರ್ಯದರ್ಶಿಯಾದ ಟಿ.ತಿಪ್ಪೇಸ್ವಾಮಿ ಮಾತನಾಡುತ್ತಾ ಕೇಂದ್ರ ಸರ್ಕಾರವು ಕಾರ್ಮಿಕ ವರ್ಗವನ್ನು ಕಡೆಗಣಿಸುತ್ತಾ ಬಂದಿದೆ. ದುಡಿಯುವ ವರ್ಗಕ್ಕೆ ಕನಿಷ್ಠ ಮೂಲ ಸೌಕರ್ಯಗಳನ್ನು ಕಲ್ಪಿಸದೇ ಜನವಿರೋಧಿ ಆಡಳಿತ ನಡೆಸುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ವಿದೇಶಿ ಮತ್ತು ದೇಶಿಯ ಬಂಡವಾಳಗಾರರ ಲಾಭಕ್ಕಾಗಿ ಮತ್ತು ಸರ್ಕಾರಗಳು ಅವರೊಂದಿಗೆ ಶಾಮೀಲಾಗಿ ಇವತ್ತು ಎಲ್ಲಾ ಅಗತ್ಯ ವಸ್ತುಗಳ ಬೆಲೆಗಳನ್ನು ದಿನನಿತ್ಯ ಏರಿಕೆ ಮಾಡುವುದನ್ನೇ ಮಾಡಿಕೊಂಡು ಬಡವರು ಏನು ಕೊಳ್ಳಲಾರದೇ ಹೊಟ್ಟೆ ಮೇಲೆ ತಣ್ಣೀರು ಬಟ್ಟೆ ಹಾಕಿ ಕೊಳ್ಳುವ ಪರಿಸ್ಥಿತಿಯನ್ನು ಕೇಂದ್ರದ ಕಾಂಗ್ರೆಸ್ ಸರ್ಕಾರವು ಮಾಡಿದೆ. ಎಂದು ಆರೋಪ ಮಾಡಿದರು.

ಮುಂದುವರಿದು ಮಾತನಾಡುತ್ತಾ ಕಾರ್ಮಿಕರ ಹಿತರಕ್ಷಣೆಗಾಗಿ ಮಾಡಿದ ಕಾರ್ಮಿಕ ಕಾನೂನುಗಳನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸದೇ ಸರ್ಕಾರ ಬೇಜವಾಬ್ದಾರಿತನ ಪ್ರದರ್ಶಿಸುತ್ತಿದೆ. ಎಲ್ಲಾ ಕಾರ್ಮಿಕರಿಗೂ ಸಾಮಾಜಿಕ ಭದ್ರತೆ ಒದಗಿಸಲು ಹಣಕಾಸು ಸಂಪನ್ಮೂಲ ಒದಗಿಸುವ ಕ್ರಮಗಳನ್ನು ಕೈ ಗೊಂಡಿಲ್ಲ. ಎಂದು ಕಿಡಿಕಾರಿದರು.

ಚಳ್ಳಕೆರೆ ಎಪಿಎಂಸಿಯ ಅವರಣದಲ್ಲಿ ಕೆಲಸ ನಿರ್ವಹಿಸುವ ಹಮಾಲಿ ಕಾರ್ಮಿಕರು ಸುಮಾರು 12 ವರ್ಷಗಳಿಂದ ವಸತಿ ನಿವೇಶನಗಳ ಕೊಡಬೇಕೆಂದು ಹೋರಾಟಗಳನ್ನು ಮಾಡುತ್ತಾ ಬಂದಿದ್ದರೂ ಸಹ ಅಧಿಕಾರಿಗಳಾಗಲಿ, ಸ್ಥಳೀಯ ಶಾಸಕರಾಗಲಿ, ಸರ್ಕಾರವಾಗಲಿ ಇಲ್ಲಿಯವರೆಗಾದರೂ ಕ್ರಮ ಕೈಗೊಳ್ಳದೇ ಇರುವುದು ನಾಚಿಗೇಡಿನ ಸಂಗತಿಯಾಗಿದೆ ಎಂದು ಹೇಳುತ್ತಾ ಹಮಾಲಿ ಕಾರ್ಮಿಕರಿಗೆ ಜಮೀನು ಖರೀದಿ ಮಾಡಿ ನಿವೇಶನ ಮತ್ತು ವಸತಿಯನ್ನು ಮುಂಜೂರಾತಿ ಮಾಡಿಸಿ ಕೊಡಬೇಕೆಂದು ಒತ್ತಾಯ ಮಾಡಿದರು.

ಮತ್ತೊಬ್ಬ ಸಿಐಟಿಯುನ ಮುಖಂಡರಾದ ಕೆ.ವಿ.ವೀರಭದ್ರಪ್ಪ ಮಾತನಾಡುತ್ತಾ ಹತ್ತಾರು ವರ್ಷಗಳಿಂದ ಇಲ್ಲಿನ ಕೃಷಿ ಮಾರುಕಟ್ಟೆಯಲ್ಲಿ ಹಮಾಲಿ ಕಾರ್ಮಿಕರಾಗಿ ಕೆಲಸ ಮಾಡುತ್ತಾ ಬಂದಿರುವ ಬಡವರಿಗೆ ಸರಿಯಾದ ರೀತಿಯಲ್ಲಿ ಬಿಪಿಎಲ್ ಪಡಿತರ ಚೀಟಿ ವಿತರಿಸದೇ ರೇಷನ್ ನೀಡುವಲ್ಲಿ ತಾರತಮ್ಯ ಮಾಡಿ ರೇಷನ್‌ನನ್ನು ಕಾಳ ಸಂತೆಯಲ್ಲಿ ನ್ಯಾಯ ಬೆಲೆ ಅಂಗಡಿಯವರು ಮಾರಾಟ ಮಾಡಿಕೊಳ್ಳುತ್ತಿದ್ದಾರೆ, ಇದರ ಬಗ್ಗೆ ನಾವು ಸಾಕಷ್ಟು ಸಾರಿ ಮನವಿ ಮೂಲಕ ತಹಶೀಲ್ದಾರ್‌ರವರೆಗೆ ತಿಳಿಸಿದರೂ ಸಹ ಅಧಿಕಾರಿಗಳು ಬಡವರ ಕೂಗನ್ನು ಗಮನಕ್ಕೆ ತೆಗೆದು ಕೊಳ್ಳುತ್ತಿಲ್ಲ. ಇನ್ನೂ ಮುಂದೆ ನೀವು ಇದರ ಬಗ್ಗೆ ಕ್ರಮ ಕೈಗೊಳದಿದ್ದರೆ ನಾವು ತಮ್ಮ ಕಛೇರಿಗೆ ಮುತ್ತಿಗೆ ಹಾಕಬೇಕಾಗುತ್ತದೆ ಎಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು.

ಕಾರ್ಮಿಕ ಸಂಘಟನೆಗಳ ಒಕ್ಕೂಟದ ಅಧ್ಯಕ್ಷರಾದ ಟಿ.ನಿಂಗಣ್ಣನವರು ಮಾತನಾಡುತ್ತಾ ಎಲ್ಲಾ ಹಮಾಲಿ ಕಾರ್ಮಿಕರಿಗೂ ರಾಷ್ಟ್ರೀ[illegible] ಸ್ವಾಸ್ಥ್ಯ ಭೀಮಾ ಯೋಜನೆಯ[illegible] ಜಾರಿಗೊಳಿಸಲು ಕೇಂದ್ರ ಸರ್ಕಾರಕ್ಕೆ ರಾ[illegible] ಸರ್ಕಾರ ಶಿಫಾರಸು ಮಾಡಬೇಕು, ಜನ[illegible] ಭೀಮಾ ಯೋಜನೆಯನ್ನು ಕಾರ್ಮಿ[illegible] ಇಲಾಖೆಯಿಂದ ಜಾರಿಯಾಗುವಂತೆ ಕ್ರ[illegible] ವಹಿಸಬೇಕು, ಕೃಷಿ ಮಾರುಕಟ್ಟೆ ಹಮಾ[illegible] ಕಾರ್ಮಿಕರ ಕಲ್ಯಾಣ ನಿಧಿ ಸ್ಥಾಪಿಸ[illegible] ಕ್ರಮತೆಗೆದುಕೊಳ್ಳಬೇಕು, ಕಾರ್ಮಿಕರ ಕೂ[illegible] ಪರಿಷ್ಕರಣೆ ಮಾಡಬೇಕು ಎಂದು ಸರ್ಕಾ[illegible] ಒತ್ತಾಯಿಸಿದರು.

ಈ ಪ್ರತಿಭಟನೆ ಕಾರ್ಯಕ್ರಮ[illegible] ಅಂಗವಾಗಿ ಎಪಿಎಂಸಿ ಯಾರ್ಡ್ ನಿಂ[illegible] ಸುಮಾರು ನಾಲ್ಕು ನೂರಕ್ಕೂ ಹೆ[illegible] ಕಾರ್ಮಿಕರು ಮೆರವಣಿಗೆ ಮಾಡುತ್ತಾ ಸರ್ಕಾ[illegible] ಧೋರಣೆಗಳ ವಿರುದ್ದ ಘೋಷಣೆಗಳನ[illegible] ಕೂಗುತ್ತಾ ತಾಲ್ಲೂಕು ಕಾರ್ಯಾಲಯ[illegible] ಬಂದು ಮಾನ್ಯ ತಹಶೀಲ್ದಾರ್‌ರವರಿ[illegible] ಮನವಿ ಪತ್ರವನ್ನು ಸಲ್ಲಿಸಿದರು.

ಈ ಕಾರ್ಯಕ್ರಮದಲ್ಲಿ ಈ. ನಾಗರಾಜ[illegible] ಎಸ್.ರಾಜಣ್ಣ, ಕೆ.ಬಿ.ಜಯಣ್ಣ, ಕೆ.ಚಂದ್ರನಾ[illegible] ಬಿ.ಪಿ.ಬೊಮ್ಮಯ್ಯ, ಎಸ್.ನಾಗರಾಜ[illegible] ಎಸ್.ಸುರೇಶ್, ಹೆಚ್.ಟಿ.ರಾಜು, ತಳಕಿ[illegible] ಅಯೂಬ್, ಪರಶುರಾಂಪುರ ರಾಜಣ್[illegible] ಇನ್ನೂ ಇತರರು ಮುಖಂಡತ್ವವನು[illegible] ವಹಿಸಿಕೊಂಡಿದ್ದರು.

– ವರದಿ : ಟಿ.ತಿಪ್ಪೇಸ್ವಾಮಿ, ಚಳ್ಳಕೆರೆ

ಆಡಳಿತ ಅಡ್ಡ ಹಾದಿ.....

ಪುಟ 3 ರಿಂದ

ಮೇಲೆಯೇ ರೈಡ್ ಮಾಡಲಾಗಿದೆಯೆಂದೂ ಅಬ್ಬರಿಸಿದರು. ಈ ಮೊದಲು ಕುಮಾರಸ್ವಾಮಿ ಒಕ್ಕಲಿಗರನ್ನು ಜಾತಿ ಪ್ರಚೋದನೆಯಿಂದ ಎತ್ತಿ ಕಟ್ಟುವ (ಸಿದ್ದು ಮೇಲಿನ ಕೋಪ ಮತ್ತು ಸಂಸದರ ಉಪಚುನಾವಣೆಯ ಮತ ಕ್ರೋಢೀಕರಣ ಲೆಕ್ಕ ಸೇರಿ) ಒಂದು ಸುತ್ತಿನ ಆರೋಪದ ವಾತಾವರಣದ ಭೂಮಿಕೆಯನ್ನು ಸೃಷ್ಟಿಸಿದ್ದರು. ಇಲ್ಲಿ ಇಲಾಖೆಯೊಂದರ ಕರ್ತವ್ಯವನ್ನು ಶ್ಲಾಘಿಸುವುದಿರಲಿ, ತಾಳ್ಮೆಯಿಂದ ಸುಮ್ಮನಿದ್ದರೂ ಸಾಕಾಗಿತ್ತು. ಆದರೆ ಇದು ಒಕ್ಕಲಿಗರ ಮೇಲೆ ಸಿದ್ಧರಾಮಯ್ಯ ನಡೆಸಿದ ಧಾಳಿ ಎಂದು ಜಾತಿ ನೆಲೆಯಲ್ಲಿ ಜನರನ್ನು ಎತ್ತಿ ಕಟ್ಟಲು ಪ್ರಯತ್ನಿಸಿದ್ದು ನಾಚಿಕೆಗೇಡು. ತೆರಿಗೆ ಇಲಾಖೆ ಧಾಳಿ ಸದಾ ನಡೆಯುವುದೆಂದೂ, ಅದು ಕೇವಲ ಒಕ್ಕಲಿಗರ ಮಠಕ್ಕೆ ಸೀಮಿತ ಆಗಿರಲಿಲ್ಲ, ಲಿಂಗಾಯತರೇ ಪ್ರಮುಖವಿರುವ ಸಂಸ್ಥೆಗಳೂ ಇದ್ದವು ಎನ್ನುವ ಕನಿಷ್ಟ ಅರಿವು ಇಲ್ಲದೆ ಜಾತಿ ಪ್ರೇಮದಲ್ಲಿ ಕೊಳೆತದ್ದು ಅಸಹ್ಯಕರ. ಈ ಪ್ರಸಂಗವನ್ನು ಕಾಂಗ್ರೆಸ್‌ನ ಅತೃಪ್ತ ಗುಂಪಿನ ಡಿ.ಕೆ.ಶಿ ಬಹಿರಂಗವಾಗಿ ಠೀಕಿಸಿ ತಮ್ಮದೇ ಸರಕಾರ, ಮುಖ್ಯಮಂತ್ರಿ ವಿರುದ್ದ ಕಿಡಿ ಕಾರಿದ್ದು ಹತಾಶೆ ಮತ್ತು ಗುಂಪುಗಾರಿಕೆಯ ಅತಿರೇಕವನ್ನು ತೋರಿಸಿತು.

ಇಲ್ಲಿ ಗಂಭೀರ ಪ್ರಶ್ನೆಯೆಂದರೆ ಜನತೆ ಬಿಜೆಪಿಯ ದುರಾಡಳಿತದ ವಿರುದ್ಧ ನೆಮ್ಮದಿ, ಪರಿಹಾರ ಬಯಸಿ ಪರ್ಯಾಯವೆಂದು ಭಾವಿಸಿ ಕಾಂಗ್ರೆಸ್ ಪಕ್ಷವನ್ನು ಆರಿಸಿರುವಾಗ ಜನರ ನಿರೀಕ್ಷೆಗಳಿಗೆ ತಕ್ಕುದಾಗಿ ಸ್ಪಂದಿಸದಿದ್ದರೆ ಹೇಗೆ? ಅಧಿಕಾರದ ಹಪಾಹಪಿಯಲ್ಲಿ ಆಳುವ ಪಕ್ಷದಲ್ಲಿಯೇ ಕಿತ್ತಾಟವಿರುವುದು ಆಡಳಿತದ ಮೇಲೆ ದುಷ್ಪರಿಣಾಮ ಬೀರದೇ ಇದ್ದೀತೆ? ಇದನ್ನೇ ಅಧಿಕಾರಶಾಹಿ ಬಳಸಿಕೊಳ್ಳದೇ ಇದ್ದೀತೆ? ಭ್ರಷ್ಟರ ಕೈ ಮೇಲಾಗದೇ ಇದ್ದೀತೇ?. ಕಳೆದ ಬಿಜೆಪಿ ಆಡಳಿತದಲ್ಲಿ ಭ್ರಷ್ಟತೆ, ಭಿನ್ನಮತ- ಬಡಿದಾಟಗಳಿಂದಾಗಿ ಆಡಳಿತ ಯಂತ್ರ ಸಂಪೂರ್ಣವಾಗಿ ಕುಸಿದು ಅರಾಜಕತೆ ಸ್ಥಿತಿಯಲ್ಲಿರುವಾಗ ಅದಕ್ಕೆ ಚುರುಕು ಮುಟ್ಟಿಸಿ ಸರಿ ದಾರಿಗೆ ತರಬೇಕಾದರೆ ಸರಕಾರ ಮತ್ತು ಆಳುವ ಪಕ್ಷದಲ್ಲಿ ಕನಿಷ್ಟ ಒಗ್ಗಟ್ಟು ಅಗತ್ಯ. ಅದರೆ ಆಳುವವರೇ ಹಳಿ ತಪ್ಪಿದಾಗ ಜನರಿಗೆ ಆಗಬಹುದಾದ ಅನಾಹುತ ಹೇಳಲಸಾಧ್ಯ. ಜನತೆ ಇದನ್ನು ಬಯಸುವುದಿಲ್ಲ, ಸಹಿಸುವುದಿಲ್ಲ.

ಕಾಂಗ್ರೆಸ್‌ನಲ್ಲಿಯ ಈ ಬೆಳವಣಿಗೆಗಳು ಜನತೆ ಭ್ರಮನಿರಸನವಾಗುವಂತೆ ಮಾಡುತ್ತಿವೆ, ಮಾತ್ರವಲ್ಲ, ಅದರ ಬಣ್ಣವನ್ನೂ ವೇಗವಾಗಿ ಬಯಲುಗೊಳಿಸುತ್ತಿವೆ. ಈಗಲೂ ಗಣಿ ಹಾಗೂ ಭೂಮಾಫಿಯಾಗಳು ಚುರುಕಾಗಿವೆ. ಅಹಿಂದ ಇಮೇಜಿನಲ್ಲಿ ಏನನ್ನಾದರೂ ಮಾಡಬೇಕೆಂಬ ಉತ್ಸಾಹ ಪ್ರಕಟಿಸಿರುವ ಸಿದ್ಧರಾಮಯ್ಯನವರು ಏನೋ ಹೇಗೋ ಕಾಲ ತಳ್ಳಿದರೆ ಸಾಕು ಎನ್ನುವ ಸ್ಥಿತಿಗೆ ತಲುಪುವುದಿಲ್ಲ ಅಂತಾ ಏನು ಗ್ಯಾರಂಟಿ!

ಕೆರೆ ಏರಿಗಳ.....

ಪುಟ 3 ರಿಂದ

ವರ್ಷಗಳ ಹಿಂದೆ ನಿರ್ಮಿಸಲ್ಪಟ್ಟವುಗಳಾ[illegible] ಗಿರುತ್ತವೆ. ಆ ದಿನಗಳಲ್ಲಿ ಅಂತಹ ರಸ್ತೆಗಳ[illegible] ಮೇಲೆ ವಾಹನ ಸಂಚಾರವೇ ಇರುತ್ತಿರಲಿಲ್ಲ[illegible] ಇವತ್ತು ಅಂತಹ ರಸ್ತೆಗಳು ವಾಹನ[illegible] ಸಂಚಾರಕ್ಕೆ ಯೋಗ್ಯವಾಗಿವೆಯೇ ಇಲ್ಲವೇ[illegible] ಎಂಬುದನ್ನು ಲೋಕೋಪಯೋಗಿ ಇಲಾಖ[illegible] ದೃಢಪಡಿಸಬೇಕು. ರಸ್ತೆ ನಿರ್ಮಾಣ[illegible] ಮತ್ತು ದುರಸ್ತಿಗೆ ಪ್ರತಿವರ್ಷ ಸಾವಿರಾರು[illegible] ಕೋಟಿ ರೂ. ಗಳು ಖರ್ಚಾಗುತ್ತಿದ್ದರೂ[illegible] ರಸ್ತೆಗಳ ಸ್ಥಿತಿ ಸುಧಾರಿಸುತ್ತಿಲ್ಲ. ಗುತ್ತಿಗೆದಾರರ[illegible] ಮತ್ತು ಅಧಿಕಾರಿಗಳ ಅಪವಿತ್ರ ಮೈತ್ರಿಯ[illegible] ಕಾರಣದಿಂದಾಗಿ ಸಾರ್ವಜನಿಕ ಹಣ[illegible] ಪೋಲಾಗುತ್ತದೆ. ಸಾರ್ವಜನಿಕರು ಈ[illegible] ವಿಷಯದಲ್ಲಿ ತಮ್ಮ ಹಕ್ಕುಗಳ ರಕ್ಷಣೆಗಾಗಿ[illegible] ಹೋರಾಡಲು ಮುಂದಾಗಬೇಕು[illegible] ದುರಂತಗಳು ಸಂಭವಿಸಿದಾಗ ಕಳವಳ[illegible] ವ್ಯಕ್ತಪಡಿಸಿದರೆ ಸಾಲದು. ಪ್ರಯಾಣಿಕರ[illegible] ಸುರಕ್ಷತೆಗೆ ಆದ್ಯತೆ ನೀಡುವಂತೆ ಸರ್ಕಾರದ[illegible] ಮೇಲೆ ಒತ್ತಡ ಹೇರಲು ಆಸಕ್ತಿವಹಿಸಬೇಕು[illegible] ಕೆರೆ ಏರಿಗಳ ಮೇಲಿನ ರಸ್ತೆಗಳು ವಾಹನ[illegible] ಸಂಚಾರಕ್ಕೆ ಯೋಗ್ಯವಾಗಿರುವಂತೆ ಹಾಗೂ[illegible] ನಗರ ಹಾಗೂ ಗ್ರಾಮೀಣ ರಸ್ತೆಗಳನ್ನು[illegible] ಶಾಶ್ವತವಾಗಿ ಅಭಿವೃದ್ಧಿ ಪಡಿಸುವಂತ[illegible] ಜನಚಳುವಳಿಗಳನ್ನು ನಡೆಸಬೇಕು. ಜಾಗೃ[illegible] ನಾಗರಿಕರಿಂದ ಮಾತ್ರ ಪ್ರಜಾಪ್ರಭುತ್ವವನ್ನು[illegible] ಜೀವಂತವಾಗಿರಿಸಲು ಸಾಧ್ಯ.

ಜುಲೈ 26, ಕ್ಯೂಬಾ ಬಂಡಾಯದ ದಿನ

ನಿತ್ಯಾನಂದ ಸ್ವಾಮಿ

ರಿಬಿಯನ್ ದ್ವೀಪಗಳಲ್ಲಿ ಕ್ಯೂಬಾ ಅತಿ-ೂಡ್ಡದು. ಸುಮಾರು 1,600 ಚಿಕ್ಕ ಚಿಕ್ಕ ೀಪಗಳು ಕ್ಯೂಬಾದ ಭಾಗವಾಗಿವೆ. ಕ್ಯೂಬಾದ ುತ್ತರಕ್ಕೆ ಕೇವಲ 200 ಕಿ.ಮೀ. ದೂರದಲ್ಲಿ ಮೇರಿಕ ಇದೆ. ಸಿಯೆರಾ ಮೇಸ್ತ್ರಾ ಕ್ಯೂಬಾದ ತಿ ದೊಡ್ಡ ಪರ್ವತ. ಅದುವೇ ್ಯೂಬಾ ಕ್ರಾಂತಿಯ ತೊಟ್ಟಿಲು.

18ನೇ ಶತಮಾನದಲ್ಲಿ ಕ್ಯೂಬಾ ್ಪೈನ್ ದೇಶದ ಒಂದು ವಸಾಹತು ಗಿತ್ತು. ಅಕ್ಟೋಬರ್ 10, 1868 ಂದು ದೇಶಪ್ರೇಮಿ ಗುಂಪೊಂದು ್ವಾತಂತ್ರ್ಯಕ್ಕಾಗಿ ಚಳುವಳಿಯನ್ನು ಆರಂಭಿಸಿತು. ಹೋರಾಟದಲ್ಲೇ ಂವಿಧಾನವೊಂದನ್ನು ...ಸಲಾಯಿತು. ಸಂವಿಧಾನದಲ್ಲಿ, ುಲಾಮಗಿರಿಗೆ ಅವಕಾಶವಿಲ್ಲದ ್ವತಂತ್ರ, ಪ್ರಜಾಸತ್ತಾತ್ಮಕ ದೇಶವೊಂದನ್ನು ಚಿತ್ರಿಸಲಾಗಿತ್ತು. ಈ ಹೋರಾಟ ಸುಮಾರು 30 ವರ್ಷಗಳ ಕಾಲ ನಡೆಯಿತು. ಆದರೆ ಹೋರಾಟಗಾರರ ನಡುವಿನ ಭಿನ್ನಾಭಿಪ್ರಾಯಗಳನ್ನು ಬಳಸಿಕೊಂಡು ಸ್ಪೈನ್ ವಸಾಹತುಶಾಹಿಗಳು ಹೋರಾಟವನ್ನು ಸೋಲಿಸಿದರು.

ವಸಾಹತುಶಾಹಿ ಶೋಷಣೆ ತೀವ್ರಗೊಳ್ಳುತ್ತಾ ಹೋದಂತೆ ಕ್ಯೂಬಾ ಜನತೆಯ ಪ್ರತಿರೋಧವೂ ಬೆಳೆಯತೊಡಗಿತು. 1895 ರಲ್ಲಿ ಜೋಸ್ ಮಾರ್ಟಿ ಎಂಬ ಜನಾನುರಾಗಿ ಹೋರಾಟಗಾರರೊಬ್ಬರು 'ಕ್ಯೂಬಾ ಕ್ರಾಂತಿ ಪಕ್ಷ'ವನ್ನು ಸ್ಥಾಪಿಸಿ ಎರಡನೇ ಸ್ವಾತಂತ್ರ್ಯ ಹೋರಾಟವನ್ನು ಆರಂಭಿಸಿದರು. ಆದ-ರೆ ಅವರು ಹೋರಾಟದಲ್ಲೇ ಸಾವನ್ನಪ್ಪಿ ಹುತಾತ್ಮರಾದರು. ಅವರು ಒಬ್ಬ ಕವಿ ಹಾಗೂ ...ಕರು ಸಹ ಆಗಿದ್ದರು. ಅವರ ವಿಚಾರ ಹಾಗೂ ಬಲಿದಾನದಿಂದ ಪ್ರಭಾವಿತರಾದ ಕ್ಯೂಬಾ ಜನತೆ ಅವರನ್ನು ಕ್ಯೂಬಾದ 'ಕ್ರಾಂತಿದೂತ' ಎಂದು ಗೌರವಿಸುತ್ತಾರೆ. ಅವರು ಕ್ಯೂಬಾದ ಎಲ್ಲ ಕ್ರಾಂತಿಕಾರಿಗಳಿಗೆ ಸ್ಫೂರ್ತಿಯ ಸೆಲೆಯಾಗಿದ್ದರು.

ಕ್ಯೂಬಾ ಸ್ಪೈನ್ ವಸಾಹತುಶಾಹಿಗಳ ವಿರುದ್ಧ ಹೋರಾಟ ನಡೆಸುತ್ತಿದ್ದಾಗ, 1896 ರಲ್ಲಿ ಅಮೇರಿಕ ಮಧ್ಯಪ್ರವೇಶ ಮಾಡಿತು. ಇದು ಅಮೇರಿಕ ಮೊಟ್ಟಮೊದಲ ಮಧ್ಯಪ್ರವೇಶವಾಗಿತ್ತು. ಅಮೇರಿಕ ಕ್ಯೂಬಾ ಜನತೆಯ ಸ್ವಾತಂತ್ರ್ಯದ ಕನಸನ್ನು ನುಚ್ಚುನೂರು ಮಾಡಿತು. ಒಂದು ನಕಲಿ ಪ್ರಜಾಸತ್ತಾತ್ಮಕ ಗಣರಾಜ್ಯವನ್ನು ಘೋಷಿಸಲಾಯಿತು. ಅದು ಮೂಲತಃ ಅಮೇರಿಕದ ಹಿಡಿತದಲ್ಲೇ ಇರುವಂತಾಯಿತು.

ಈ ಅವಧಿಯಲ್ಲಿ, ಕ್ಯೂಬಾದಲ್ಲಿ ...ವು, ದಾರಿದ್ರ್ಯ, ಅನಕ್ಷರತೆ, ಅಪೌಷ್ಟಕತೆ, ರೋಗರುಜಿನ, ಮೊದಲಾದವುಗಳು ವ್ಯಾಪಕಗೊಂಡವು. ದೇಶದ ಸಂಪನ್ಮೂಲಗಳು ಕೆಲವೇ ಕೆಲವು ವ್ಯಕ್ತಿಗಳ ವಶದಲ್ಲಿದ್ದವು. ಇವರಿಂದ ಎಲ್ಲಾ ರೀತಿಯ ಅಪರಾಧಗಳು ನಡೆಯುತ್ತಿದ್ದವು. ಅಮೇರಿಕದ ನೇರ ಬೆಂಬಲ ಅವರಿಗಿರುತಿತ್ತು.

1935 ರಲ್ಲಿ ಕ್ಯೂಬಾದಲ್ಲಿ ಅಮೇರಿಕದ ಹಿತ ಸಾಧಿಸಲು ಜನರಲ್ ಮಚಾಡೊ ಎಂಬವರನ್ನು ನೇಮಿಸಲಾಯಿತು. ಆತನ



ಚೆಗುವಾರ ಮತ್ತು ಫಿಡರಲ್ ಕ್ಯಾಸ್ಟ್ರೋ

ಸರ್ವಾಧಿಕಾರಿ ಆಡಳಿತದ ವಿರುದ್ಧ ಜನರ ಪ್ರತಿಭಟನೆ ತೀವ್ರಗೊಂಡ ಪರಿಣಾಮವಾಗಿ 1933 ರಲ್ಲಿ ಆತ ದೇಶದಿಂದ ಪಲಾಯನ ಮಾಡಬೇಕಾಯಿತು. ಮಧ್ಯಂತರ ಸರ್ಕಾರವೊಂದು ರಚನೆಯಾಯಿತು. ಆದರೆ ಕ್ಯೂಬಾದ ಶ್ರೀಮಂತರು ಮತ್ತು ಅಮೇರಿಕದ ಸೈನ್ಯಾಧಿಕಾರಿಗಳು ಸೇರಿಕೊಂಡು ಆ ಸರ್ಕಾರವನ್ನು ಕೆಳಗಿಸಿದರು.

ಅಷ್ಟರಲ್ಲಿ ಎರಡನೇ ಮಹಾಯುದ್ಧ ಮುಕ್ತಾಯಗೊಂಡಿತ್ತು. ಯುದ್ಧದಲ್ಲಿ ಗೆದ್ದ ಸಂಭ್ರಮದಲ್ಲಿದ್ದ ಅಮೇರಿಕ ಪುಲ್ಜೆನ್ಸಿಯೊ ಬಾಟಿಸ್ಟಾ ಎಂಬ ಸೈನ್ಯಾಧಿಕಾರಿಯನ್ನು ಕ್ಯೂಬಾದ ಆಡಳಿತಾಧಿಕಾರಿಯಾಗಿ ನಿಯೋಜಿಸಿತು. ಕ್ಯೂಬಾದ ಆರ್ಥಿಕತೆ ಛಿದ್ರ-ಛಿದ್ರವಾಗಿತ್ತು. ಗಣಿಗಳು, ಮುಖ್ಯ ಕೈಗಾರಿಕೆಗಳು, ಮತ್ತು ಕೃಷಿ ಭೂಮಿ ಎಲ್ಲಾ ಅಮೇರಿಕದ ಕಂಪನಿಗಳ ವಶವಾಗಿತ್ತು. ಕ್ಯೂಬಾದ ದೇಶಪ್ರೇಮಿ ಜನತೆ ಬಾಟಿಸ್ಟಾ ಆಡಳಿತದ ಭ್ರಷ್ಟಾಚಾರ ಮತ್ತು ಸರ್ವಾಧಿಕಾರದ ವಿರುದ್ಧ ದಂಗೆಯೆದ್ದರು. 1952 ರಲ್ಲಿ ನಡೆಯಲಿದ್ದ ಸಾರ್ವತ್ರಿಕ ಚುನಾವಣೆಯಲ್ಲಿ ಬಾಟಿಸ್ಟಾ ಗೆಲ್ಲುವ ಸಾಧ್ಯತೆ ಇಲ್ಲದಿರುವುದನ್ನು ಗಮನಿಸಿ ಮಿಲಿಟರಿ ಆಡಳಿತವನ್ನು ಹೇರುವ ಮೂಲಕ ಅಧಿಕಾರದಲ್ಲಿ ಮುಂದುವರೆದನು.

ಆಗ ಫಿಡೆಲ್ ಕ್ಯಾಸ್ಟ್ರೊ 25 ವರ್ಷ ವಯಸ್ಸಿನ ಒಬ್ಬ ಯುವ ನ್ಯಾಯವಾದಿಯಾಗಿದ್ದರು. ಸಾಮಾಜಿಕ ರಕ್ಷಣಾ ಕಾಯ್ದೆ ಅಡಿಯಲ್ಲಿ ಅವರು ಬಾಟಿಸ್ಟಾ ವಿರುದ್ಧ ನ್ಯಾಯಾಲಯದಲ್ಲಿ ಪ್ರಕರಣವೊಂದನ್ನು ದಾಖಲು ಮಾಡಿ ಆತನಿಗೆ 108 ವರ್ಷಗಳ ಶಿಕ್ಷೆ ವಿಧಿಸಬೇಕೆಂದು ವಾದಿಸಿದರು. ಸಹಜವಾಗಿಯೇ ಕೇಸನ್ನು ವಜಾಗೊಳಿಸಲಾಯಿತು. ಬಾಟಿಸ್ಟಾ ಸರ್ವಾಧಿಕಾರವನ್ನು ಕಿತ್ತು ಹಾಕಲು ಹೋರಾಟ ನಡೆಸುವುದೊಂದೇ ಕ್ಯಾಸ್ಟ್ರೊ ಮುಂದಿದ್ದ ದಾರಿಯಾಗಿತ್ತು. ಜನತೆ ಕ್ರಾಂತಿಕಾರಿ ಬದಲಾವಣೆಗಾಗಿ ಹಾತೊರೆಯತೊಡಗಿತ್ತು. ದೇಶಪ್ರೇಮಿ ಯುವಕರು ಕ್ರಾಂತಿಯಲ್ಲಿ ಭಾಗವಹಿಸುವುದಕ್ಕಾಗಿ ತರಬೇತಿ ಪಡೆಯತೊಡಗಿದರು. ಕ್ರಾಂತಿಯ ಕರೆ ವಿವಿಧ ಜನಸಮೂಹಗಳನ್ನು ಆಕರ್ಷಿಸತೊಡಗಿತು. ಒಂದು ಸಶಸ್ತ್ರ ದಾಳಿಗಾಗಿ ಫಿಡೆಲ್ ಜನತೆಯನ್ನು ಸಜ್ಜುಗೊಳಿಸತೊಡಗಿದರು.

ಜುಲೈ 26, 1953. ಜೋಸ್ ಮಾರ್ಟಿ ಅವರ ಜನ್ಮ ಶತಮಾನೋತ್ಸವ ದಿನ. ಫಿಡೆಲ್ ಮತ್ತು ಸಂಗಡಿಗರು ಮಾನ್ಕಾಡಾ ಸೈನಿಕ ನೆಲೆಗಳ ಮೇಲೆ ದಾಳಿ ಮಾಡಲು ನಿರ್ಧರಿಸಿದರು. ಅಲ್ಲಿರುವ ಮೆಶಿನ್‌ಗನ್‌ಗಳನ್ನು, ಟ್ಯಾಂಕುಗಳನ್ನು ಮತ್ತು ರೆಡಿಯೋ ಸ್ಟೇಷನ್ ಅನ್ನು ವಶಪಡಿಸಿಕೊಳ್ಳುವುದು ಅವರ ಉದ್ದೇಶವಾಗಿತ್ತು. ಆದರೆ ಅವರ ಪ್ರಯತ್ನ ವಿಫಲವಾಯಿತು. ಅಲ್ಲಿ ನಡೆದ ತೀವ್ರ ಸಂಘರ್ಷದಲ್ಲಿ 75 ಕ್ರಾಂತಿಕಾರರು ಹುತಾತ್ಮರಾದರು. ಫಿಡೆಲ್ ಮತ್ತು 18 ಜನ




ಹೋರಾಟಗಾರರು ತಪ್ಪಿಸಿಕೊಂಡು ಸಿಯೆರಾ ಮೇಸ್ತ್ರಾ ಪರ್ವತ ಪ್ರದೇಶವನ್ನು ಸೇರಿ-ಕೊಂಡರು. ದಾಳಿ ವಿಫಲವಾಯಿತಾದರೂ ಅದು 'ಜುಲೈ 26 ರ ಬಂಡಾಯ' ಎಂದು ಪ್ರಸಿದ್ಧವಾಯಿತು.

ಫಿಡೆಲ್ ಮತ್ತು ಅವರ ಸಂಗಡಿಗರನ್ನು ಬೇಟೆಯಾಡಿ ಬಂಧಿಸಲಾಯಿತು. ಫಿಡೆಲ್ ಅವರಿಗೆ 15 ವರ್ಷಗಳ ಜೈಲು ಶಿಕ್ಷೆಯನ್ನು ವಿಧಿಸಲಾಯಿತು. ಆದರೆ ಫಿಡೆಲ್‌ರನ್ನು ಪ್ರೀತಿಸುತ್ತಿದ್ದ ಕ್ಯೂಬಾದ ಜನತೆ ಅಲೆ ಅಲೆಗಳಂತೆ ಎದ್ದು ಬಂದರು. ಕ್ಯೂಬಾ ಜನತೆಯ ನಿರಂತರ ಪ್ರತಿಭಟನೆ ಮತ್ತು ಹೋರಾಟಗಳಿಂದಾಗಿ 1955 ರಲ್ಲಿ ಫಿಡೆಲ್ ಮತ್ತು ಅವರ ಸಂಗಾತಿಗಳನ್ನು ಬಿಡುಗಡೆ ಮಾಡಬೇಕಾಯಿತು. ಫಿಡೆಲ್ (ಜೀವ ಬೆದರಿಕೆ ಇದುದರಿಂದ) ಮೆಕ್ಸಿಕೊದಲ್ಲಿ ಆಶ್ರಯ ಪಡೆದರು. ಮಹಾನ್ ಕ್ರಾಂತಿಕಾರಿಗಳಾದ ಚೆ ಗುವೆರಾ ಮತ್ತು ಅಲ್ಬೆರ್ಟೊ ವಾಲ್ಲೊ ಮೆಕ್ಸಿಕೊದಲ್ಲಿ ಫಿಡೆಲ್‌ರನ್ನು ಸೇರಿಕೊಂಡರು. ಮತ್ತೊಂದು ಸಶಸ್ತ್ರ ದಾಳಿಗಾಗಿ ಅವರು ಅಲ್ಲಿ ಗರಿಲ್ಲಾ ಪಡೆಗಳನ್ನು ಸಂಘಟಿಸಿದರು.

ಡಿಸೆಂಬರ್ 2, 1956 ರಂದು 81 ಜನ ಗರಿಲ್ಲಾಗಳೊಂದಿಗೆ ಫಿಡೆಲ್ 'ಗ್ರಾನ್ಮ' ಎಂಬ ಪುಟ್ಟ ಹಡಗಿನಲ್ಲಿ ಪ್ರಯಾಣ ಮಾಡಿ ಕ್ಯೂಬಾ ಕರಾವಳಿಯನ್ನು ತಲುಪಿದರು. ರಾಹುಲ್ ಕ್ಯಾಸ್ಟ್ರೊ, ಚೆ ಗುವೇರಾ ಮೊದಲಾದವರು ಈ ಗರಿಲ್ಲಾ ಪಡೆಯಲ್ಲಿದ್ದರು. ಮುಂದಿನ 2 ವರ್ಷಗಳ ಕಾಲ ಫಿಡೆಲ್ ಗರಿಲ್ಲಾ ಸೈನ್ಯವನ್ನು ಬಲಪಡಿಸುತ್ತಾ ಅವರ ಕಾರ್ಯಾಚರಣೆಗೆ ನೇತೃತ್ವ ನೀಡಿದರು.

ಅದೇ ಸಮಯದಲ್ಲಿ ಫಿಡೆಲ್ 'ಜುಲೈ 26 ರ ಆಂದೋಲನ'ದ ನಾಯಕರಾಗಿಯೂ ಕಾರ್ಯನಿರ್ವಹಿಸಿದರು. ಆಗಾಗ ಬಾಟಿಸ್ಟಾ ಸೈನ್ಯದ ಅನಿರೀಕ್ಷಿತ ದಾಳಿಗಳನ್ನು ಎದುರಿಸಬೇಕಾಗುತಿತ್ತು. ಆರಂಭದಲ್ಲಿ ಕೆಲವು ಹಿನ್ನಡೆಗಳನ್ನು ಅನುಭವಿಸುವಂತಾದರೂ ಫಿಡೆಲ್ ನೇತೃತ್ವದ ಗರಿಲ್ಲಾ ಪಡೆ ಬಲಗೊಳ್ಳುತ್ತಾ ಹೋಯಿತು. ಒಂದೊಂದೇ ಔಟ್ ಪೋಸ್ಟ್‌ಗಳನ್ನು ವಶಪಡಿಸಿಕೊಂಡು ಗರಿಲ್ಲಾ ಪಡೆಗಳು ಸಿಯೇರಾ ಮೇಸ್ಟ್ರಾ ಪರ್ವತಗಳಿಂದ ಕ್ಯೂಬಾದ ಹೃದಯ ಭಾಗವನ್ನು ತಲುಪಲು ಸಾಧ್ಯವಾಯಿತು. ಜನವರಿ 1, 1959 ರಂದು ಬಾಟಿಸ್ಟಾ ಕ್ಯೂಬಾ ತೊರೆದು ಓಡಿ ಹೋಗುತ್ತಾನೆ. ಸೈನ್ಯ ಅಧಿಕಾರ ವಹಿಸಿಕೊಳ್ಳುತ್ತದೆ. ಫಿಡೆಲ್ ಸೈನಿಕ ಸರ್ಕಾರವನ್ನು ವಿರೋಧಿಸುತ್ತಾರೆ. ಹೋರಾಟ ಮುಂದುವರೆಯುತ್ತದೆ. ಮುಷ್ಕರ ನಡೆಸಲು ಫಿಡೆಲ್ ಕಾರ್ಮಿಕರಿಗೆ ಕರೆ ನೀಡುತ್ತಾರೆ. ಇಡೀ ದ್ವೀಪ ರಾಷ್ಟ್ರ ಸ್ತಬ್ಧಗೊಳ್ಳುತ್ತದೆ. ಯಶಸ್ವಿ ಮುಷ್ಕರ ಕ್ರಾಂತಿಯನ್ನು ಪೂರ್ಣಗೊಳಿಸುತ್ತದೆ.

ಜನವರಿ 8 ರಂದು ಫಿಡೆಲ್ ಮತ್ತು ಅವರ ಕ್ರಾಂತಿಕಾರಿ ಒಡನಾಡಿಗಳು ರಾಜಧಾನಿ ಹವಾನಾ ನಗರವನ್ನು ಪ್ರವೇಶಿಸಿದಾಗ ಸಾವಿರಾರು ಜನ ಕ್ಯೂಬನ್ನರು ಅವರನ್ನು ಹರ್ಷೋದ್ಗಾರಗಳೊಂದಿಗೆ ಸ್ವಾಗತಿಸುತ್ತಾರೆ. ಫೆಬ್ರವರಿ 13 ರಂದು ಫಿಡೆಲ್ ಅವರನ್ನು ಪ್ರಧಾನ ಮಂತ್ರಿ ಎಂದು ಘೋಷಿಸಲಾಗುತ್ತದೆ. 1976 ರಲ್ಲಿ ಅವರು ಅಧ್ಯಕ್ಷರಾಗಿ ಆಯ್ಕೆಯಾಗುತ್ತಾ-ರೆ. 1965 ರಲ್ಲಿ ಕ್ಯೂಬಾ ಕಮ್ಯೂನಿಸ್ಟ್ ಪಕ್ಷದ ಸ್ಥಾಪನೆ ಆದಾಗಿನಿಂದಲೂ ಫಿಡೆಲ್ ಅದರ ಕೇಂದ್ರ ಸಮಿತಿಯ ಪ್ರಧಾನ ಕಾರ್ಯದರ್ಶಿಯಾಗಿರುತ್ತಾರೆ. ಜುಲೈ 26 ಕ್ಯೂಬಾ ಬಂಡಾಯದ ದಿನವೆಂದೂ, ಜನವರಿ 1 ಕ್ಯೂಬಾ ರಾಷ್ಟ್ರೀಯ ದಿನ ವೆಂದೂ ಆಚರಿಸಲ್ಪಡುತ್ತದೆ.



ವೆಂಕಟೇಶ್ ಕೋಣಿ

ಅರ್ಜಿ ಸಲ್ಲಿಸಿ ವರ್ಷ ಕಳೆದರೂ ಸಿಗದ ಪರಿಹಾರ

ಹೋರಾಟದ ಹಾದಿಯಲ್ಲಿ – ಉಡುಪಿಯ ಬಡ ನಿವೇಶನರಹಿತರು

ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಉಡುಪಿ ತಾಲ್ಲೂಕು ಸಮಿತಿ ನೇತೃತ್ವದಲ್ಲಿ 2 ವರ್ಷಗಳಿಂದ ವಸತಿಹೀನ ಮತ್ತು ನಿವೇಶನ ರಹಿತರ ಸಮಸ್ಯೆಯನ್ನು ಸರ್ಕಾರದ ಮುಂದಿಡಲಾಗುತ್ತಿದೆ. ಆದರೆ 2011 ರಿಂದ 2013ರ ವರೆಗೆ ಸಲ್ಲಿಸಿದ ಒಟ್ಟು 5,786 ಅರ್ಜಿಗಳ ವಿಲೇವಾರಿ ಆಗಿಲ್ಲ ಎಂದು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಜಿಲ್ಲಾ ಅ ಧ್ಯಕ್ಷ ದೋಗು ಸುವರ್ಣ ಖಂಡಿಸಿದರು. ವಸತಿಹೀನ ಮತ್ತು ನಿವೇಶನ ರಹಿತರ ಸಮಸ್ಯೆಯನ್ನು ಪರಿಹರಿಸುವಂತೆ ಒತ್ತಾಯಿಸಿ ಕೃಷಿ ಕೂಲಿಕಾರರ ಸಂಘದ ನೇತೃತ್ವದಲ್ಲಿ ಮನೆ ನಿವೇಶನ ರಹಿತ ಅರ್ಜಿದಾರರು ಉಡುಪಿ ತಾಲೂಕು ತಹಶೀಲ್ದಾರ ಕಚೇರಿ ಎದುರು ಜುಲೈ 11, 2013 ರಂದು ನಡೆಸಿದ ಬೃಹತ್ ಪ್ರತಿಭಟನೆಯಲ್ಲಿ ಭಾಗವಹಿಸಿ ಅವರು ಮಾತನಾಡಿದರು.



ವಸತಿ ಹೀನರ, ನಿವೇಶನ ರಹಿತರ ಸಮಸ್ಯೆಗಳನ್ನು ಪರಿಹರಿಸುವುದಾಗಿ ಹಿಂದಿನ ಬಿಜೆಪಿ ಸರ್ಕಾರ ಹೇಳಿದರೂ ಜಾರಿ ಮಾಡಲಿಲ್ಲ. ದಿನದಿಂದ ದಿನಕ್ಕೆ ದಿನ ಬಳಕೆ ಆಹಾರ ವಸ್ತುಗಳ ಬೆಲೆ ಹೆಚ್ಚುತ್ತಿದೆ. ಆದರೆ ಅದಕ್ಕೆ ತಕ್ಕಂತೆ ನಿವೇಶನ ಹಾಗೂ ವಸತಿ ಹೀನರ ಆದಾಯ ಹೆಚ್ಚುತ್ತಿಲ್ಲ. ನಿವೇಶನ ರಹಿತರು ಬಾಡಿಗೆ ಮನೆಗಳಲ್ಲಿ ವಾಸಿಸುತ್ತಿದ್ದು ಬಾಡಿಗೆ ದರವು ಹೆಚ್ಚಾಗುತ್ತಿದೆ. ಇದರಿಂದ ಬಡ ನಿವೇಶನ ರಹಿತರು ಬಾಡಿಗೆ ಮನೆ ಬಿಟ್ಟುಬೀದಿ ಪಾಲಾಗುವ ದುಸ್ಥಿತಿಯಲ್ಲಿದ್ದಾರೆ. ನಗರದ ಕೊಳಚೆ ಪ್ರದೇಶದಲ್ಲಿ ಹೀನಾಯ ಸ್ಥಿತಿಯಲ್ಲಿ ಬದುಕು ಸಾಗಿಸುತ್ತಿದ್ದಾರೆ. ಒಂದು ಅಂದಾಜಿನ ಪ್ರಕಾರ ಕರ್ನಾಟಕದಲ್ಲಿ 85 ಲಕ್ಷ ನಿವೇಶನ ರಹಿತರಿದ್ದು ಸು. 7 ಲಕ್ಷ ಕುಟುಂಬಗಳು ನಿವೇಶನಕ್ಕೆ ಅರ್ಜಿ ಹಾಕಿವೆ. ಇದು ನಿವೇಶನ ರಹಿತರ ಸಮಸ್ಯೆಯ ವಿರಾಟ್ ಸ್ವರೂಪವನ್ನು ಎತ್ತಿ ತೋರುತ್ತದೆ.

ಉಡುಪಿಯ ನಗರ ಸಭೆಯು ಜಾಗದ ಅಭಾವದಿಂದ ಅಪಾರ್ಟಮೆಂಟ್ ಮಾದರಿಯಲ್ಲಿ ಮನೆ ನಿರ್ಮಿಸಿ ವಿತರಿಸುವ ಯೋಜನೆ ರೂಪಿಸಿದೆ ಎಂದು ಹೇಳಿ ಕೊಂಡಿದ್ದರೂ ಆರು ತಿಂಗಳು ಕಳೆದರೂ ಯಾವುದೇ ಪ್ರಗತಿ ಆಗಿಲ್ಲ. ವಸತಿಹೀನರು ಮತ್ತು ನಿವೇಶನ ರಹಿತರಿಗೆ ವಸತಿ ಮತ್ತು ನಿವೇಶನ ನೀಡದಿದ್ದಲ್ಲಿ ಉಗ್ರ ಪ್ರತಿಭಟನೆ ನಡೆಸಲಾಗುವುದು ಎಂದು ಈ ಪ್ರತಿಭಟನೆಯ ಸಂದರ್ಭದಲ್ಲಿ ಎಚ್ಚರಿಕೆ ನೀಡಲಾಯಿತು.

ಪ್ರಾಣಿ ಪಕ್ಷಿ, ಮರಗಿಡಗಳ ಸುರಕ್ಷೆ-ರಕ್ಷಣೆಗೆ ವನ್ಯಜೀವಿ ರಕ್ಷಣಾ ಕಾಯ್ದೆ, ಗೋವು ಹತ್ಯೆ ನಿಷೇಧ ಕಾನೂನು ಇತ್ಯಾದಿ ಇವೆ. ಆದರೆ ಮನುಷ್ಯರ ವಾಸಕ್ಕೆ ಅಗತ್ಯವಾದ ಮನೆ ನೀಡುವ ಸಂಬಂಧ ಯಾವುದೇ ಕಾನೂನು ಇಲ್ಲ. ಇದು ದುರಂತ. ಸರಕಾರವು ಸಮಗ್ರ ವಸತಿ ನೀತಿ ರೂಪಿಸಿ ಜಾರಿ ಮಾಡಬೇಕು. ಸರ್ಕಾರಿ ಜಮೀನನ್ನು ಬಲಾಢ್ಯರು, ಭೂ ಮಾಲಕರು ಒತ್ತುವರಿ ಮಾಡಿರುವುದನ್ನು ಸರಕಾರ ವಶಕ್ಕೆ ಪಡೆದು ಬಡವರಿಗೆ ಹಂಚಬೇಕು ಎಂದು ಕೂಲಿಕಾರರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವೆಂಕಟೇಶ ಕೋಣಿ ಒತ್ತಾಯಿಸಿದರು. ಕೇರಳ ರಾಜ್ಯದಲ್ಲಿ ನಿವೇಶನ ರಹಿತ ಮತ್ತು ವಸತಿ ಹೀನರಿ ಎಡ ಪ್ರಜಾಸತ್ತಾತ್ಮಕ ರಂಗದ ಸರ್ಕಾರದಿಂದ ನಿವೇಶನ-ವಸತಿ ನೀಡಲಾಗಿದೆ. ಆದರೆ ಕರ್ನಾಟಕ ರಾಜ್ಯದಲ್ಲಿ ಮಾತ್ರ ಇಂಥ ಪರಿಣಾಮಕಾರಿ ಪರಿಹಾರ ಸಿಕ್ಕಿಲ್ಲ. ಪ್ರತಿಭಟನೆ ತೀವ್ರಗೊಳಿಸುವ ಮೂಲಕ ಸರಕಾರದ ಕಿವಿ ಮತ್ತು ಕಣ್ಣು ತೆರೆಸಬೇಕಾಗಿದೆ ಎಂದು ಕೃಷಿ ಕೂಲಿಕಾರರ ಸಂಘದ ರಾಜ್ಯ ಮುಖಂಡ ರಾಜೀವ ಪಡುಕೋಣೆ ಆಕ್ರೋಶ ವ್ಯಕ್ತಪಡಿಸಿದರು.

ಈ ಪ್ರತಿಭಟನಾ ರ‍್ಯಾಲಿ ಹಾಗೂ ಸಾರ್ವಜನಿಕ ಸಭೆಯಲ್ಲಿ ಸಿಐಟಿಯು ಜಿಲ್ಲಾ ಅಧ್ಯಕ್ಷ ಕೆ. ಶಂಕರ್, ಉಪಾಧ್ಯಕ್ಷ ಪಿ. ವಿಶ್ವನಾಥ ರೈ, ನಿವೇಶನ ರಹಿತರ ಭೂಮಿ ಹಕ್ಕಿನ ಹೋರಾಟ ಬೆಂಬ ಮಾತನಾಡಿದರು. ಕೆ.ಲಕ್ಷ್ಮಣ, ಪುಷ್ಪ ಕಾಮು, ಸಾಯಿರ, ರವಿಕಲಾ, ಸಿರಾಜುನ್ನಿಸಾ, ಉಮೇಶ ಕುಂದರ್ ಮತ್ತಿತರರು ಪ್ರತಿಭಟನಾ ರ‍್ಯಾಲಿಗೆ ನೇತೃತ್ವ ನೀಡಿದರು.

ಕುಂದಾಪುರ ತಾಲ್ಲೂಕಿನಲ್ಲಿ ಜಮೀನು ಗುರುತಿಸಿಲ್ಲ ಯಾಕೆ ?

ಉಡುಪಿ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ಜರುಗಿದ ಜಿಲ್ಲಾ ಪ್ರಗತಿ ಪರಿಶೀಲನಾ ಸಭೆಯಲ್ಲಿ ತಿಳಿಸಿದಂತೆ ಸಮೀಕ್ಷೆ ಪ್ರಕಾರ ಉಡುಪಿ ಜಿಲ್ಲೆಯಲ್ಲಿ ನಿವೇಶನ ರಹಿತರು 13 ಸಾವಿರ ಮಂದಿ. 25 ಸಾವಿರ ಮಂದಿಗೆ ಮನೆ ಇಲ್ಲ. ಈ ಹಿನ್ನೆಲೆಯಲ್ಲಿ ನಿವೇಶನ ರಹಿತರಿಗೆ ನಿವೇಶನ ನೀಡುವ ಸಲುವಾಗಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಸರ್ಕಾರಿ ಭೂಮಿ ಗುರುತಿಸಲು ಸೂಚನೆ ನೀಡಲಾಗಿದೆ. ಈ ಪ್ರಕಾರ ಕಾರ್ಕಳ ತಾಲೂಕಿನಲ್ಲಿ 33 ಗ್ರಾಮ ಹಾಗೂ ಉಡುಪಿ ತಾಲೂಕು ವ್ಯಾಪ್ತಿಯ 25 ಗ್ರಾಮಗಳಲ್ಲಿ ಈ ಸಲುವಾಗಿ ಜಮೀನು ಗುರುತಿಸಲಾಗಿದ್ದರೂ ಕುಂದಾಪುರ ತಾಲೂಕಿನಲ್ಲಿ ಈ ಸಲುವಾಗಿ ಯಾವುದೇ ಜಮೀನು ಗುರುತಿಸಿಲ್ಲ. ಇದು ನಿಜಕ್ಕೂ ಆತಂಕದ ವಿಚಾರವಾಗಿದೆ ಎಂದ ಮುಖಂಡರುಗಳು ಆಡಳಿತದ ಈ ಧೋರಣೆಯನ್ನು ತೀವ್ರವಾಗಿ ಖಂಡಿಸಿ ತುರ್ತು ಕ್ರಮವಹಿಸಲು ಆಗ್ರಹಿಸಿದರು.

ಉತ್ತಮ ಹಾಸ್ಟೆಲ್ ಸೌಕರ್ಯ......


ಪುಟ 2 ರಿಂದ

ಹೆಚ್ಚು ಹಾಸ್ಟೆಲ್‌ಗಳನ್ನು ಪ್ರಾರಂಭಿಸಬೇಕು. ಹಾಸ್ಟೆಲ್‌ಗಳಿಗೆ ಸ್ವಂತ ಕಟ್ಟಡ, ಗ್ರಂಥಾಲಯ, ಶುದ್ಧ ಕುಡಿಯುವ ನೀರು, ಶೌಚಾಲಯ, ದಿನ ಪತ್ರಿಕೆಗಳು, ಮಾಸಪತ್ರಿಕೆಗಳು, ಪ್ರಥಮ ಚಿಕಿತ್ಸಾ ಕೇಂದ್ರ, ಕಂಪ್ಯೂಟರ್ಸ್, ಇಂಟರ್‌ನೆಟ್ ಸೌಕರ್ಯ, ಕ್ರೀಡಾ ಸಾಮಾಗ್ರಿಗಳು ಇನ್ನಿತರ ಮೂಲಭೂತ ಸೌಲಭ್ಯಗಳನ್ನು ನೀಡಬೇಕು.

ಪ್ರತಿ ತಿಂಗಳಿಗೊಮ್ಮೆ ಹಾಸ್ಟೆಲ್ ವಿದ್ಯಾರ್ಥಿಗಳಿಗೆ ಆರೋಗ್ಯ ತಪಾಸಣೆಯನ್ನು ಮಾಡಿಸಬೇಕು. ಹಾಸ್ಟೆಲ್‌ಗಳಿಗೆ ಅಗತ್ಯವಿರುವ ನಿಲಯ ಪಾಲಕರು ಸೇರಿದಂತೆ ಅಡುಗೆ ತಯಾರಕರು, ಸಹಾಯಕರು, ಸ್ವಚ್ಛತೆಗೊಳಿಸುವವರು ಇತರೆ ಸಿಬ್ಬಂದಿಗಳನ್ನು ಹೊರಗುತ್ತಿಗೆ ಆಧಾರದಲ್ಲಿ ನೇಮಕ ಮಾಡುವುದನ್ನು ಕೈ ಬಿಟ್ಟು ಖಾಯಂ ಆಗಿ ನೇಮಕ ಮಾಡಿಕೊಳ್ಳಬೇಕು. ಹಾಸ್ಟೆಲ್‌ಗಳಿಗೆ ಗ್ಯಾಸ್ ಸಿಲಿಂಡರ್ ಅನ್ನು ಸಬ್ಸಿಡಿ ದರದಲ್ಲಿ ಪೂರೈಸಬೇಕು ಮತ್ತು ಪಡಿತರ ವ್ಯವಸ್ಥೆ ಮೂಲಕ ಅಗತ್ಯವಿರುವಷ್ಟು ಅಕ್ಕಿ, ಬೇಳೆಕಾಳುಗಳು, ಎಣ್ಣೆ, ಸೋಪು, ಬಟ್ಟೆ, ಪುಸ್ತಕ, ಪೆನ್ನು ಇನ್ನಿತರ ವಿದ್ಯಾರ್ಥಿಗಳಿಗೆ ಅಗತ್ಯವಿರುವ ವಸ್ತುಗಳನ್ನು ರಿಯಾಯಿತಿ ದರದಲ್ಲಿ ಸರಬರಾಜು ಮಾಡಬೇಕು. ರಾಜ್ಯದಲ್ಲಿ ಬಾಕಿಯಿರುವ ಎಲ್ಲಾ ಹಂತದ ವಿದ್ಯಾರ್ಥಿ ವೇತನವನ್ನು ಬಿಡುಗಡೆಗೊಳಿಸಬೇಕು ಮತ್ತು ವಿದ್ಯಾರ್ಥಿ ವೇತನದ ಪ್ರಮಾಣವನ್ನು ಹೆಚ್ಚಿಸಬೇಕು. ವಿದ್ಯಾರ್ಥಿ ವೇತನ ಪಡೆಯಲು ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಹಾಸ್ಟೆಲ್ ವಿದ್ಯಾರ್ಥಿಗಳಿಗೆ ಸರ್ಕಾರವೇ ಜವಾಬ್ದಾರಿ ವಹಿಸಿ ಶೂನ್ಯ ಠೇವಣಿ ಖಾತೆ ತೆರೆಯಲು ಕ್ರಮ ಕೈಗೊಳ್ಳಬೇಕು. ಎಸ್‌ಸಿಪಿ (ವಿಶೇಷ ಘಟಕ ಯೋಜನೆ) ಮತ್ತು ಟಿಸಿಪಿ (ಟ್ರೈಬಲ್ ಉಪಯೋಜನೆ) ಯ ಮೂಲಕ ಎಸ್.ಸಿ/ಎಸ್.ಟಿ ಹಾಸ್ಟೆಲ್ ವಿದ್ಯಾರ್ಥಿಗಳಿಗೆ ನೀಡುತ್ತಿರುವ ಅನುದಾನ ದುರ್ಬಳಕೆ ಆಗುತ್ತಿರುವುದನ್ನು ತಡೆಗಟ್ಟಬೇಕು. ಹಾಸ್ಟೆಲ್ ವಿದ್ಯಾರ್ಥಿಗಳ ಮೇಲೆ ನಡೆಯುತ್ತಿರುವ ದೌರ್ಜನ್ಯವನ್ನು ತಡೆಗಟ್ಟಬೇಕು ಎಂದು ಎಸ್‌ಎಫ್‌ಐ ರಾಜ್ಯ ಅಧ್ಯಕ್ಷ ಅನಂತ್‌ನಾಯಕ್. ಎನ್, ಆಗ್ರಹಿಸಿದರು. ಕಾರ್ಯದರ್ಶಿ ಹುಳ್ಳಿ ಉಮೇಶ್, ಜಿಲ್ಲಾ ಅಧ್ಯಕ್ಷ ಮುನಿರಾಜು.ಎಂ, ಕಾರ್ಯದರ್ಶಿ ಚಿಕ್ಕರಾಜು. ಎಸ್. ಮುಂತಾದವರು ನೇತೃತ್ವ ವಹಿಸಿದ್ದರು. ಬೆಂಗಳೂರು ನಗರ ಜಿಲ್ಲೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳೊಂದಿಗೆ ವಿದ್ಯಾರ್ಥಿಗಳ ನಿಯೋಗ ಚರ್ಚೆ ನಡೆಸಿತು. ಜಿಲ್ಲಾ ಮುಖಂಡರಾದ ಯುವರಾಜು.ಎಂ.ಪಿ, ವೆಂಕಟೇಶ್.ಕೆ ರಮೇಶ್.ಎಂ.ಪಿ, ಶೃತಿ, ಅಶ್ವಥ್, ಹನಮಂತ ದುರ್ಗ, ಮುಂತಾದವರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ಜನಶಕ್ತಿ
ಕನ್ನಡ ವಾರಪತ್ರಿಕೆ

ಬಡತನ ಇಳಿದಿದೆಯೆಂಬ ಕಪಟತನದ ಒಂದು ಕಸರತ್ತು



ಈ ಬಡತನದ ರೇಖೆಗಳು ಅಸಂಬದ್ಧ ಮಾತ್ರವೇ ಅಲ್ಲ,ನಮ್ಮ ಬಹುಪಾಲು ಜನಗಳು ಇಂದು ಹೇಗಾದರೂ ಬದುಕುಳಿಯಲು ನಡೆಸಿರುವ ಜೀವನ್ಮರಣ ಹೋರಾಟಗಳನ್ನು ಅಪಹಾಸ್ಯ ಮಾಡುವಂತವು. ಕಾಂಗ್ರೆಸ್ ನೇತೃತ್ವದ ಯುಪಿಎ–2 ಸರಕಾರ ಪ್ರಚಾರ ಮಾಡುತ್ತಿರುವ ಸುಳ್ಳುಗಳನ್ನು ಸಂಪೂರ್ಣವಾಗಿ ಬಯಲಿಗೆಳೆಯಬೇಕಷ್ಟೆ ಅಲ್ಲ, ನಮ್ಮೆಲ್ಲ ಜನಗಳಿಗೆ ಆಹಾರ ಭದ್ರತೆಯೊಂದಿಗೆ ಒಂದು ಅರ್ಥಪೂರ್ಣ ಬದುಕನ್ನು ಒದಗಿಸುವಂತೆ ಮಾಡಲು ಜನಗಳನ್ನು ಅಣಿನೆರೆಸಬೇಕು, ಹೋರಾಟಗಳನ್ನು ಬಲಪಡಿಸಬೇಕು.

ಸೀತಾರಾಂ ಯೆಚುರಿ

ಚುನಾವಣೆ ಸಮೀಪ ಬರುತ್ತಿರುವಂತೆ, ದೇಶ ಯುಪಿಎ ಆಳ್ವಿಕೆಯಲ್ಲಿ ಮಹಾ ಪ್ರಗತಿ ಸಾಧಿಸಿದೆ, ಬಡ ಮತ್ತು ಅಂಚಿನಲ್ಲಿರುವ ಜನಗಳಿಗೆ ಇದರಿಂದ ಪ್ರಯೋಜನವಾಗಿದೆ ಎಂದು ತೋರಿಸುವ ವಂಚಕ ಕಸರತ್ತುಗಳು ಹೆಚ್ಚುತ್ತಲೇ ಇವೆ. ಯೋಜನಾ ಆಯೋಗ ದೇಶದಲ್ಲಿ ಬಡತನದ ಮಟ್ಟಗಳ ಇತ್ತೀಚಿನ ಅಂದಾಜುಗಳನ್ನು ಕೊಡಮಾಡಿರುವುದು ಇಂತಹುದೇ ಒಂದು ಕಸರತ್ತು. ಇದು ಚುನಾವಣಾ ಪ್ರತಿಫಲ ನೀಡಬಹುದೆಂಬುದು ಅವರ ಲೆಕ್ಕಾಚಾರ. ಸರಕಾರ ಕೊಡುವ ಅಂಕಿ–ಅಂಶಗಳೆಂದರೆ ಸುಳ್ಳುಗಳನ್ನಷ್ಟೇ ಅಲ್ಲ, ಹಸಿ ಸುಳ್ಳುಗಳನ್ನೂ ಮೀರಿದವುಗಳು ಎಂದು ಜನಜನಿತವಾಗಿರುವ ಮಾತನ್ನು ಮತ್ತೊಮ್ಮೆ ದೃಢೀಕರಿಸಿದೆ.

ಯೋಜನಾ ಆಯೋಗದ ಪ್ರಕಾರ, ತೆಂಡುಲ್ಕರ್ ವಿಧಾನವನ್ನು ಬಳಸಿ ಲೆಕ್ಕ ಹಾಕಲಾದ ರಾಷ್ಟ್ರೀಯ ಬಡತನ ರೇಖೆ 2011–12ರಲ್ಲಿ ನಗರಗಳಲ್ಲಿ ರೂ.33.33 ಮತ್ತು ಹಳ್ಳಿಗಳಲ್ಲಿ ರೂ. 27,20 ಎಂದು ಅಂದಾಜು ಮಾಡಲಾಗಿದೆ. ಆಹಾರಕ್ಕೆ ಮಾತ್ರವಲ್ಲ, ಬೇರೆಲ್ಲ ಸರಕುಗಳು ಮತ್ತು ಸೇವೆಗಳಿಗೆ ಒಟ್ಟಾಗಿ ಇದಕ್ಕಿಂತ ಹೆಚ್ಚು ಖರ್ಚು ಮಾಡುತ್ತಿದ್ದರೆ, ಅವರು ಬಡವರಲ್ಲ! ಒಬ್ಬ ಬಡವನಲ್ಲದ ವ್ಯಕ್ತಿ ಯಾರು ಎಂಬ ಬಗ್ಗೆ ಇದಕ್ಕಿಂತ ಹೆಚ್ಚು ಅಸಂಬದ್ಧವಾದ, ಅಮಾನವೀಯವಾದ ನಿರೂಪಣೆ ಬೇರೆ ಇರಲು ಸಾಧ್ಯವಿಲ್ಲ.

ಈ ಹಾಸ್ಯಾಸ್ಪದ ನಿರೂಪಣೆಗಳ ಪ್ರಕಾರ, ಬಡತನದ ರೇಖೆಯ ಕೆಳಗೆ ಬದುಕು ಸಾಗಿಸುತ್ತಿರುವವರ ಪ್ರಮಾಣ ಯುಪಿಎ–1 ಸರಕಾರ ರಚನೆಗೊಂಡ ವರ್ಷ, ಅಂದರೆ 2004–05 ಮತ್ತು 2011–12ರ ನಡುವೆ, ಹಳ್ಳಿಗಳಲ್ಲಿ 41.8ಶೇ.ದಿಂದ 25.7ಶೇ.ಕ್ಕೆ ಇಳಿದಿದೆ, ನಗರಗಳಲ್ಲಿ 25.7ರಿಂದ 13.7ಕ್ಕೆ ಇಳಿದಿದೆ. ನಿಜವಾದ ಸಂಖ್ಯೆಯಲ್ಲಿ ಹೇಳುವುದಾದರೆ, 2004–05ರಲ್ಲಿ 40.71 ಕೋಟಿ ಜನ ಬಡತನದ ರೇಖಿಯ ಕೆಳಗೆ [illegible]ನೆ, 2011–12ರಲ್ಲಿ ಅಂತವರ ಸಂಖ್ಯೆ ಕೇವಲ 26.93 ಕೋಟಿ, ಅಂದರೆ ಒಟ್ಟು ಜನಸಂಖ್ಯೆಯ 21.9ಶೇ. ಎಂದು ನಮಗೀಗ ಹೇಳಲಾಗಿದೆ.

ಇಂತಹ ಹಾಸ್ಯಾಸ್ಪದವೆನಿಸುವಂತಹ ಬಡತನದ ಮಟ್ಟಗಳ ನಿರೂಪಣೆಯ ಬಗ್ಗೆ ಒಂದು ರಾಷ್ಟ್ರೀಯ ಆಕ್ರೋಶವೇ ವ್ಯಕ್ತಗೊಂಡಾಗ, . ಯುಪಿಎ ಸರಕಾರ ನಿರ್ವಾಹವಿಲ್ಲದೆ ಪ್ರಧಾನ ಮಂತ್ರಿಗಳ ಆರ್ಥಿಕ ಸಲಹಾ ಮಂಡಳಿಯ ಅಧ್ಯಕ್ಷರಾದ ಸಿ.ರಂಗರಾಜನ್ ನೇತೃತ್ವದ ಒಂದು ಸಮಿತಿಯನ್ನು ನೇಮಿಸಿತು. ಬಡತನದ ತ–ಖ್ತೆ ತಯಾರಿಸುವ ತೆಂಡುಲ್ಕರ್ ವಿಧಾನದ ಮರುಪರಿಶೀಲನೆ ನಡೆಸುವ ಕೆಲಸವನ್ನು ಅದಕ್ಕೆ ಒಪ್ಪಿಸಲಾಯಿತು. ಆದರೆ ಈ ಸಮಿತಿ ಮುಂದಿನ ಸಾರ್ವತ್ರಿಕ ಚುನಾವಣೆಗಳ ನಂತರವೇ, 2014ರ ಮಧ್ಯಭಾಗದಲ್ಲಷ್ಟೇ ವರದಿ ಸಲ್ಲಿಸಬಹುದು ಎಂಬ ನಿರೀಕ್ಷೆಯಿದೆ. ಅದುವರೆಗೆ ಯುಪಿಎ ಸರಕಾರ ಇಂತಹ ಅಸಂಬದ್ಧ ಅಂಕಿ–ಅಂಶಗಳಿಂದ ಜನಗಳಿಗೆ ಮಂಕುಬೂದಿ ಎರಚುತ್ತಲೇ ಇರಬಹುದು. ತಲಾ ಬಳಕೆಯ ಆಧಾರದ ಈ ಬಡತನದ ನಿರೂಪಣೆಗಳು ಎಷ್ಟು ತಳಮಟ್ಟದಲ್ಲಿ ಇವೆಯೆಂದರೆ, ಅದರಿಂದ ಕನಿಷ್ಠ ಪೌಷ್ಟಿಕ ಆಹಾರದ ಬಳಕೆಯೂ ಸಾಧ್ಯವಿಲ್ಲ, ಇನ್ನು ಆರೋಗ್ಯ, ವಸತಿ, ಬಟ್ಟೆ ಮತ್ತು ಇತರ ಜೀವನಾವಶ್ಯಕತೆಗಳಂತೂ ದೂರದ ಮಾತು. ಇಂತಹ ನಿರೂಪಣೆಗಳು ದಟ್ಟ ದಾರಿದ್ರ್ಯದ ಮಟ್ಟ ಎನ್ನಬಹುದಾದಕ್ಕಿಂತಲೂ ಕೆಳಗಿವೆ.

1979ರಲ್ಲಿ ರೂಪಿಸಿದ ಬಡತನದ ರೇಖೆ–ಯ ಮೂಲ ನಿರೂಪಣೆಯನ್ನು, ಮುಂದಿನ ದಶಕಗಳಲ್ಲಿ, ಒಂದು ದೊಡ್ಡ ಕೈಚಳಕದ ಮೂಲಕ ಬದಲಿಸಲಾಯಿತು. ಆಗ, ಎಲ್ಲ ಬಳಕೆ ಸರಕುಗಳು ಮತ್ತು ಸೇವೆಗಳಿಗೆ ಮತ್ತು ಪ್ರತಿದಿನ ಗ್ರಾಮೀಣ ಪ್ರದೇಶಗಳಲ್ಲಿ 2400 ಕ್ಯಾಲರಿ ಶಕ್ತಿ ಹಾಗೂ ನಗರಗಳಲ್ಲಿ 2100 ಕ್ಯಾಲರಿ ಶಕ್ತಿ ಒದಗಿಸಬಲ್ಲ ಆಹಾರ ಸೇವನೆಗಾಗಿ ಮಾಡಬೇಕಾದ ಖರ್ಚುಗಳನ್ನು ಕುರಿತ ರಾಷ್ಟ್ರೀಯ ಮಾದರಿ ಸರ್ವೆಯ ಮಾಹಿತಿಯ ಆಧಾರದಲ್ಲಿ ಒಂದು ನಿರ್ದಿಷ್ಟ ಮಟ್ಟವನ್ನು ಬಡತನದ ಮಟ್ಟ ಎಂದು ನಿರೂಪಿಸಲಾಗಿತ್ತು. ಸ್ವಲ್ಪ ಸಮಯದಲ್ಲೇ ಗ್ರಾಮೀಣ ಕನಿಷ್ಟ ಪೌಷ್ಟಿಕತೆಯ ಪ್ರಮಾಣವನ್ನು 2200 ಕ್ಯಾಲರಿಗೆ ಇಳಿಸಲಾಯಿತು. ಈ ನಿರೂಪಣೆಯ ಆಧಾರದಲ್ಲಿ 1973–74ರಲ್ಲಿ ಗ್ರಾಮೀಣ ಬಡತನದ ಮಟ್ಟವನ್ನು ದಿನಕ್ಕೆ ಒಬ್ಬ ವ್ಯಕ್ತಿಗೆ ರೂ.49 ಮತ್ತು ನಗರಗಳಲ್ಲಿ ರೂ.56 ಎಂದು ನಿರೂಪಿಸಲಾಯಿತು. ಅದರ ಪ್ರಕಾರ ಸುಮಾರು 56ಶೇ. ಗ್ರಾಮೀಣ ಜನತೆ ಮತ್ತು 49ಶೇ.ದಷ್ಟು ನಗರಪ್ರದೇಶಗಳ ಜನಗಳು ಬಡವರು ಎಂದು ಪರಿಗಣಿಸಲಾಯಿತು.


ನಂತರ, ದೇಶದಲ್ಲಿ ಬಡತನದ ಮಟ್ಟ ಇಳಿಯುತ್ತಿಲ್ಲ ಎಂದು ಮುಜುಗರಗೊಂಡ ಸರಕಾರಗಳು, ಈ ನಿರೂಪಣೆಯನ್ನು ಕಾರ್ಯತಃ ಬದಲಿಸಿದವು. ಅಂದಿನಿಂದ ಬಡತನದ ಮಟ್ಟಗಳನ್ನು 2200/2100 ಕ್ಯಾಲರಿ ಪೌಷ್ಟಿಕತೆ ಒದಗಿಸಬಲ್ಲ ಸರಕುಗಳು ಮತ್ತು ಸೇವೆಗಳ ಮೇಲೆ ಮಾಡಬೇಕಾದ ಖರ್ಚುಗಳ ಆಧಾರದಲ್ಲಿ ನಿರ್ಧರಿಸುತ್ತಿಲ್ಲ. 1973–74ರ ಬಡತನದ ಸಂಖ್ಯೆಗಳನ್ನು ಒಂದು ಬೆಲೆ ಸೂಚ್ಯಂಕವನ್ನು ಆಧರಿಸಿದ ಹಣದುಬ್ಬರಕ್ಕೆ ಹೊಂದಿಸಿ ಲೆಕ್ಕ ಹಾಕಲಾಗುತ್ತಿದೆ. ಅವು ಕನಿಷ್ಟ ಪೌಷ್ಟಿಕತೆಯ ಮಟ್ಟಕ್ಕೆ ಅನುಗುಣವಾಗಿವೆಯೇ ಎಂಬುದರ ಗೋಜಿಗೇ ಹೋಗುತ್ತಿಲ್ಲ.

ಹೀಗೆ 1973–74 ರ ನಿಗದಿತ ಬಳಕೆ ಪ್ರಮಾಣಕ್ಕೆ ಬೆಲೆ ಸೂಚ್ಯಂಕವನ್ನು ಸರಿ–ಹೊಂದಿಸುವ ವಿಧಾನವನ್ನು ಅಂಗೀಕರಿಸಿ ಯೋಜನಾ ಆಯೋಗ ಅವಾಸ್ತವಿಕ ಬಡತನದ ಮಟ್ಟಗಳನ್ನು ಕೊಡುತ್ತಲೇ ಬಂದಿತು. ಇದು 2009–10ರಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ದಿನಕ್ಕೆ ತಲಾ ರೂ.22.4 ಮತ್ತು ನಗರ ಪ್ರದೇಶಗಳಲ್ಲಿ ರೂ. 28.7ರ ಅಸಂಬದ್ಧ ಸಂಖ್ಯೆಗಳನ್ನು ಕೊಟ್ಟಿತು. ನಂತರದ ಎರಡು ವರ್ಷಗಳ ಬೆಲೆ ಸೂಚ್ಯಂಕಕ್ಕೆ ಹೊಂದಿಸಿದಾಗ ಇದನ್ನು 2011–12ರಲ್ಲಿ ದಿನಕ್ಕೆ ತಲಾ ರೂ.26/32 ಗೆ ಏರಿಸಲಾಯಿತು. ಯೋಜನಾ ಆಯೋಗದ ಪ್ರಸಕ್ತ ಪ್ರಕಟಣೆಯಲ್ಲಿ ತೆಂಡುಲ್ಕರ್ ವಿಧಾನವನ್ನು ಬಳಸಿ ಇದನ್ನು ತುಸು ಏರಿಸಿ ರೂ. 27.20/ 33.33 ಮಾಡಲಾಗಿದೆ.

ಈ ಬಡತನದ ಮಟ್ಟಗಳು ಅಸಂಬದ್ಧ ಮಾತ್ರವೇ ಅಲ್ಲ, ನಮ್ಮ ಬಹುಪಾಲು ಜನಗಳು ಇಂದು ಹೇಗಾದರೂ ಬದುಕುಳಿಯಲು ನಡೆಸಿರುವ ಜೀವನ್ಮರಣ ಹೋರಾಟಗಳನ್ನು ಅಪಹಾಸ್ಯ ಮಾಡುವಂತವು. ನಗರ ಪ್ರದೇಶಗಳ ಬಡತನ ಮಟ್ಟದ ನಿರೂಪಣೆ ಇಂದು ಬಹಿರಂಗ ಮಾರುಕಟ್ಟೆಯಲ್ಲಿ ಒಂದು ಕೆ.ಜಿ. ಸಾಧಾರಣ ಮಟ್ಟದ ಅಕ್ಕಿಗೂ

ಪುಟ 15 ಕ್ಕೆ

ಬಡತನದ ರೇಖೆ 70ರ ದಶಕದಿಂದಲೇ ಅಪಹಾಸ್ಯಕ್ಕೆ ಒಳಗಾಗಿದೆ. 'ರೇಖೆಯನ್ನು ಕೆಳಕ್ಕೆ ತಳ್ಳಿ, ಪಾಪ, ಆ ಮನುಷ್ಯ ಸ್ವಲ್ಪ ಮಟ್ಟಿಗೆ ಅದಕ್ಕಿಂತ ತುಸು ಮೇಲೆ ಬರಲಿ' ಎನ್ನುವ ಎಡಗಡೆಯ ವ್ಯಂಗ್ಯ ಚಿತ್ರ ಆ ಕಾಲದ್ದು. ಪ್ರಖ್ಯಾತ ವ್ಯಂಗ್ಯಚಿತ್ರಕಾರ ಆರ್.ಕೆ.ಲಕ್ಷ್ಮಣ್‌ರವರದ್ದು.



1973–74 ರ ನಿಗದಿತ ಬಳಕೆ ಪ್ರಮಾಣಕ್ಕೆ ಬೆಲೆ ಸೂಚ್ಯಂಕವನ್ನು ಸರಿ–ಹೊಂದಿಸುವ ವಿಧಾನವನ್ನು ಅಂಗೀಕರಿಸಿ ಯೋಜನಾ ಆಯೋಗ ಅವಾಸ್ತವಿಕ ಬಡತನದ ರೇಖೆಗಳನ್ನು ಕೊಡುತ್ತಲೇ ಬಂದಿತು. ಇದು 2009–10ರಲ್ಲಿ ಒಂದು ರಾಷ್ಟ್ರೀಯ ಆಕ್ರೋಶವನ್ನೇ ಎಬ್ಬಿಸಿದ ಅಸಂಬದ್ಧ ಸಂಖ್ಯೆಗಳನ್ನು ಕೊಟ್ಟಿತು. ಯೋಜನಾ ಆಯೋಗದ ಪ್ರಸಕ್ತ ಪ್ರಕಟಣೆಯಲ್ಲಿ ತೆಂಡುಲ್ಕರ್ ವಿಧಾನವನ್ನು ಬಳ:ಸಿ ಇದನ್ನು ತುಸು ಏರಿಸಿ ರೂ. 27.20/ 33.33 ಮಾಡಲಾಗಿದೆ.



Please give me 32 rupees to celebrate the occasion!

ಬಡತನದ ರೇಖೆಯ ಮೇಲೆ ಬಂದ ಈ ಸಂದರ್ಭವನ್ನು ಆಚರಿಸಲು 32ರೂ. ಕೊಡಿ!

'ಕಂಪನಿ ಕೃಷಿಯನ್ನು ಹಿಮ್ಮೆಟ್ಟಿಸಿ– ರೈತ ಕೂಲಿಕಾರರನ್ನು ಸಂರಕ್ಷಿಸಿ'

ಕರ್ನಾಟಕ ಪ್ರಾಂತ ರೈತ ಸಂಘದ 15 ನೇ ರಾಜ್ಯ ಸಮ್ಮೇಳನದ ಕರೆ

ಮಲ್ಲಯ್ಯ ಜಾಲಹಳ್ಳಿ

ಕರ್ನಾಟಕದ ಪ್ರಾಂತ ರೈತ ಸಂಘದ 15ನೇ ರಾಜ್ಯ ಸಮ್ಮೇಳನದ ಅಂಗವಾಗಿ ಹಮ್ಮಿಕೊಂಡಿದ್ದ ಬೃಹತ್ ರ‍್ಯಾಲಿ ಸಿಂಧನೂರು ನಗರದ ಎಪಿಎಂಸಿ ಉದ್ಯಾನವನದಿಂದ ಜುಲೈ 18, 2013 ರಂದು ಆರಂಭವಾಯ್ತು. 15ನೇ ಸಮ್ಮೇಳನವನ್ನು ಪ್ರತಿನಿಧಿಸಿ 15 ಬೃಹತ್ ಭಾವುಟಗಳು ಮೆರವಣಿಗೆಯ ಮುಂದೆ ಗಾಂಭಿರ್ಯದಿಂದ ಸಾಗಿದವು. ಅವುಗಳ ಹಿಂದೆ ವಿಶಾಲವಾದ ರ‍್ಯಾಲಿ ಬ್ಯಾನರ್ ಹಿಡಿಯಲಾಗಿತ್ತು. ಬ್ಯಾನರ್ ಹಿಂದೆ ರಾಜ್ಯ ಮುಖಂಡರಾದ ಮಾರುತಿ ಮಾನ್ಪಡೆ, ಜಿ.ಸಿ. ಬಯ್ಯಾರೆಡ್ಡಿ, ಯು. ಬಸವರಾಜು, ಭೀಮಶಿ ಕಲಾದಗಿ, ಮಲ್ಲಯ್ಯ ಜಾಲಹಳ್ಳಿ, ಶಾಂತರಾಮ ನಾಯಕ, ಎನ್. ವೆಂಕಟಾಚಲಯ್ಯ, ಪಿ.ಆರ್. ಸೂರಿ, ಯಾದವಶೆಟ್ಟಿ ಮುಂತಾದ ಮುಖಂಡರ ನಾಯಕತ್ವದಲ್ಲಿ ಮೆರವಣಿಗೆ ಸಾಗಿತು. ಮೆರವಣಿಗೆಯ ತುಂಬೆಲ್ಲಾ ಕೆಂಬಾವುಟಗಳು ರಾರಾಜಿಸುತ್ತಿದ್ದವು.



ರ‍್ಯಾಲಿಯ ಮೋಡಿಗೆ ಸಿಂಧನೂರಿನ ಜನತೆ ದಂಗಾಗಿತ್ತು. ಕಾರ್ಯಕರ್ತರ ಘೋಷಣೆಗಳು ಮುಗಿಲು ಮುಟ್ಟುವಂತಿದ್ದವು. ಮೆರವಣಿಗೆ ಬಸ್ ನಿಲ್ದಾಣದ ಮುಂದೆ ಸಾಗುವಾಗ ಟ್ರಾಫಿಕ್ ಜಾಮ್ ಆಗಿದ್ದು ಪೋಲಿಸರು ಕೆಲಕಾಲ ಪರದಾಡುವಂತಾಯಿತು. ಮೆರವಣಿಗೆ ಮಹಾತ್ಮಗಾಂಧಿ ವೃತ್ತಕ್ಕೆ ಬಂದಾಗ ಎಸ್‌ಎಫ್‌ಐ ಕಾರ್ಯಕರ್ತರು ಮೆರವಣಿಗೆಯ ಮೇಲೆ ಹೂಮಳೆ ಸುರಿಸಿ ಸ್ವಾಗತಿಸಿ ಘೋಷಣೆಗಳನ್ನು ಹಾಕಿದ್ದು ಹೃದಯಂಗಮವಾಗಿತ್ತು. ನಂತರ ರಾಯಚೂರು ರಸ್ತೆಯಲ್ಲಿ ಸಾಗಿದ ಮೆರವಣಿಗೆ ನಗರಸಭೆ ಮೈದಾನದಲ್ಲಿ ಬಹಿರಂಗ ಸಭೆಯಾಗಿ ಮಾರ್ಪಟಿತು.

ಬಹಿರಂಗ ಸಭೆ

"ದೇಶದ ರೈತರ ಕೃಷಿಯ ನಾಶಕ್ಕೆ ಮೂಲಕಾರಣವೇ ಕಾಂಗ್ರೆಸ್ ಆಡಳಿತ. ತನ್ನ ಅಧಿಕಾರದ ಅವಧಿಯ ಉದ್ದಕ್ಕೂ ಕಾಂಗ್ರೆಸ್ ರೈತ ವಿರೋಧಿ ನೀತಿ ಅನುಸರಿದ್ದರಿಂದಾಗಿ ಇಂದು ಕೃಷಿ ಬಿಕ್ಕಟ್ಟಿಗೆ ಸಿಲುಕಿದೆ. ಈಗ ಅದೇ ಕಾಂಗ್ರೆಸ್ ನೇತೃತ್ವದ ಯುಪಿಎ –2 ಸರ್ಕಾರ ದೇಶದ ಜನತೆಗೆ ಅನ್ನ ನೀಡುವ ನೆಲವನ್ನು ವಿದೇಶಿ ಕಂಪನಿಗಳಿಗೆ ಕೊಡುವ ಹುನ್ನಾರ ನಡೆಸಿದೆ. ರೈತರು ಈ ಗಂಡಾಂತರದಿಂದ ಹೊರಬರಬೇಕಾದರೆ ಚಳುವಳಿಯೊಂದೇ ದಾರಿ", ಎಂದು ಅಖಿಲ ಭಾರತ ಕಿಸಾನ ಸಭಾದ ಜಂಟಿ ಕಾರ್ಯದರ್ಶಿ ಕಾಂ. ಕೃಷ್ಣಪ್ರಸಾದ್ ಹೇಳಿದರು. ಅವರು ಕರ್ನಾಟಕ ಪ್ರಾಂತ ರೈತ ಸಂಘದ 15ನೇ ರಾಜ್ಯ ಸಮ್ಮೇಳನದ ಬಹಿರಂಗ ಸಭೆಯನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

2010–11 ರಲ್ಲಿ ದೇಶದ ಅಭಿವೃದ್ಧಿ ದರ ಶೇ 9.7 ಇದ್ದದ್ದು 2012–13 ರಲ್ಲಿ ಶೇ 5.8 ಕ್ಕೆ ಕುಸಿದಿದೆ. ಪ್ರತಿನಿತ್ಯ 2,035 ಜನ ರೈತರು ಕೃಷಿ ತ್ಯಜಿಸುತ್ತಿದ್ದಾರೆ. ಪ್ರತಿನಿತ್ಯ 48 ರೈತರು ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ. ಕೃಷಿಗೆ ನೀಡುತ್ತಿರುವ ಸಬ್ಸಿಡಿ ಕಡಿತವಾಗುತ್ತಲೇ ಇದೆ. ಗೊಬ್ಬರ, ಕ್ರಿಮಿನಾಶಕ, ಬೀಜ, ವ್ಯವಸಾಯ ಸಲಕರಣೆಗಳ ದರಗಳು ನಿರಂತರ ಏರುತ್ತಿವೆ.



ಅದರೆ ರೈತರು ಬೆಳೆದ ಬೆಳೆಗಳಿಗೆ ವೈಜ್ಞಾನಿಕ ಬೆಂಬಲ ಬೆಲೆಗಳು ಸಿಗುತ್ತಿಲ್ಲ. ಹೀಗಾಗಿ ಕೃಷಿ ನಷ್ಟದ ವ್ಯವಹಾರ ಎನಿಸಿದೆ. ವಿಶೇಷ ಆರ್ಥಿಕ ವಲಯಗಳ ಹೆಸರಲ್ಲಿ ರೈತರ ಭೂಮಿ ಕಸಿದು ಕಂಪನಿಗಳಿಗೆ ಕೊಡಲಾಗುತ್ತಿದೆ. ಆಂಧ್ರದಲ್ಲಿ 12 ಲಕ್ಷ, ಕರ್ನಾಟಕದಲ್ಲಿ 2 ಲಕ್ಷ ಒಟ್ಟಾರೆ ದೇಶದಲ್ಲಿ 27 ಲಕ್ಷ ಹೆಕ್ಟರ್ ಕೃಷಿ ಭೂಮಿ ಕಂಪನಿಗಳಿಗೆ ನೀಡುವ ಮೂಲಕ ಕೇಂದ್ರ ರಾಜ್ಯ ಸರಾಕಾರಗಳೇ ಭೂ ದಲ್ಲಾಳಿಗಳ ಪಾತ್ರ ನಿರ್ವಹಿಸುತ್ತಿವೆ.

ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ಬಂಡವಾಳಕ್ಕೆ ಅನುಮತಿ ನೀಡುವ ಮೂಲಕ ದೇಶದಲ್ಲಿ ವ್ಯಾಪಕವಾಗಿ ಕಂಪನಿ ಕೃಷಿಗೆ ಅವಕಾಶ ಕಲ್ಪಿಸಲಾಗಿದೆ. ಇನ್ನು ಮುಂದೆ ರೈತರು ಒಪ್ಪಂದ ಕೃಷಿ ಮತ್ತು ಕಂಪನಿ ಕೃಷಿಗಳ ಹಿಡಿತಕ್ಕೆ ಸಿಲುಕಿ ನರಳುವುದು ಖಂಡಿತ. ಒಂದು ಕಡೆ ಕೃಷಿ ಮತ್ತೊಂದು ಕಡೆ ರೈತರು ಸಂಕಷ್ಟಗಳಿಗೆ ಸಿಲುಕಿ ನರಳುತ್ತಿದ್ದರೂ ಸಹ ವಿರೋಧ ಪಕ್ಷದ ನಾಯಕಿ ಸುಷ್ಮಾ ಸ್ವರಾಜ್ ಚಕಾರ ಎತ್ತುತ್ತಿಲ್ಲ. ಜನರನ್ನು ಒಡೆದು ಧರ್ಮದ ಹೆಸರಿನಲ್ಲಿ ಅಧಿಕಾರಕ್ಕೆ ಬರುವ ಏಕೈಕ ಗುರಿ ಹೊಂದಿದ್ದಾರೆ. ಮಹಾತ್ಮಗಾಂಧಿಯನ್ನು ಕೊಂದ ಸಂತತಿಯ ಮೋದಿಯನ್ನು ಪ್ರಧಾನ ಮಂತ್ರಿಯಾಗಿ ಮಾಡಲು ಬಿಜೆಪಿ ಹಾತೊರೆಯುತ್ತಿದೆ. ಇವರ‍್ಯಾರಿಗೂ ದೇಶದ ಅಭಿವೃದ್ಧಿ, ರೈತರ ಸಂಕಷ್ಟ ಕಾಣುತ್ತಿಲ್ಲ. ಇಂತಹ ಸಂದರ್ಭದಲ್ಲಿ ತಮ್ಮ ಭೂಮಿ ರಕ್ಷಣೆಗಾಗಿ, ಕೃಷಿರಕ್ಷಣೆಗಾಗಿ ರೈತರೆಲ್ಲಾ ಒಂದಾಗಿ ಬೃಹತ್ ಹೋರಾಟಗಳಿಗೆ ಮುಂದಾಗಬೇಕಿದೆ ಎಂದು ಕೃಷ್ಣ ಪ್ರಸಾದ್ ಕರೆಕೊಟ್ಟರು.

ನೀರಾವರಿ, ಸಬ್ಸಿಡಿ, ಮಾರುಕಟ್ಟೆ, ಸಾಲ ಮುಂತಾದ ಮೂಲ ಸೌಕರ್ಯಗಳನ್ನು ಒದಗಿಸಿ ಕೃಷಿಯಿಂದ ಹಿಮ್ಮುಖರಾಗುತ್ತಿರುವ ರೈತರನ್ನು ಆಕರ್ಷಿಸಬೇಕಾಗಿದೆ. ಆದರೆ ಮುಖ್ಯಮಂತ್ರಿ ಸಿದ್ದರಾಮಯ್ಯ ವಿದೇಶಿಯರಿಗೆ ಕೃಷಿಯಲ್ಲಿ ಪ್ರವೇಶ ಕೊಡುವ ಮೂಲಕ ತನ್ನ ನಿಷ್ಟೆ ಓಟು ಹಾಕಿದ ರೈತರಿಗಲ್ಲ ಹೈಕಮಾಂಡಿಗೆ ಎಂದು ಸಾಬೀತು ಮಾಡಿದ್ದಾರೆ. ರಾಜ್ಯದಲ್ಲಿ ರೈತರ ಭೂಮಿ ರಿಯಲ್ ಎಸ್ಟೇಟುದಾರರಿಗೆ ಬಲಿಯಾಗಲು ಬಿಡದಂತೆ ಹೋರಾಟಗಳಿಗೆ ಹೋಗಬೇಕಾಗಿದೆಯೆಂದು ಸಂಘದ ಪ್ರಧಾನ ಕಾರ್ಯದರ್ಶಿ ಜಿ.ಸಿ. ಬಯ್ಯಾರೆಡ್ಡಿ ಹೇಳಿದರು.

ಕರ್ನಾಟಕ ಪ್ರಾಂತ ಕೃಷಿಕೂಲಿಕಾರ ಸಂಘದ ರಾಜ್ಯ ಉಪಾಧ್ಯಕ್ಷ ಜಿ.ಎನ್. ನಾಗರಾಜ ಮಾತನಾಡಿ ಕಂಕುಳಲ್ಲಿ ದೊಣ್ಣೆ ಕೈಯಲ್ಲಿ ಶರಣಾರ್ಥಿ ಎನ್ನುತ್ತಿದೆ ಕಾಂಗ್ರೆಸ್. ಕಾಂಗ್ರೆಸ್ ಮತ್ತು ಬಿಜೆಪಿ ಒಂದೇ ಘಟಸರ್ಪದ ಎರಡು ತಲೆಗಳು. ಒಂದು ತಲೆ 5 ವರ್ಷ ವಿಶ್ರಾಂತಿ ಪಡೆದರೆ ಇನ್ನೊಂದು ತಲೆ 5 ವರ್ಷ ವಿಷ ಕಕ್ಕುತ್ತಿರುತ್ತದೆ. ರೈತರಲ್ಲದವರಿಗೆ ಭೂಮಿ ಖರೀದಿಸುವ ಅವಕಾಶ, ವಸತಿ ಖಾತೆಗೆ 500 ಕೋಟಿ ಹಣ ಕಡಿತ ಇನ್ನೂ ಹಲವಾರು ಜನಪರ ಯೋಜನೆಗಳ ಹಣ ಕಡಿತ ಮಾಡುವ ಮೂಲಕ ಕಾಂಗ್ರೆಸ್ ತಾನೆಷ್ಟು ಜನವಿರೋಧಿ ಎಂದು ತೋರಿಸಿ ಕೊಟ್ಟಿದೆ ಎಂದರು.

ಸಂಘದ ರಾಜ್ಯ ಉಪಾಧ್ಯಕ್ಷ ಯು. ಬಸವರಾಜು ಮಾತನಾಡಿ ಬಹುರಾಷ್ಟ್ರೀಯ ಕಂಪನಿಗಳ ಗುಲಾಮಗಿರಿ ಮಾಡಲು ನಾಮುಂದು ತಾಮುಂದು ಎಂದು ಸ್ಪರ್ಧಿಸುತ್ತಿರುವ ಕಾಂಗ್ರೆಸ್ ಮತ್ತು ಬಿಜೆಪಿ ಕೂಟಗಳನ್ನು ಒದ್ದು ಓಡಿಸುವಂತ ಕಾಲಘಟ್ಟ ಈಗ ಬಂದಿದೆ. ರೈತರು ಐಕ್ಯ ಹೋರಾಟಕ್ಕೆ ಮುಂದಾಗ ಬೇಕೆಂದು ಹೇಳಿದರು.

ರಾಜ್ಯಾಧ್ಯಕ್ಷ ಮಾರುತಿ ಮಾನ್ಪಡೆ ಮಾತನಾಡಿ ಎಂ.ಎಸ್. ಸ್ವಾಮಿನಾಥನ್ ವರದಿಯನ್ನು 7 ವರ್ಷ ಗಳಿಂದ ಜಾರಿಗೊಳಿಸದೆ ಮೂಲೆಗುಂಪು ಮಾಡುವ ಮೂಲಕ ಯುಪಿಎ ಸರ್ಕಾರ ಜನತೆಗೆ ದ್ರೋಹ ಬಗೆದಿದೆ. ರಾಜ್ಯದಲ್ಲಿ ಕಳೆದ ವರ್ಷ 1,365 ರೈತರು ಆತ್ಮಹತ್ಯೆಗೆ ಶರಣಾದರು. ರೈತರನ್ನು ನಿರ್ಲಕ್ಷಿಸುವ ಸರಕಾರ ದೇಶಿ–ವಿದೇಶಿ ಭೂ ಗಳ್ಳರಿಗೆ ಮಣೆ ಹಾಕಲು ಮುಂದಾಗಿದೆ. 371 ಕಲಂ ಜಾರಿಗೆ ಬಂದಿರುವುದರಿಂದ ಹೈದ್ರಾಬಾದ್ ಕರ್ನಾಟಕದ ಸಂಕಷ್ಟಗಳೆಲ್ಲಾ ಪರಿಹಾರವಾಗುತ್ತವೆ ಎಂದು ಭ್ರಮೆ ಹುಟ್ಟಿಸಲಾಗುತ್ತಿದೆ. ಸರ್ಕಾರ ತನ್ನಲ್ಲಿರುವ ಖಾಲಿ ಹುದ್ದೆಗಳನ್ನು ತುಂಬದೆ ಗುತ್ತಿಗೆಗೆ ಕೊಡುತ್ತಿರುವಾಗ ನೌಕರಿ ಭ್ರಮೆಗೆ ಬಲಿಯಾಗುವುದು ಬೇಡ. ಸರಕಾರ ಕೇವಲ ಪೋಲೀಸ್ ಮತ್ತು ಶಿಕ್ಷಣ ಇಲಾಖೆ ನೌಕರಿಗಳನ್ನು ಬಿಟ್ಟು ಬೇರೆ ಹುದ್ದೆಗಳನ್ನು ಭರ್ತಿ ಮಾಡುವುದನ್ನು ಕೈ ಬಿಟ್ಟು ಬಹಳ

ವರ್ಷಗಳೇ ಕಳೆದಿವೆ. ಹೈದರಾಬಾದ್ ಕರ್ನಾಟಕ ಭಾಗದ ಜನರ ಕೊಳ್ಳುವ ಸಾಮರ್ಥ್ಯ ಹೆಚ್ಚಿಸಲು ಸರಕಾರದ ಹತ್ತಿರ ಯಾವುದೇ ಯೋಜನೆಗಳಿಲ್ಲ ಎಂದರು.

ಸಾವಿರಾರು ಜನರು ಭಾಗವಹಿಸಿದ ಬಹಿರಂಗ ಸಭೆಗೆ ಹೆಚ್.ವಿ. ಗುಡಿ ಸ್ವಾಗತ ಮಾಡಿದರು. ವಂದನಾರ್ಪಣೆಯನ್ನು ನರಸಿಂಹಪ್ಪ ಮಾಡಿದರು. ವೇದಿಕೆಯಲ್ಲಿ ಪದಾಧಿಕಾರಿಗಳಾದ ಭೀಮಶಿ ಕಲಾದಗಿ, ಹೆಚ್. ವೆಂಕಟಾಚಲಯ್ಯ, ಮಲ್ಲಯ್ಯ ಜಾಲಹಳ್ಳಿ, ಶಾಂತರಾಮ್‌ನಾಯ್ಕ, ಯಾದವ ಶೆಟ್ಟಿ, ನರಸಣ್ಣ ನಾಯ್ಕ ಉಪಸ್ಥಿತರಿದ್ದರು.

ಆಂತರಿಕ ಚರ್ಚೆ

ಕರಡು ವರದಿಯನ್ನು ಪ್ರಧಾನ ಕಾರ್ಯದರ್ಶಿ ಜಿ.ಸಿ. ಬಯ್ಯಾರೆಡ್ಡಿ ಮಂಡಿಸಿದರು. ಅದರ ಮೇಲೆ ಚರ್ಚೆ ಮಾಡುವ ವಿಧಾನ ಹೇಗಿರಬೇಕು ಎಂದು ಕೃಷ್ಣ ಪ್ರಸಾದ್ ವಿವರಿಸಿದರು. ಜಿಲ್ಲಾವಾರು ಗುಂಪುಗಳಾಗಿ ಮಾಡಿ ಚರ್ಚೆಗೆ ಆಸ್ಪದ ನೀಡಲಾಯಿತು.

36 ಪ್ರತಿನಿಧಿಗಳು ಒಟ್ಟಾರೆ ಚರ್ಚೆಯಲ್ಲಿ



ಭಾಗವಹಿಸಿದರು. ಪ್ರಮುಖವಾಗಿ ಭೂಮಿ ಪ್ರಶ್ನೆ ಬಗ್ಗೆ ಹೆಚ್ಚು ಚರ್ಚೆ ಬಂತು. ಬಗರ್ ಹುಕುಂ ಸಾಗುವಳಿದಾರರ ಆತಂಕ, ಅರಣ್ಯ ಇಲಾಖೆಯ ದೌರ್ಜನ್ಯದ ಪ್ರಕರಣಗಳು, ಸರಕಾರದ ದ್ವಂದ್ವ ನಿಲುವುಗಳು, ತಿರಸ್ಕೃತ ಅರ್ಜಿದಾರರಿಗೆ ಆದ ಅನ್ಯಾಯಗಳು ಎಳೆ–ಎಳೆಯಾಗಿ ಉದಾಹರಣೆಗಳ ಸಹಿತ ಮಂಡನೆಯಾದವು.

ಈ ಅವಧಿಯಲ್ಲಿ ಉದ್ಯೋಗ ಖಾತ್ರಿ ಯೋಜನೆಯಲ್ಲಾದ ಹಿನ್ನಡೆಗಳು ಮತ್ತು ಸರ್ಕಾರ ಪ್ರತಿ ವರ್ಷ ಹೊಸ ಪದ್ದತಿ ತರುವ ಮೂಲಕ ಹುಟ್ಟಿಸುತ್ತಿರುವ ಗೊಂದಲಗಳ ಬಗ್ಗೆ ಚರ್ಚೆಯಾಯಿತು.

ಮನೆ–ನಿವೇಶನಗಳಿಗೆ ನೀಡಿದ ಆದ್ಯತೆಯಿಂದಾಗಿ ಸಂಘಟನೆಯ ಬೆಳವಣಿಗೆಗೆ ಯಾವ ರೀತಿಯಲ್ಲಿ ಅನುಕೂಲವಾಗಿದೆಯೆಂದು ಪ್ರಸ್ತಾಪ ಮಾಡಿ ಮನೆ– ನಿವೇಶನಗಳ ಪ್ರಶ್ನೆಗಳ ಇತ್ಯರ್ಥಕ್ಕಾಗಿ ದೀರ್ಘ ಕಾಲದ ಹೋರಾಟಗಳ ಅವಶ್ಯಕತೆ ಪ್ರತಿಪಾದಿಸಿದರು.

ಪಂಪ್‌ಸೆಟ್ ನೀರಾವರಿ, ಶಾಶ್ವತ ನೀರಾವರಿ ಮತ್ತು ವಿದ್ಯುತ್ ಪ್ರಶ್ನೆಗಳ ಮೇಲೆ ಹಲವರು ಚರ್ಚಿಸಿದರು.

ಕಂಪನಿ ಕೃಷಿ ಮತ್ತು ಭೂ ಮಾಫಿಯಾಗಳ ಬಗ್ಗೆ ಮುಖ್ಯವಾಗಿ ಹಲವು ಸಂಗಾತಿಗಳು ಪ್ರಸ್ತಾಪಿಸಿ ಸಂಘರ್ಷಾತ್ಮಕ ಮತ್ತು ದೃಢ ಹೋರಾಟಗಳಿಗೆ ನಾವು ಮುಂದಾಗಬೇಕಾದ ಕಾಲಘಟ್ಟ ಬಂದಿದೆ ಎಂದು ಅಭಿಪ್ರಾಯಪಟ್ಟರು.

ಚರ್ಚೆಯಲ್ಲಿ ಭಾಗವಹಿಸಿದ ಬಹುತೇಕ ಪ್ರತಿನಿಧಿಗಳು ಸದಸ್ಯತ್ವದಲ್ಲಿನ ನಿರ್ಲಕ್ಷ್ಯದ ಕುರಿತು ಗಮನ ಸೆಳೆದರು. ಹೋರಾಟಗಳಿಂದ ಉಂಟಾಗುವ ಪ್ರಭಾವದ ಕನಿಷ್ಟ ಭಾಗಕ್ಕೂ ಸದಸ್ಯತ್ವ ಮಾಡಿಸುತ್ತಿಲ್ಲ. ಗ್ರಾಮ ಸಮ್ಮೇಳನಗಳ ಬಗ್ಗೆ ಸಾಕಷ್ಟು ಗಮನ ಕೊಟ್ಟಿಲ್ಲ. ಹೋರಾಟಗಳಿಂದಾಗಿ ಈ ಅವಧಿಯಲ್ಲಿ ಐದಾರು ಜಿಲ್ಲೆಗಳಲ್ಲಿ ಹೊಸದಾಗಿ ಸಂಘ ವಿಸ್ತಾರವಾಗಿದೆ. ಆದರೆ ಸಂಘಟನೆ ಗಟ್ಟಿಗೊಂಡಿಲ್ಲ ನಾಯಕತ್ವದಲ್ಲಿ ಐಕ್ಯತೆಯ ಕೊರತೆಗಳಿವೆ. ಕೆಲಸದ ಹಂಚಿಕೆ ಸರಿಯಾಗಿ ಮಾಡಿಕೊಳ್ಳುತ್ತಿಲ್ಲ. ಈ ಎಲ್ಲಾ ನ್ಯೂನ್ಯತೆಗಳ ಮಧ್ಯದಲ್ಲೂ ಸಂಘಟನೆ ಸಾಧನೆ ಮಾಡಿದೆ ಎಂದು ಪ್ರತಿನಿಧಿಗಳು ಗುರುತಿಸಿದರು.

23 ಜಿಲ್ಲೆಗಳಿಂದ 271 ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಅವರಲ್ಲಿ 18 ಮಹಿಳೆಯರು.

ನೂತನ ಸಮಿತಿ ಆಯ್ಕೆ

ರಾಜ್ಯ ಸಮ್ಮೇಳನವು ಈ ಕೆಳಕಂಡ ಸದಸ್ಯರ ನೂತನ ರಾಜ್ಯ ಸಮಿತಿಯನ್ನು ಆಯ್ಕೆ ಮಾಡಿತು ಮತ್ತು ನೂತನ ಸಮಿತಿಯು ಸಭೆ ಸೇರಿ ಪದಾಧಿಕಾರಿಗಳನ್ನು ಆರಿಸಿತು.

ಅಧ್ಯಕ್ಷರು – ಮಾರುತಿ ಮಾನ್ಪಡೆ

ಉಪಾಧ್ಯಕ್ಷರು – ಜಿ.ವಿ. ಶ್ರೀರಾಮರೆಡ್ಡಿ,
ಭೀಮಶಿ ಕಲಾದಗಿ,
ಜಿ.ಸಿ. ಬಯ್ಯಾರೆಡ್ಡಿ,
ಎನ್. ವೆಂಕಟಾಚಲಯ್ಯ,
ಮಲ್ಲಯ್ಯ ಜಾಲಹಳ್ಳಿ,
ಶಾಂತರಾಮ ನಾಯಕ.

ಪ್ರಧಾನ ಕಾರ್ಯದರ್ಶಿ – ಯು. ಬಸವರಾಜು.



ಕಾರ್ಯದರ್ಶಿಗಳು – ಯಾದವಶೆಟ್ಟಿ ಸಿ. ಗೋಪಿನಾಥ, ಪಿ.ಆರ್. ಸೂರಿ, ಗೌರಮ್ಮ ಪಾಟೀಲ, ಎಂ. ಶ್ರೀನಿವಾಸ, ಜಿ. ನಾಗರಾಜ.

ರಾಜ್ಯಸಮಿತಿಯ ಸದಸ್ಯರು : ಆರ್. ಚಂದ್ರ ತೇಜಸ್ವಿ, ನರಸಣ್ಣ ನಾಯಕ, ಅಣ್ಣಾರಾಯ ಈಳಿಗೇರ, ನಾಗೇಂದ್ರಮ್ಮ ಗುತ್ತೇದಾರ, ರಾಮಪ್ಪ, ಬಿ.ಎಸ್.ಸೊಪ್ಪಿನ್, ಶರಣಬಸಪ್ಪ ಮಮಶೆಟ್ಟಿ, ಟಿ.ಎಂ. ವೆಂಕಟೇಶ, ಆರ್.ಕೆ. ದೇಸಾಯಿ ಟಿ.ಎಲ್. ಕೃಷ್ಣೇಗೌಡ, ಕೆ.ಜಿ. ವಿರೇಶ್, ಟಿ. ಯಶವಂತ, ಎಸ್.ಜಿ. ವನಜ, ರಂಗಪ್ಪ ದಾಸರ, ಸಾಗರ, ಮಲಿಯಪ್ಪ, ನವೀನ ಕುಮಾರ, ರವಿಚಂದ್ರಾ ರೆಡ್ಡಿ, ಅಶೋಕ ಕುಮಾರ, ನಾಗೇಶ, ಕೆ. ಬಸವರಾಜು, ಹರಿದಾಸ ಭಟ್ಟ, ಶ್ಯಾಮನಾಥ ನಾಯಕ, ಅಡಿವೆಪ್ಪ, ಭೀಮಾಶಂಕರ, ಎಸ್. ವೆಂಕಟೇಶ್.

ಪ್ರಮುಖ ನಿರ್ಣಯಗಳು

ರಾಜ್ಯಕ್ಕೆ ಶಾಶ್ವತ ನೀರಾವರಿ ಒದಗಿಸಿ :

ರಾಜ್ಯದಲ್ಲಿ ಬಹುಮುಖ್ಯವಾಗಿ ಡಾ। ಪರಮಶಿವಯ್ಯ ವರದಿ ಅನುಷ್ಠಾನ ಮಾಡಬೇಕಿದೆ. ಆ ಮೂಲಕ ಬರಪೀಡಿತ ಬಯಲು ಸೀಮೆಯ 9 ಜಿಲ್ಲೆಗಳಿಗೆ ಶಾಶ್ವತ ನೀರಾವರಿ ಕಲ್ಪಿಸಬೇಕಾಗಿದೆ. ಮಲೆನಾಡಿನ ಘಟ್ಟಗಳಲ್ಲಿ 6000 ಮಿ.ಮಿ ವರೆಗೆ ಮಳೆಯಾಗುತ್ತದೆ ಸುಮಾರು 2000 ಟಿಎಂಸಿ ನೀರು ವ್ಯರ್ಥವಾಗಿ ಅರಬ್ಬಿ ಸಮುದ್ರ ಸೇರುತ್ತಿದೆ. ಇದರಲ್ಲಿ ಸ್ವಲ್ಪ ನೀರನ್ನು ತಿರುವು ನಾಲೆಗಳ ಮುಖಾಂತರ ಬಯಲು ಸೀಮೆಯ 9 ಜಿಲ್ಲೆಗಳಿಗೆ ಹರಿಸಬಹುದಾಗಿದೆ. ಹತ್ತಾರು ಸಾವಿರ ಕೆರೆಗಳನ್ನು ತುಂಬಿಸುವ ಮೂಲಕ ಅಂತರ್ಜಲ ಹೆಚ್ಚಾಸಬಹುದಾಗಿದೆ. ಜನ – ಜಾನುವಾರಗಳಿಗೆ ಶಾಶ್ವತ ಕುಡಿಯುವ ನೀರು ಕಲ್ಪಿಸಲು ಸಾಧ್ಯವಿದೆ.

ಕೃಷ್ಣಾ "ಎ" ಸ್ಕೀಮ್ ಮತ್ತು "ಬಿ" ಸ್ಕೀಮ್ ಸೇರಿ 911 ಟಿಎಂಸಿ ನೀರು ಬಳಸಿಕೊಳ್ಳಬೇಕಾಗಿದೆ. 5 ವರ್ಷಗಳಲ್ಲಿ 50,000 ಕೋಟಿ ಮೀಸಲಿಟ್ಟು ಇಷ್ಟನ್ನು ಮಾಡುತ್ತೇನೆ ಎನ್ನುವ ಸರಕಾರದ ನಿಲುವು ಅವೈಜ್ಞಾನಿಕವಾಗಿದೆ. ಕಾರಣ ಆಂಧ್ರ ಮಾದರಿಯಲ್ಲಿ ಬ್ಯಾಂಕ್‌ಗಳಲ್ಲಿ ಸಾಲ ಎತ್ತುವ ಮೂಲಕ ಹಣ ಹೊಂದಿಸಬೇಕು. ಆಲಮಟ್ಟಿ ಜಲಾಶಯದ ಎತ್ತರವನ್ನು 524 ಮೀಟರ್ ಬದಲು 530 ಮೀಟರ್‌ವರೆಗೆ ಎತ್ತರಿಸಬೇಕು. ಆಗಮಾತ್ರ ನಮ್ಮ ಪಾಲಿನ ನೀರನ್ನು ಶೇಖರಿಸಿಕೊಳ್ಳಲು ಸಾದ–
– ಕಾವೇರಿ ಕೊಳ್ಳಕ್ಕೆ 500 ಕೋಟಿ ಮೀಸಲಿಡುವ ಬದಲು ಅಲ್ಲಿಯ ಸಿಂಡಿಕೇಟ ನಡೆಸಿರುವ ಭ್ರಷ್ಟಾಚಾರದ ತನಿಖೆಗೆ ಸರಕಾರ ಮುಂದಾಗಬೇಕಿದೆ.


ಡಾ। ಸ್ವಾಮಿನಾಥನ್ ವರದಿ ಜಾರಿಗೊಳಿಸಿ :–

ರೈತರು ಬೆಳೆದ ಬೆಳೆಗಳಿಗೆ ಹೇಗೆ ವೈಜ್ಞಾನಿಕವಾಗಿ ಬೆಂಬಲ ಬೆಲೆ ನಿಗದಿ ಪಡಿಸಬೇಕೆಂಬುದನ್ನು ಡಾ। ಸ್ವಾಮಿನಾಥನ್ ತಮ್ಮ ವರದಿಯಲ್ಲಿ ತೋರಿಸಿದ್ದಾರೆ. ಇಂತಹ ವೈಜ್ಞಾನಿಕ ವರದಿ ಜಾರಿಗೊಳಿಸಿದಾಗ ಮಾತ್ರ ಕೃಷಿ ಉಳಿಯುತ್ತದೆ. ರೈತ ಸ್ವಾವಲಂಭಿಯಾಗುತ್ತಾನೆ. ಆದರೆ ಈ ವರದಿ ಜಾರಿಗೊಳಿಸಲು ಸರ್ಕಾರ–ಕ್ಕೆ ಇಚ್ಛಾಶಕ್ತಿಯಿಲ್ಲ. ಬದಲು ಹಲ್ಲಿಲ್ಲದ ಕೃಷಿ ಬೆಲೆ ನಿಗದಿ ಆಯೋಗ ರಚಿಸಿ ಕೈ ತೊಳೆದು ಕೊಂಡಿರುವುದು ಖಂಡನೀಯ.

ಕೃಷಿ ವಾಣಿಜ್ಯ ಅಭಿವೃದ್ಧಿ ನೀತಿ –2011 ರೈತರಿಗೆ – ಕೃಷಿಗೆ ಮಾರಕವಾದ ನೀತಿಯಾಗಿದ್ದು ಅದನ್ನು ಕೈ ಬಿಡಬೇಕೆಂದು ಒತ್ತಾಯಿಸಲಾಗುವುದು.

ಕಾರ್ಯಕ್ರಮ : –

ಈ ಎಲ್ಲಾ ನಿರ್ಣಯಗಳ ಜಾರಿಗಾಗಿ ಅಗಸ್ಟ್ – 3ನೇ ವಾರದಲ್ಲಿ ಜಿಲ್ಲಾಧಿಕಾರಿ ಕಛೇರಿಗಳ ಮುಂದೆ ಧರಣಿ ನಡೆಸಲಾಗುವುದು. ಅಲ್ಲದೆ ನೈಸ ಕಂಪನಿಗೆ ನೀಡಲಾದ ಹೆಚ್ಚುವರಿ 4.000 ಎಕರೆ ಭೂಮಿಯನ್ನು ರೈತರಿಗೆ ಒದಗಿಸಲು ಒತ್ತಾಯಿಸಿ ಮೈಸೂರಿನಿಂದ ಬೆಂಗಳೂರು ವರೆಗೆ ಪಾದಯಾತ್ರೆ ನಡೆಸಲಾಗುವುದು.



ನೂತನ ರಾಜ್ಯಾಧ್ಯಕ್ಷರಾಗಿ ಕಾಂ. ಮಾರುತಿ ಮಾನ್ಪಡೆ.



ನೂತನ ಪ್ರಧಾನ ಕಾರ್ಯದರ್ಶಿಯಾಗಿ ಕಾಂ. ಯು. ಬಸವರಾಜು.

ಕೇರಳ ಯುಡಿಎಫ್ ಸರ್ಕಾರ: ಇನ್ನಷ್ಟು ಹಗರಣಗಳ ಕಳಂಕ

ಕಾಂಗ್ರೆಸ್ ಪಕ್ಷದ ಭಂಡತನದಿಂದಷ್ಟೆ ಕೇರಳದ ಚಾಂಡಿ ಸರ್ಕಾರ ಮುಂದುವರಿದಿದೆ. ಒಂದರ ಹಿಂದೊಂದು ಹಗರಣಗಳು ಬಯಲಾಗುತ್ತಿವೆ. – ಸಿಮುಸ್ಥಿ

ಹಗರಣಗಳ ಮೇಲೆ ಹಗರಣಗಳು. ಕಳಂಕದ ಮೇಲೆ ಕಳಂಕ. ಸಾಕ್ಷಿಗಳ ಮೇಲೆ ಸಾಕ್ಷಿ ಆಧಾರಗಳ ಪತ್ತೆ. ತತ್ತರಿಸುತ್ತಿರುವ ಕಾಂಗ್ರೆಸ್ ನೇತೃತ್ವದ ಸರ್ಕಾರ. ಇದು ಈಗಿನ ಕೇರಳದ ರಾಜಕಾರಣದ ಚಿತ್ರಣ.


ಬಹುಕೋಟಿ ಸೋಲಾರ್ ಹಗರಣ ಕೇರಳದ ಆಡಳಿತಾರೂಢ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಸರ್ಕಾರವನ್ನು ಈಗ ಇಕ್ಕಟ್ಟಿಗೆ ಸಿಲುಕಿಸಿರುವುದು. ಸ್ವತಃ ಸಿಎಂ ಉಮ್ಮನ್ ಚಾಂಡಿ ಕುರ್ಚಿ ಅಲುಗಾಡಿರುವುದು ಈಗ ಎಲ್ಲರಿಗೂ ಗೊತ್ತಿರುವ ವಿಷಯ.

ಈಗ ಲೈಂಗಿಕ ಹಗರಣ

ಕೆ.ಪಿ. ಗಿರೀಶ್ ಎಂಬಾತ ಕೇರಳದ ಮುಖ್ಯಮಂತ್ರಿಗಳ ಆಪ್ತ ಸಿಬ್ಬಂದಿಗಳಲ್ಲಿ ಒಬ್ಬ. ಈಗ ಈ ಗಿರೀಶ್‌ನನ್ನು ಸರ್ಕಾರ ವಜಾ ಮಾಡಿದೆ. ಯಾಕೆ? ಯಾಕೆಂದರೆ ಈ ಮನುಷ್ಯನ ಮೇಲೆ ಒಂದು ಗಂಭೀರ ಆರೋಪ ಬಂದಿದೆ. ಅದು ಸಾಮಾನ್ಯ ಅರೋಪವಲ್ಲ. ತನ್ನ ಅಧಿಕಾರ ಸ್ಥಾನದ ಪ್ರಭಾವ ಬಳಸಿ ಶಾಲಾ ಶಿಕ್ಷಕಿಯೊಬ್ಬರನ್ನು ಲೈಂಗಿಕವಾಗಿ ದುರ್ಬಳಕೆ ಮಾಡಿಕೊಳ್ಳಲು ಯತ್ನಿಸಿದ ಆರೋಪ ಮತ್ತು ಅವರಿಗೆ ಕಿರುಕುಳ ಕೊಟ್ಟ ಆರೋಪ.

ಕೊಲ್ಲಂ ಜಿಲ್ಲೆಯ ಯುವ ಶಾಲಾ ಶಿಕ್ಷಕಿಯೊಬ್ಬರು 18 ತಿಂಗಳ ಹಿಂದೆ ತಮ್ಮ ಉದ್ಯೋಗ ಸಂಬಂಧವಾದ ಸಮಸ್ಯೆಯ ವಿಷಯವಾಗಿ ಮುಖ್ಯಮಂತ್ರಿಗಳ ಕಾರ್ಯಾಲಯವನ್ನು ಸಂಪರ್ಕಿಸಿ ತಾವು ಮುಖ್ಯ ಮಂತ್ರಿಗಳನ್ನು ಖುದ್ದು ಕಾಣ ಬೇ-ಕೆಂದು ಕೇಳುತ್ತಾರೆ. ಈ ಸನ್ನಿವೇಶವನ್ನು ಬಳಸಿಕೊಂಡು ತಮ್ಮ ವಿಕೃತ ಬಯ-ಕೆ ತೀರಿಸಿಕೊಳ್ಳಲು ಯೋಚಿಸಿದ ಗಿರೀಶ್ ಲೈಂಗಿಕವಾಗಿ ತನ್ನ ಜೊತೆ ಸಹಕರಿಸಿದರೆ ಮುಖ್ಯಮಂತ್ರಿಗಳ ಖುದ್ದು ಭೇಟಿಗೆ ಅನುಕೂಲ ಮಾಡಿಕೊಡುವೆ ಎಂದು ಪುಸಲಾಯಿಸಲು ಯತ್ನಿಸಿದನಂತೆ. ಈ ಪ್ರಸ್ತಾಪಕ್ಕೆ ಶಿಕ್ಷಕಿ ತೀವ್ರವಾಗಿ ಆಕ್ಷೇಪಿಸಿದ ಮೇಲೂ ಗಿರೀಶ್ ತನ್ನ ಪ್ರಯತ್ನವನ್ನು ಬಿಡದೇ ಪೋನ್ ಮಾಡಿ ಹಿಂಸೆ ಕೊಟ್ಟನಂತೆ. ಅದು ಸಾಲದೆಂದು ಶಿಕ್ಷಕಿಯ ಪೋನ್ ನಂಬರನ್ನು ಬೇರೆಯವರಿಗೆ ಕೊಟ್ಟು ಅವರಿಂದಲೂ ಪೋನ್ ಮಾಡಿಸಿ ಕಿರುಕುಳ ಮುಂದುವರಿಸಿದನಂತೆ.

ಈಗ ಮಹಿಳೆ ದೂರು ನೀಡಿದ್ದಾರೆ. ಗಿರೀಶ್ ಅಮಾನತ್ತು ಆಗಿದೆ. ಈ ವಿಷಯದಲ್ಲಿ ಸರ್ಕಾರ ಮತ್ತೊಂದು ಪ್ರಮಾದ ಮಾಡಿತು. ಸೂಕ್ಷವಾದ ವಿಷಯ. ಆದರೆ ಸರ್ಕಾರ ದೂರುಕೊಟ್ಟ ಶಿಕ್ಷಕಿಯ ಹೆಸರು ಬಹಿರಂಗ ಮಾಡಿತು. ಈ ಬಗ್ಗೆ ಸರ್ಕಾರ ತೀವ್ರ ಟೀಕೆಗೆ ಗುರಿಯಾಗಿದೆ. ಅಧಿಕಾರದ ಚುಕ್ಕಾಣಿ ಹಿಡಿದ ಈ ಜನಕ್ಕೆ ಈ ವಿಷಯದಲ್ಲಿ ಸುಪ್ರಿಂ ಕೋರ್ಟ್ ನಿರ್ದೇಶನ ಕೂಡ ನೆನಪಿಲ್ಲ. ಶಿಕ್ಷಕಿ ಸರ್ಕಾರದ ಈ ಕ್ರಮದ ವಿರುದ್ದ ನ್ಯಾಯಾಲಯಕ್ಕೆ ಹೋಗಿದ್ದಾರೆ.



ಇನ್ನು 'ಸೋಲಾರ್ ವಿದ್ಯುತ್' ಭ್ರಷ್ಟಾಚಾರದ ಹಗರಣದಲ್ಲಿ ದಿನೇ ದಿನೇ ಸಚಿವರು, ನಾಯಕರು ಹಗರಣದೊಂದಿಗೆ ತಳಕು ಹಾಕಿರುವ ಬಗ್ಗೆ ಹೊಸ ಸಾಕ್ಷ್ಯಗಳು ದೊರಕುತ್ತಿದ್ದು, ಜನರ ಪ್ರತಿಭಟನೆಗಳೂ ವ್ಯಾಪಕಗೊಳ್ಳುತ್ತಿವೆ. ಮುಖ್ಯಮಂತ್ರಿಗಳು ಭಾಗವಹಿಸುವ ಎಲ್ಲ ಕಾರ್ಯಕ್ರಮಕ್ಕೂ ಡಿವೈಎಫ್ಐ ಮತ್ತು ಎಸ್‌ಎಫ್‌ಐ, ಎಐಎಸ್‌ಎಫ್ ಕಾರ್ಯಕರ್ತರು ಕಪ್ಪು ಬಾವುಟ ಪ್ರದರ್ಶಿಸಿ ಧಿಕ್ಕಾರದ ರಣಕಹಳೆ ಮೊಳಗಿಸುತ್ತಿದ್ದಾರೆ. ಇತ್ತೀಚೆಗೆ ದೆಹಲಿಯಲ್ಲಿ ಕೇರಳ ಭವನದ ಮುಂದೆ ಪ್ರತಿಭಟನೆ ನಡೆಸಿದ ಎಸ್‌ಎಫ್ ಐ ಕಾರ್ಯಕರ್ತರ ಮೇಲೆ ಲಾಠಿ ಪ್ರಹಾರ ನಡೆಸಲಾಗಿದೆ.

ರಾಜಕೀಯ ದ್ವೇಷಕ್ಕೆ ಕುಖ್ಯಾತಿ ಪಡೆದಿರುವ ಗೃಹ ಸಚಿವ ರಾಧಾಕೃಷ್ಣನ್ ಈಗಾಗಲೇ ತನ್ನ ಕೊಳಕು ಮನಸ್ಸನ್ನು ಟಿ.ಪಿ. ಚಂದ್ರಶೇಖರನ್ ಹಾಗೂ ಫಾಸಲ್ ಪ್ರಕರಣದಲ್ಲಿ ಪ್ರದರ್ಶಿಸಿದ್ದಾರೆ. ಆದರೆ, ಶಾಲು ಮೆನನ್ ಜೊತೆ ಈತನ ಸಂಬಂಧ ಗೊತ್ತಾದ ಮೇಲೆ ಎಲ್ಲರ ಬಾಯಿಗೂ ಬೀಗ ಬಿದ್ದಿದೆ. ಶಾಲು ಗೃಹ ಪ್ರವೇಶಕ್ಕೆ ಹೋಗಿಲ್ಲ ಎಂದು ರಾಧಾಕೃಷ್ಣನ್ ಮೊದಲಿಗೆ ಹೇಳಿಕೆ ನೀಡಿದ್ದರು. ಆದರೆ, ಗೃಹ ಪ್ರವೇಶದ ಫೋ-ಟೋ ಬಿಡುಗಡೆಯಾದ ಬಳಿಕ ಸಚಿವರು ತಪ್ಪೊಪ್ಪಿಕೊಂಡರು. ಇದಾದ ಮರುದಿನವೇ ಸರಿತಾ ಜೊತೆ ದೂರವಾಣಿ ಸಂಭಾಷಣೆ ನಡೆಸಿರುವ ವಿಚಾರವೂ ಹೊರಬಿದ್ದಿದೆ.

ಕೇಂದ್ರ ಕಾರ್ಮಿಕ ಖಾತೆ ರಾಜ್ಯ ಸಚಿವ ಕೋಡಿಕುನಿಲ್ ಅವಡಿ ಹೆಸರೂ ಶಾಲು ಜೊತೆ ತಳಕು ಹಾಕಿಕೊಂಡಿದೆ. ಸೆನ್ಸಾರ್ ಮಂಡಳಿಗೆ ಶಾಲು ಹೆಸರನ್ನು ಶಿಫಾರಸು ಮಾಡಿದ್ದರು.

ತಿಪ್ಪೆ ಸಾರಿಸಿದ ಎಐಸಿಸಿ ತಂಡ

ಪ್ರಕರಣ ದಿನೇ ದಿನೇ ಗಂಭೀರ ಸ್ವರೂಪ ಪಡೆದುಕೊಳ್ಳುತ್ತಿರುವುದನ್ನು ಕಾಂಗ್ರೆಸ್ ವರಿಷ್ಠ ನಾಯಕರೂ ನಿರ್ಲಕ್ಷಿಸಲಾಗಲಿಲ್ಲ. ಎಐಸಿಸಿ ತಂಡವನ್ನು ಅಧ್ಯಯನಕ್ಕೆಂದು ಕೇರಳಕ್ಕೆ ಕಳುಹಿಸಿಕೊಡಲಾಗಿತ್ತು. ಅವರ ಏನು ಮಾಡಬೇಕೆಂದು ಬಂದಿದ್ದರೋ ಅದನ್ನೇ ಮಾಡಿ ಹೋಗಿದ್ದಾರೆ. ಅಂದರೆ ತಿಪ್ಪೆ ಸಾರಿಸಿ ಹೋಗಿದ್ದಾರೆ.

'ಆಪಲ್ ಟ್ರೀ' ಹಗರಣ


ಇನ್ನೊಂದು ಮಹತ್ವದ ಬೆಳವಣಿಗೆಯೊಂದರಲ್ಲಿ 'ಆಪಲ್ ಟ್ರೀ' ಎಂಬ ಹೆಸರಿನಲ್ಲಿ ಚಿಟ್ ಫಂಡ್ ನಡೆ... ವಂಚನೆ ಮಾಡಿದ ಪ್ರಕರಣವೂ ಬೆಳಕಿಗೆ ಬಂದಿದೆ. ಕೊಟ್ಟಾಯಂನ ಚಂಗನಾಸೆರಿ ಎಂಬಲ್ಲಿ ನಡೆದ ಈ ವಂಚನೆಗೂ ಸಿಎಂ ಹೆಸರು ತಳಕು ಹಾಕಿಕೊಂಡಿದೆ. ಪ್ರಕರಣದಲ್ಲಿ ಸಿಎಂ ಜೊತೆ ಸಿಎಂ ಕಚೇರಿ ಸಿಬ್ಬಂಧಿಯೂ ಭಾಗಿಯಾಗಿದ್ದಾರೆ. ಸಂಸ್ಥೆಯ ಮಾಲಕರ ಜೊತೆ ಸಿಎಂ ಕಚೇರಿ ದೂರವಾಣಿ ಸಂಭಾಷಣೆ ನಡೆಸಿರುವುದೂ ದಾಖಲೆಗಳಿಂದ ದೃಢಪಟ್ಟಿದೆ.

ಕೇರಳದ ಸಾರ್ವಜನಿಕ ಸಂಪರ್ಕ ವಿಭಾಗದ ನಿರ್ದೇಶಕರಾದ ಫಿರೋಜ್ ಎಂಬವನನ್ನು ಅಮಾನತು ಮಾಡಲಾಗಿದೆ. ಸರಿತಾ ನಾಯರ್ ಜೊತೆ ಈತನೂ ವಂಚನೆ ಮಾಡಿದ ಆರೋಪ ಎದುರಿಸುತ್ತಿದ್ದಾನೆ. ವಿಚಕ್ಷಣ ದಳದಿಂದ ತನಿಖೆ ನಡೆಸುವಂತೆ ಆದೇಶ ನೀಡಲಾಗಿದೆ.

ಹಗರಣಕೋರ ಸರ್ಕಾರದ ವಿರುದ್ದ ಜುಲೈ 10ರಂದು ರಾಜ್ಯವ್ಯಾಪಿ 12 ಗಂಟೆಗಳ ಬಂದ್ ಕ-ರೆಗೂ ಜನರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು. ಸಾರಿಗೆ ಸಂಚಾರ ಸಂಪೂರ್ಣ ಸ್ತಬ್ದಗೊಂಡಿತ್ತು.

'ಗ್ಯಾಂಗ್ ರೇಪ್' ಪ್ರಕರಣ–ಕುರಿಯನ್ ಬಂಧನಕ್ಕೆ ಮಹಿಳಾ ಸಂಘಟನೆ ಒತ್ತಾಯ ತೀವ್ರ ಟೀಕೆಗೆ ಗುರಿಯಾದ ರಾಜ್ಯಸಭಾ ಉಪಸಭಾಪತಿ

ಗಂಭೀರ ಲೈಂಗಿಕ ಹಗರಣ ಅತ್ಯಾಚಾರಗಳಂತಹ ಅರೋಪಗಳ ಸಂಬಂ... ಕೂಡ ಕಾಂಗ್ರೆಸ್ ನಡೆದುಕೊಳ್ಳುತ್ತಿರುವ ರೀತಿ ನಾಗರೀಕ ಸಮಾಜಕ್ಕೆ ನಿಜಕ್ಕೂ ಅಘಾತಕಾರಿಯಾಗಿದೆ. ಅದ-ಕ್ಕೆ ಸೂರ್ಯನೆಲ್ಲಿ ಅತ್ಯಾಚಾರ ಪ್ರಕರಣವೇ ಸಾಕ್ಷಿ. ಫೆಬ್ರವರಿ 1, 2013ರಂದು ಸೂರ್ಯನೆಲ್ಲಿ ಪ್ರಕರಣ-ಕ್ಕೆ ಮತ್ತೊಂದು ತಿರುವು ಸಿಕ್ಕಿತು. ಕೇರಳ ಹೈಕೋರ್ಟ್ ನೀಡಿದ ತೀರ್ಪನ್ನು ತಳ್ಳಿ ಹಾಕಿದ ಸುಪ್ರೀಂ ಕೋರ್ಟ್ ಸೂರ್ಯನೆಲ್ಲಿ ಪ್ರಕರಣದಲ್ಲಿ 35 ಆರೋಪಿಗಳನ್ನು ದೋಷಿ ಎಂದು ಪರಿಗಣಿಸಿತು. ಈ 35 ಮಂದಿಯಲ್ಲಿ ಕಾಂಗ್ರೆಸ್ ನಾಯಕ, ಹಾಲಿ ರಾಜ್ಯಸಭಾ ಉಪಸಭಾಪತಿ ಪಿ.ಜೆ.ಕುರಿಯನ್ ಕೂಡ ಒಬ್ಬ ಆರೋಪಿ. ದೆಹಲಿ ಸಾಮೂಹಿಕ





ಕೇರಳದ ಡಿವೈಎಫ್ಐ ನೇತೃತ್ವದಲ್ಲಿ ಯುವ ಜನರ ಹೋರಾಟ

ಪುಟ 15 ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ

ಇತ್ತೀಚಿನ ಬಿಹಾರದ ದುರಂತದ ನೆಪವನ್ನು ತೋರಿಸಿ ರಾಜ್ಯದಲ್ಲಿ ಬಿಸಿಯೂಟ ಯೋಜನೆಯನ್ನು ಕಾರ್ಪೋರೇಟ್ ಕಂಪನಿಗಳಿಗೆ ವಹಿಸುವ ಮಾತನ್ನು ರಾಜ್ಯದ ಶಿಕ್ಷಣ ಸಚಿವರು ಆಡಿರುವುದು ಆತಂಕಕಾರಿಯಾಗಿದೆ.
ಇದು ಸಮಸ್ಯೆಯನ್ನು ಹೆಚ್ಚಿಸಬಹುದೇ ಹೊರತು ಖಂಡಿತಾ ತಗ್ಗಿಸಲಾರದು.

ಬಿಸಿಯೂಟದಲ್ಲಿನ ಕೊರತೆಗಳಿಗೆ ಖಾಸಗೀಕರಣ ಪರಿಹಾರವೇ?.



ಎಸ್. ವರಲಕ್ಷ್ಮಿ

ಬಿಹಾರದ ಸಾರಾನ್ ಜಿಲ್ಲೆಯ ಧರ್ಮಸತಿ ಂದಾವನ್ ಗ್ರಾಮದ ಸರ್ಕಾರಿ ಪ್ರಾಥಮಿಕ ಾಲೆಯಲ್ಲಿ ಬಿಸಿಯೂಟ ಸೇವಿಸಿದ 7 ಮಕ್ಕಳು ಮೃತ ಪಟ್ಟ ದುರಂತ ಭವಿಸಿರುವುದು ನಿಜಕ್ಕೂ ತುಂಬಾ ಘಾತಕಾರಿ ವಿಷಯ. ಸರ್ಕಾರ ತನ್ನ ಡೀ ಬಿಸಿಯೂಟ ವ್ಯವಸ್ಥೆಯನ್ನು ಒಮ್ಮೆ ುಟ್ಟಿ ನೋಡಿಕೊಳ್ಳಬೇಕಾದ ವಿಷಯ.

ಮಕ್ಕಳು ಮುಂದಿನ ಪ್ರಜೆಗಳು ಮತ್ತು ೇಶದ ಸಂಪತ್ತು ಎಂಬ ವ್ಯಾಖ್ಯಾನಗಳು ಮ್ಮಲ್ಲಿ ಪ್ರಚಲಿತದಲ್ಲಿವೆ. ಆದರೆ ಈ ುಕ್ಕಳನ್ನು ನಡೆಸಿಕೊಳ್ಳುವ ರೀತಿ, ಅವರ ದ್ಯಾಭ್ಯಾಸ, ಆರೋಗ್ಯವಂತರಾದ ಮಾನವ ಕ್ತಿಯಾಗಿ ಅವರನ್ನು ರೂಪಿಸಬೇಕಾದ ಚಾರಗಳಲ್ಲಿ ನಮ್ಮ ಸರ್ಕಾರಗಳು ಪದೇ ದೇ ಎಡುವುತ್ತವೆ.

ಹಾರದ ಘಟನೆ ಏನು ?

ಶಾಲೆಯ ಮುಖ್ಯಪಾಧ್ಯಾಯಿನಿ ುರಂತದ ನಂತರ ತಲೆಮರೆಸಿಕೊಂಡಿದ್ದರು. ಅವರು ಶಾಲೆಯಲ್ಲಿಡಬೇಕಾದ ಆಹಾರ ಾಮ್ಗ್ರಿಗಳನ್ನು ತಮ್ಮ ಮನೆಯ ಒಂದು ೋಣೆನಲ್ಲಿಟ್ಟಿದ್ದು, ಈ ಆಹಾರ, ಪಾತ್ರೆ ರಿಕರಗಳನ್ನಿಡುವ ಅದೇ ಸ್ಥಳದಲ್ಲಿಯೇ ೊಲಗದ್ದೆಗಳಿಗೆ ಸಿಂಪಡಿಸುವ ಕ್ರಿಮಿನಾಶಕದ ಷಧಿಗಳನ್ನು ಇಟ್ಟಿದ್ದರು ಎಂದು ತಿಳಿದು ಂದಿದೆ.

ಮಕ್ಕಳ ಬಾಯಿಯಲ್ಲಿದ್ದ ನೊರೆ ುತ್ತು ಅವರು ತಿಂದು ಬಿಟ್ಟ ಊಟವನ್ನು ಪರೀಕ್ಷಿಸಿದ 'ವಿಧಿ ವಿಜ್ಞಾನ ್ರಯೋಗಾಲಯ'ದ ವರದಿಯ ಪ್ರಕಾರ ಈ ಊಟದಲ್ಲಿ ಮೊನೋಕ್ರೋಟೋಫಸ್ ಮತ್ತು ರ್ಗನೋಪೋಸ್ಪರಸ್ ಎಂಬ ಕ್ರಿಮಿನಾಶಕ ಅಂಶಗಳು ಇದ್ದವು. ಈ ವಿಷಕಾರಿ ಅಂಶಗಳು ಹೆಚ್ಚು ಅಡುಗೆಗೆ ಬಳಸಿದ ಎಣ್ಣೆಯಲ್ಲಿದ್ದವು ಎಂಬ ಅಂಶ ಬೆಳಕಿಗೆ ಂದಿದೆ. ಈ ಅಂಶಗಳು ಎಣ್ಣೆ ಇಡಲು ಳಸುತ್ತಿದ್ದ ಹಳೆ ಡಬ್ಬಗಳಿಂದಾಗಿಯೇ ಂದಿದೆಯಾ?, ಎಲ್ಲ ವಸ್ತುಗಳನ್ನು ಒಂದೇ ೋಣೆಯಲ್ಲಿಟ್ಟಿದ್ದರಿಂದಾಗಿ ಪರಸ್ಪರ ಲಬೆರಕೆಯಿಂದ ಬಂದಿದೆಯಾ? ಕಡಿಮೆ ರದ ಕಾಯಿಸಿದ ಹಳೆ ಎಣ್ಣೆಯಾ? ಎಣ್ಣೆ ಎಲ್ಲಿ ಉತ್ಪಾದನೆಯಾಯಿತು? ಇದನ್ನು ಪೂರೈಕೆ ಮಾಡಿದವರು ಯಾರು? ಿಹಾರದ ರಾಜಕಾರಣವೂ ಇದರಲ್ಲಿ ನಾದರೂ ಅಡಗಿದೆಯಾ? ಎಂಬ ಅಂಶಗಳು ಈಗ ನಡೆಯುತ್ತಿರುವ ತನಿಖೆಗಳಿಂದ ುಂದೆ ತಿಳಿಯಬೇಕಾಗಿದೆ.

ಾಗತಿಕವಾಗಿ 'ಆಹಾರ' "ಒಂದು ದೊಡ್ಡ ್ಯಾಪಾರವಾಗಿ ಬೆಳೆಯುತ್ತಿರುವ ಹಿನ್ನೆಲೆಯಲ್ಲಿ ಲವೊಮ್ಮೆ ಈ ಅಂಶಗಳು ಅವರ ಹೊಸ ತಾಸಕ್ತಿಯನ್ನು ಕಾಯುವ ಸಲುವಾಗಿ ುಚ್ಚಿ ಹೋಗುವ ಸಂಭವವೇ ಹೆಚ್ಚಿರುತ್ತದೆ. ಾಗಾಗದಂತೆ ಎಚ್ಚರವನ್ನು ವಹಿಸಬೇಕಿದೆ.

ಸಿಯೂಟ ಯೋಜನೆ ಮೇಲೆ ದಾಳಿ ಏಕೆ ?

ಾಲಾ ಮಕ್ಕಳ ದಾಖಲಾತಿ ಹಾಗೂ ಾಜರಾತಿಯ ಹೆಚ್ಚಿಸುವುದು.

ಮಕ್ಕಳಲ್ಲಿ ಅಪೌಷ್ಟಿಕತೆ ನಿವಾರಣೆಯ ಂತಾದ ಈ ಬಿಸಿಯೂಟ ಯೋಜನೆಯ ನೆ ಈಗಾಗಲೇ ಸರ್ವವಿಧಿತ. 2000ರಲ್ಲಿ ರ್ೀಚ್ಚ ನ್ಯಾಯಾಲಯದ ಮಧ್ಯಂತರ ದೇಶದ ಮೇರೆಗೆ 200/-ರಲ್ಲಿ ಕೆಲವು ್ಯಗಳಲ್ಲಿ ಪ್ರಾರಂಭವಾಗಿ ನಂತರ ಎಲ್ಲ ರಾಜ್ಯಗಳಲ್ಲಿ 1ರಿಂದ 8ನೇ ತರಗತಿಯವರೆಗೂ ಈ ಯೋಜನೆ ಹರಡಿದೆ.

ಇಡೀ ದೇಶದಲ್ಲಿ ಸುಮಾರು 28 ಲಕ್ಷ ಅಡುಗೆ ಸಿಬ್ಬಂದಿ 23 ಕೋಟಿ ಮಕ್ಕಳಿಗೆ ದಿನನಿತ್ಯ ಬಿಸಿಯೂಟ ಉಣಬಡಿಸುತ್ತಿದ್ದಾರೆ.

ರಾಜ್ಯದಲ್ಲಿ 1ಲಕ್ಷ 4 ಸಾವಿರ ಅಡುಗೆ ಸಿಬ್ಬಂದಿ ಸುಮಾರು 61 ಲಕ್ಷ ಮಕ್ಕಳಿಗೆ ದಿನನಿತ್ಯ ಬಿಸಿಯೂಟ ಉಣ ಬಡಿಸುತ್ತಿದ್ದಾರೆ.

ನಮ್ಮ ರಾಜ್ಯದಲ್ಲಿ 8ರಿಂದ 10ನೇ ತರಗತಿಗೆ ರಾಜ್ಯ ಸರ್ಕಾರದ ಅನುದಾನದಲ್ಲಿಯೇ ಬಿಸಿಯೂಟ ಕೊಡುತ್ತಿದ್ದಾರೆ.

ಒಟ್ಟು ಈ ಯೋಜನೆಗೆ ಪ್ರಸಕ್ತ 1 ಸಾವಿರ ಕೋಟಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕ್ರಮವಾಗಿ 75:25 ಅನುಪಾತದಲ್ಲಿ ಹಣ ನೀಡುತ್ತಿವೆ.

ಯೋಜನೆಯ ಫಲಿತಾಂಶಗಳು

ಈ 11 ವರ್ಷಗಳ ಸಾಧನೆ ಎಂದರೆ ಮಕ್ಕಳ ಗೈರು ಹಾಜರಿ ಕಡಿಮೆಯಾಗಿದೆ. ಮಧ್ಯಾಹ್ನದ ನಂತರ ಆಟ ಪಾಠಗಳಲ್ಲಿ ಮಕ್ಕಳ ಕಲಿಕಾ ಆಸಕ್ತಿ ಹೆಚ್ಚಾಗಿದೆ. ದಲಿತ, ಹಿಂದುಳಿದ, ಮೇಲ್ಜಾತಿಯ ಮಕ್ಕಳೆಂಬ ತಾರತಮ್ಯವಿಲ್ಲದೇ ಎಲ್ಲರೂ ಜೊತೆಯಲ್ಲಿಯೇ ಕುಳಿತು ಊಟ ಮಾಡುತ್ತಾರೆ. ಸಮುದಾಯದ ಪಾಲ್ಗೊಳ್ಳುವಿಕೆಯೂ ಹಂತ ಹಂತದಲ್ಲಿ ಒಳ್ಳೆಯ ಫಲಿತಾಂಶವನ್ನು ಕೊಡುವ ಮುಖಾಂತರ ಶಿಕ್ಷಣದ ಬೆಳವಣಿಗೆಗೆ, ಶಿಕ್ಷಣದತ್ತ ಮಕ್ಕಳನ್ನು ಆಕರ್ಷಿಸುವಲ್ಲಿ, ಕೂಲಿ-ನಾಲಿಗೆ ಹೋಗುವ ತಾಯಿ-ತಂದೆಯರು ತಮ್ಮ ಮಕ್ಕಳನ್ನು ನಿರ್ಭಯವಾಗಿ ಶಾಲೆಗೆ ಕಳುಹಿಸುತ್ತಿದ್ದಾರೆ. ಈ ಮುಖಾಂತರ ಯೋಜನೆ ಸಮಾಜದ ಪ್ರಗತಿಗೆ ಸಹಾಯಕವಾಗಿದೆ.

ಈ ಅಂಶಗಳು ಕೂಡ ಶಿಕ್ಷಣ ಇಲಾಖೆಯಿಂದ ನಡೆಸಿದ ಮೌಲ್ಯಮಾಪನಗಳ ವರದಿಯಿಂದಲೇ ತಿಳಿದು ಬಂದಿದೆ. ಮನೆಯಲ್ಲಿ ಅಮ್ಮಂದಿರು, ಶಾಲೆಯಲ್ಲಿ ಅಡುಗೆ ಸಿಬ್ಬಂದಿಗಳ ಪ್ರೀತಿಯೂ ಊಟದ ಜೊತೆಗೆ ಸಿಗುತ್ತದೆ.

ಬಿಸಿಯೂಟ ಯೋಜನೆ ಮತ್ತು ಸರ್ಕಾರದ ನೀತಿ

ದೇಶದಲ್ಲಿ ಬಹುಸಂಖ್ಯಾತ ಬಡಜನರ ಬವಣೆಯ ಬಾಳು, ಶ್ರೀಮಂತ ಬಡವರ ನಡುವೆ ಬೆಳೆಯುತ್ತಿರುವ ಅಂತರದ ಬಗೆಗೆ ಆಳುವವರಿಗೆ ಗಮನವಿಲ್ಲ. ಬಡತನದ ತೀವ್ರತೆ ಮತ್ತು ವಲಸೆ ಹೆಚ್ಚಾಗಿ ಕೋಟಿಗಟ್ಟಲೆ ಮಕ್ಕಳು ಬಾಲಕಾರ್ಮಿಕರಾಗಿ ಇಂದು ದುಡಿಯುತ್ತಿದ್ದಾರೆ.

ಇಂತಹ ಮಕ್ಕಳು ಶಾಲೆಗೆ ಹೋಗುವುದು ಹೇಗೆ? ಪಾಠಗಳನ್ನು ಗ್ರಹಿಸುವುದು ಹೇಗೆ? ಈ ಎರಡು ಪ್ರಶ್ನೆಗಳು ಇಡೀ ನಮ್ಮ ವ್ಯವಸ್ಥೆಯನ್ನು ಪ್ರಶ್ನಿಸುತ್ತವೆ.

ಸಾಮಾಜಿಕ ಪರಿಸ್ಥಿತಿಯನ್ನು ಮೂಲಭೂತ ಬದಲಾವಣೆಗೆ ಒಪ್ಪದ ಈ ಪ್ರಭುತ್ವಗಳು 'ಸುಧಾರಣಾ ನೀತಿ'ಯ ಭಾಗವಾಗಿ ಮತ್ತು ವಿಶ್ವ ಸಂಸ್ಥೆ ಮಕ್ಕಳ ಹಕ್ಕುಗಳ ಒಡಂಬಡಿಕೆಯ ಒಪ್ಪಂದದಲ್ಲಿನ "ಪ್ರತಿಯೊಂದು ಹಸಿದ ಮಗುವಿಗೂ ಆಹಾರವನ್ನು ಒದಗಿಸಬೇಕು" ಎಂಬ ಘೋಷಣೆ ಆಧಾರದಲ್ಲಿ ಹಾಗೂ ಸುಪ್ರೀಂಕೋರ್ಟಿನ ಆದೇಶ ಹಾಗೂ ಎಡಪಕ್ಷಗಳು ಹಾಗೂ ವಿದ್ಯಾರ್ಥಿ ಸಂಘಟನೆಗಳು ನಡೆಸಿದ ಚಳುವಳಿಗಳ ಪರಿಣಾಮವಾಗಿ "ಅಕ್ಷರ ದಾಸೋಹ" ಯೋಜನೆಯನ್ನು ಜಾರಿಗೆ ಬಂದಿತು.

ಇಂತಹ ಪ್ರತಿಷ್ಠಿತ ಯೋಜನೆಗಳನ್ನು ಜಾರಿಗೆ ತರುವಾಗ ಪೂರ್ಣ ಮನಸ್ಸಿಲ್ಲದ ಸರ್ಕಾರಗಳು ತಮ್ಮ ಬಾಲಬುಡಕರಂತೆ ವರ್ತಿಸುವ ಕೆಲವು ಎನ್‌ಜಿಓಗಳ ಸಲಹೆಗಳನ್ನು ಕೇಳುತ್ತವೆ, ಇಂತಹ ವಿಚಾರಗಳನ್ನು ಅರಿತಿರುವ ಸಾಮಾಜಿಕ ಸಂಘಟನೆಗಳನ್ನು ಅಥವಾ ಸಂಬಂಧಿಸಿದ ತಜ್ಞರ ಸಲಹೆಗಳನ್ನು ಕೇಳುವುದಿಲ್ಲ.

ರಾಜ್ಯದಲ್ಲಿ 2001ರಲ್ಲಿ ಕರ್ನಾಟಕದ ದೇವದುರ್ಗದ ಅರಕೆರಾ ಎಂಬ ಗ್ರಾಮದಲ್ಲಿ ಯೋಜನೆ ಅಧಿಕೃತವಾಗಿ ಪ್ರಾರಂಭವಾಗಿ ಇಂದು ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಖಾಸಗಿ ಶಾಲೆಗಳಿಗೂ ವಿಸ್ತರಿಸಿದೆ.

ಸಿಬ್ಬಂದಿ ನೇಮಕಾತಿ ವಿಷಯದಲ್ಲಿ ಯೋಜನೆ ಪ್ರಾರಂಭದಲ್ಲಿಯೇ ತುಂಬಾ ದ್ವಿಮುಖ ಧೋರಣೆ ಇದೆ. ಉದಾಹರಣೆ ಯೋಜನೆಯ ಮಾರ್ಗದರ್ಶಿಯಲ್ಲಿ ಗ್ರಾಮಾಂತರ, ವಿಧವಾ, ಹಿಂದುಳಿದ ಮಹಿಳೆಯರಿಗೆ ಉದ್ಯೋಗವನ್ನು ಕೊಡುವ ಮುಖಾಂತರ ಸಾಮಾಜಿಕ ನ್ಯಾಯವನ್ನು ಒದಗಿಸುತ್ತೇವೆ ಎಂದು ತಿಳಿಸಿದೆ. ಅದೇ ಸಮಯದಲ್ಲಿ ಖಾಸಗಿ ಸಂಸ್ಥೆಗಳಿಗೆ, ಸ್ತ್ರೀಶಕ್ತಿ ಗುಂಪುಗಳಿಗೂ ಬಿಸಿಯೂಟ ತಯಾರಿಯ ಕೆಲಸವನ್ನು ಕೊಡುತ್ತೇವೆ ಎಂದು ತಿಳಿಸಿದೆ.

ರಾಜ್ಯದಲ್ಲಿ ಒಟ್ಟು 55,113ರಷ್ಟು ಹೈಸ್ಕೂಲಿನಿಂದ ಹಿಡಿದು ಪ್ರಾಥಮಿಕ ಶಾಲೆಗಳು ಇವೆ.

ಹಲವಾರು ಶಾಲೆಗಳಿಗೆ ಸ್ವಂತ ಕಟ್ಟಡವಿಲ್ಲ, ಶುಚಿತ್ವ ಇಲ್ಲ, ಶೌಚಾಲಯ ವ್ಯವಸ್ಥೆ ಇಲ್ಲ, ಕಪ್ಪು ಹಲಗೆ ಇಲ್ಲ, ಕುಡಿಯುವ ನೀರಿಲ್ಲ, ಅಗತ್ಯವಿರುವಷ್ಟು ಶಿಕ್ಷಕರು ಇಲ್ಲ. ಹೀಗೆ ಬಿಸಿಯೂಟ ಯೋಜನೆ ಬರುವ ಮುಂಚೆಯೇ ನಮ್ಮ ಶಾಲೆಗಳ ಪರಿಸ್ಥಿತಿ ಹೀಗಿದೆ. ಈ ಪರಿಸ್ಥಿತಿಯನ್ನು ಸುಧಾರಿಸಲು ಅಗತ್ಯ ಅನುದಾನ ನೀಡದ ಬಿಜೆಪಿ ಸರ್ಕಾರ ಸಾವಿರಾರು ಕನ್ನಡ ಶಾಲೆಗಳನ್ನು ಮುಚ್ಚಲು ಹೊರಟಿತ್ತು.

ಇಂತಹ ಸಂದರ್ಭದಲ್ಲಿ ಬಿಸಿಯೂಟ ಯೋಜನೆಯ ಸಂಪೂರ್ಣ ಯಶಸ್ಸಿನ ಬಗ್ಗೆ ಯೋಚನೆ ಮಾಡುವುದು ಹೇಗೆ? ಎಂಬ ಪ್ರಶ್ನೆ ನಮ್ಮನ್ನು ಕಾಡದೇ ಇರುವುದಿಲ್ಲ.

ಸದ್ಯ ರಾಜ್ಯದಲ್ಲಿ ಬಿಸಿಯೂಟದ ಅಡುಗೆ ತಯಾರಿಸಲು 18 ಸಾವಿರ ಅಡುಗೆ ಮನೆಗಳು ಮಾತ್ರ ಇವೆ. ಎಲ್ಲ ಶಾಲೆಗಳಿಗೂ ನೀರಿನ ವ್ಯವಸ್ಥೆ ಇಲ್ಲದಿರುವುದರಿಂದ ಅಡುಗೆ ಸಹಾಯಕಿಯರೇ ದೂರದಿಂದ ನೀರನ್ನು ಹೊರಬೇಕಾಗಿದೆ. ನೀರಿಲ್ಲದಿದ್ದರೆ ಸ್ವಚ್ಛತೆ-ಯ ಪ್ರಶ್ನೆ ಹೇಗೆ? ಪ್ರತ್ಯೇಕ ಅಡುಗೆ ಕೋಣೆ ಮತ್ತು ಆಹಾರ ಸಾಮಗ್ರಿಗಳನ್ನು ಇರಿಸುವ ವ್ಯವಸ್ಥೆ ಇಲ್ಲದಿದ್ದರೆ ಇಲಿ-ಹೆಗ್ಗಣಗಳಿಂದ ಕಾಪಾಡುವುದು ಹೇಗೆ.

ಸಮಯಕ್ಕೆ ಸರಿಯಾಗಿ ಗ್ಯಾಸ್ ಸಿಲಿಂಡರ್ ಪೂರೈಕೆ, ತರಕಾರಿ ತರಲು ಹಣ, ತಿಂಗಳಿಗೆ ಸರಿಯಾಗಿ ಅಡುಗೆ ಸಿಬ್ಬಂದಿಯ ಸಂಬಳಗಳು ಪಾವತಿಯಾಗಬೇಕು. ಈಗ ಆಗುತ್ತಿಲ್ಲ.

ಬದ್ಧತೆಯಿಂದ ಕೂಡಿದ ಆಡಳಿತ ಮಾತ್ರ ಇದನ್ನು ಸರಿಪಡಿಸಲು ಸಾಧ್ಯ. ಇವುಗಳ ಪರಿಹಾರಕ್ಕೆಂದು ಶಿಕ್ಷಣ ಇಲಾಖೆಯಡಿಯಲ್ಲಿ ಕೇಂದ್ರ ಕಛೇರಿಯಲ್ಲಿ ಜಂಟಿ ನಿರ್ದೇಶಕರು, ಜಿಲ್ಲಾ ಮಟ್ಟದಲ್ಲಿ ಸಹಾಯಕ ನಿರ್ದೇಶಕರು ತಾಲೂಕಿನಲ್ಲಿ ಸಹಾಯಕ ಅಧಿಕಾರಿಗಳು ಇರುತ್ತಾರೆ. ಇವರು ಜಿಲ್ಲಾ ಪಂಚಾಯ್ತಿ ಮತ್ತು ಶಿಕ್ಷಣ ಇಲಾಖೆಯ ಮುಖ್ಯ ಕಾರ್ಯದರ್ಶಿಗಳ ಸುಪರ್ದಿನಲ್ಲಿರುತ್ತಾರೆ.

ಈ ವ್ಯವಸ್ಥೆಯನ್ನು ಮತ್ತಷ್ಟು ಕ್ರಿಯಾಶೀಲಗೊಳಿಸುವುದು, ಅಡುಗೆಯವರಿಗೆ ಪ್ರತಿ ತಿಂಗಳಿಗೊಮ್ಮೆ ಒಂದು ದಿನ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಕೊಡುವುದು, ಬಿಸಿಯೂಟ ಮತ್ತು ಅದರ ತಯಾರಿಕೆಗೆ ಬೇಕಾದ ಆಹಾರ ಸಾಮಗ್ರಿಗಳು, ಗ್ಯಾಸ್ ಸಿಲಿಂಡರ್, ತರಕಾರಿಗೆ

ಪುಟ 15 ಕ್ಕೆ

ಸಂಗಾತಿ ಅಂಬಾಳ್ ಇನ್ನಿಲ್ಲ

ಮತ್ತೊಂದು ಮಾರ್ಕ್ಸ್‌ವಾದಿ ನಕ್ಷತ್ರ ನಮ್ಮ ಕಣ್ಣಳತೆಯಿಂದ ದೂರ ಸರಿಯಿತು. ಜುಲೈ 16, 2013 ರಂದು ಅಂಬಾಳ್ ರಾಮಮೂರ್ತಿ ಚೆನ್ನೈನಲ್ಲಿ ತನ್ನ 87 ನೇ ವಯಸ್ಸಿನಲ್ಲಿ ಕೊನೆಯುಸಿರೆಳೆದರು. ತಮ್ಮ 10 ನೇ ವಯಸ್ಸಿನಲ್ಲೇ ರಾಜಕೀಯದಲ್ಲಿ ಧುಮುಕಿದ ಸಂಗಾತಿ ಅಂಬಾಳ್ ಸ್ವಾತಂತ್ರ್ಯ ಹೋರಾಟದಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು. ತಿರುಚಿಯಲ್ಲಿದ್ದ ಅವರ ತವರು ಮನೆ ಆಗ ಕಮ್ಯೂನಿಸ್ಟ್ ಚಳುವಳಿಯ ರಹಸ್ಯ ಸಭೆಗಳ ತಾಣವಾಗಿತ್ತು. ಮರುವರ್ಷವೇ ಅವರು ಕಮ್ಯೂನಿಸ್ಟ್ ಪಕ್ಷದ ಕೇಂದ್ರ ಕಛೇರಿಯಲ್ಲಿ ಕೆಲಸ ಮಾಡಲು ತಮ್ಮ ಸೋದರಿ ಜತೆ ಮುಂಬಯಿಗೆ ತೆರಳಿದರು. ಅಲ್ಲಿ ಸಮತಾವಾದ ಮತ್ತು ಮಾರ್ಕ್ಸ್‌ವಾದ ಕುರಿತ ಗ್ರಂಥಗಳನ್ನು ಕಲೆಹಾಕಿ ಒಂದು ಪತ್ರಾಗಾರವನ್ನು ಪ್ರಾರಂಭಿಸಿದರು. 1940 ರಲ್ಲೇ ಅವಿಭಜಿತ ಕಮ್ಯೂನಿಸ್ಟ್ ಪಕ್ಷದ ಗ್ರಂಥಾಲಯದ ಮೊಟ್ಟ ಮೊದಲ ಗ್ರಂಥಪಾಲಕಿಯಾಗಿ ದುಡಿದರು. ಓದುವುದರಲ್ಲಿ ಅಪಾರ ಆಸಕ್ತಿಯನ್ನು ಹೊಂದಿದ್ದ ಅವರು ತಮಿಳು ಮತ್ತು ಇಂಗ್ಲಿಷ್ ಭಾಷೆಗಳ ವಿಧ್ವಾಂಸರೂ ಆಗಿದ್ದರು ಹಾಗೂ ಅನೇಕ ರಾಜಕೀಯ ಗ್ರಂಥಗಳನ್ನು ಮತ್ತು ಸಾಹಿತ್ಯವನ್ನು ಅನುವಾದ ಮಾಡಿದ್ದರು.



ಬ್ರಿಟಿಷರು ಕಮ್ಯೂನಿಸ್ಟ್ ಪಕ್ಷವನ್ನು ನಿಷೇಧಿಸಿದಾಗ ಭೂಗತ ಚಳುವಳಿಯಲ್ಲಿ ಕ್ರಿಯಾಶೀಲರಾಗಿ ಶ್ರಮಿಸಿದರು. ಅಕ್ಕ ತಂಗಿ ಇಬ್ಬರೂ ಹೂವು ಮತ್ತು ತರಕಾರಿ ಮಾರಾಟಗಾರರ ವೇಷದಲ್ಲಿ ತಮ್ಮ ಬುಟ್ಟಿಗಳಲ್ಲಿ ಕರಪತ್ರಗಳನ್ನು ಮುಚ್ಚಿಟ್ಟುಕೊಂಡು ಹಂಚುತ್ತಿದ್ದರು. 1940ರ ದಶಕದಲ್ಲಿ ತಮ್ಮ ತಾಯಿ ಹಾಗೂ ಮೂವರು ಸೋದರಿಯರೊಂದಿಗೆ ವಿಳ್ಳುಪುರಂನಲ್ಲಿ ಬಂಧನಕ್ಕೊಳಗಾಗಿದ್ದರು. ಅಂಬಾಳ್ ಅವರು ರಾಜ್ಯ ವಿದ್ಯುತ್ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರು. 40–50 ರ ದಶಕದಲ್ಲಿ ಎ.ಎಸ್.ಆರ್.ಚಾರಿ ಸಂಗಡ ಹಾರ್ಬರ್ ವರ್ಕರ್ಸ್ ಯೂನಿಯನ್ ಹಾಗೂ ಆನಂದನ್ ನಂಬಿಯಾರ್ ಮತ್ತು ಕಲ್ಯಾಣಸುಂದರಂ ಜತೆ ದಕ್ಷಿಣ ರೈಲ್ವೇ ನೌಕರರ ಯೂನಿಯನ್‌ನಲ್ಲಿ ದುಡಿದಿದ್ದರು.

ತಮ್ಮ ಕ್ರಾಂತಿಕಾರಿ ನಂಬಿಕೆಗಳಿಗೆ ಅನುಗುಣವಾಗಿ 1952 ರಲ್ಲಿ ಯಾವುದೇ ಧಾರ್ಮಿಕ ಆಚರಣೆಗಳಿಲ್ಲದೆ ಜಾತಿಯ ಸಂಕೋಲೆಗಳನ್ನು ಪುಡಿಪುಡಿ ಮಾಡಿ ಆಗ ತಮಿಳುನಾಡು ವಿಧಾನಸಭೆಯ ವಿರೋಧ ಪಕ್ಷದ ನಾಯಕರಾಗಿದ್ದ ಸಂಗಾತಿ ಪಿ. ರಾಮಮೂರ್ತಿಯೊಂದಿಗೆ ಅಂತರ್ಜಾತೀಯ ಮದುವೆ ಮಾಡಿಕೊಂಡು ದೊಡ್ಡ ಸುದ್ದಿ ಮಾಡಿದ್ದರು. ಅವರ ಮದುವೆಯ ವಿಶೇಷವೆಂದರೆ ವಿಚಾರವಾದಿ ಇ.ವಿ.ಆರ್.ಪೆರಿಯಾರ್ ಅದರ ಅಧ್ಯಕ್ಷತೆ ವಹಿಸಿದ್ದರು.

ತೃಣ ಮೂಲ ಕಾಂಗ್ರೆಸಿಗರಿಂದ.....

ಪುಟ 16 ರಿಂದ

ಕಾಪಾಡುವ ಸಂಬಂಧ ಎಂಟು ಜನರ ಉನ್ನತ ಅಧಿಕಾರಿಗಳ ಸಮಿತಿ ರಚಿಸಬೇಕು. ಚುನಾವಣೆ ನಡೆಯುವ ಜಿಲ್ಲೆಗಳಲ್ಲಿ ಈ ಸಮಿತಿ ಭೇಟಿ ನೀಡಿ ಕಟ್ಟೆಚ್ಚರ ವಹಿಸಬೇಕೆಂದು ತಾಕೀತು ಮಾಡಿತು. ನಡೆದ್ದೇನು ? ಇನ್ನಷ್ಟು ಕೊಲೆಗಳು, ನೂರಾರು ಮನೆಗಳಿಗೆ ಬೆಂಕಿ. ಮತಗಟ್ಟೆ ವಶ. ಸಿಪಿಐ(ಎಂ) ಕಛೇರಿಗಳ ಮೇಲೆ ದಾಳಿ, ಮತದಾರರರಿಗೆ ಬೆದರಿಕೆ. ಹೆದರದ ಮತದಾರರ ಪ್ರಾಣ ಹರಣ.

ಮೂರನೇ ಹಂತದ ಚುನಾವಣೆಯಲ್ಲಿ ಉತ್ತರ 24 ಪರಗಣ ಜಿಲ್ಲೆಯಲ್ಲಿ 346, ದಕ್ಷಿಣ 24 ಪರಗಣ ಜಿಲ್ಲೆಯಲ್ಲಿ 402 ಮತ್ತು ಹೌರಾ ಜಿಲ್ಲೆಯಲ್ಲಿ 132 ಹೀಗೆ ಒಟ್ಟು 850 ಮತಗಟ್ಟೆಗಳಲ್ಲಿ ಮತಗಟ್ಟೆಯನ್ನು ಪೂರ್ಣವಾಗಿ ವಶಕ್ಕೆ ತೆಗೆದುಕೊಂಡು ರಿಗ್ಗಿಂಗ್ ನಡೆಸಲಾಯಿತು. ಮಿಡ್ನಾಪುರದಿಂದ ತೃಣಮೂಲ ಗೂಂಡಾಗಳು ಪರಗಣ ಜಿಲ್ಲೆಗಳಲ್ಲಿ ಗೂಂಡಾಗಿರಿ ನಡೆಸಿದರು. ಮತದಾನದ ಹಿಂದಿನ ದಿನ ರಾತ್ರಿ ಮನೆಗಳಿಗೆ ನುಗ್ಗಿ ಬೆದರಿಸುವುದು ನಡೆಯಿತು. ಎಷ್ಟೋ ಕಡೆ ಅಭ್ಯರ್ಥಿಗಳಿಗೆ ಮತ ಹಾಕಲು ಬಿಡಲಿಲ್ಲ. ಉತ್ತರ 24 ಪರಗಣ ಜಿಲ್ಲೆಯ ಬೊಧೈ ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ತಂಗ–ಟೆಂಗಿ ಗ್ರಾಮದ ಸಿಪಿಐ(ಎಂ)ನ ಹಿರಿಯ ಸಂಗಾತಿ ಮೊಜರ್ ಬಕ್ಸ್ ಮಂಡೋಲ್ ಅವರನ್ನು ಕೊಲ್ಲಲಾಯಿತು. ಎಂದಿನಂತೆ ಕೇಂದ್ರ ಮೀಸಲು ಪಡೆಗಳು ಪತ್ತೆ ಇರಲಿಲ್ಲ. ಉತ್ತರ 24 ಪರಗಣ ಜಿಲ್ಲೆಯ ಅಂಬ್ದಂಗ, ಬರಾಸಾತ್–2, ಮುಂತಾದ ಕಡೆಗಳಲ್ಲಿ ಸಿಪಿಐ(ಎಂ) ಬೂತ್ ಏಜೆಂಟರನ್ನು ತೃಣಮೂಲದ ಶಸಸ್ತ ಗೂಂಡಾಗಳು ಅಟ್ಟಿಸಿಕೊಂಡು ಓಡಿಸಿದರು. ಮತದಾರರು ಮತಗಟ್ಟೆಗೆ ಬರದಂತೆ ವ್ಯಾಪಕವಾಗಿ ಬೆದರಿಸಲಾಯಿತು. ಸಿಪಿಐ(ಎಂ) ಬೆಂಬಲಿಗರ ಮೇಲೆ ಬಾಂಬ್ ಎಸೆತಗಳು ದಾಳಿಗಳು ನಡೆದವು.

ಭಾಗನಗರ್ ಮತ್ತು ಕ್ಯಾನಿಂಗ್‌ನಂತಹ ಊರುಗಳಲ್ಲಿ ಮತಗಟ್ಟೆ ಅಧಿಕಾರಿಗಳು ಸುಮ್ಮನೆ ಇರಬೇಕೆಂದು ಅವರನ್ನು ಬೆದರಿಸಿ ಕೂರಿಸಲಾಯಿತು. ಉದಯನಾರಾಯಣಪುರ ಪ್ರದೇಶ ಒಂದರಲ್ಲೇ 80 ಮತಗಟ್ಟೆಗಳನ್ನು ವಶಪಡಿಸಿಕೊಳ್ಳಲಾಯಿತು.

ನಾಲ್ಕನೇ ಹಂತದ ಚುನಾವಣೆಗಳಲ್ಲಿ 8 ಜನ ಮೃತಪಟ್ಟು ಹಲವಾರು ಜನಗಳಿಗೆ ಗಾಯಗಳಾದವು ಎಂದರೆ ಯಾವ ಪರಿ ರಕ್ತ ಪಾತ ನಡೆದಿದೆ ಎಂದು ಊಹೆ ಮಾಡಬಹುದು. ನಾಡಿಯಾ, ಬಿರ್ಭೂಮ್, ಮಾಲ್ಡಾ, ಮುರ್ಷಿದಾಬಾದ್ ಜಿಲ್ಲೆಗಳಲ್ಲಿ ನೂರಾರು ಮತಗಟ್ಟೆಗಳ ವಶ ನಡೆಯಿತು. ಇಲ್ಲಿನ ಒಂದೇ ವ್ಯತ್ಯಾಸ ಎಂದರೆ ಈ ಜಿಲ್ಲೆಗಳಲ್ಲಿ ಹಿಂಸಾಚಾರ ನಡೆಸುವಲ್ಲಿ ಕಾಂಗ್ರೆಸ್ ತಾನೇನೂ ಕಡಿಮೆ ಇಲ್ಲ ಎಂದು ಸಿದ್ದಮಾಡಿತು. ನಾಡಿಯಾ ಜಿಲ್ಲೆಯಲ್ಲಿ ಸಿಪಿಐ(ಎಂ)ನ ಕಬೀರುದ್ದೀನ್ ಶೇಕ್ ಅವರ ಮೇಲೆ ಬಾಂಬ್ ಹಾಕಿ ಕೊಲ್ಲಲಾಯಿತು. ಬೋಗುಲ ಎಂಬಲ್ಲಿ ಬಾಂಬ್ ದಾಳಿ ಮಾಡಿ ಮತಗಟ್ಟೆ ವಶಕ್ಕೆ ತೆಗೆದುಕೊಂಡಿದ್ದ ತೃಣಮೂಲ ಗೂಂಡಾಗಳನ್ನು ಕೇಂದ್ರ ಮೀಸಲು ಪಡೆ ಹಿಮ್ಮೆಟ್ಟಿಸಿ ಬಾಂಬುಗಳ ಸಹಿತ ಅವರ ಕಾರನ್ನು ವಶಕ್ಕೆ ಪಡೆಯಿತು. ಮಾಲ್ಡಾದ ಬೆಲ್ಡಂಗದಲ್ಲಿ ಬಾಂಬ್ ತಯಾರಿಕೆಯಲ್ಲಿದ್ದ ಇಬ್ಬರು ಕಾಂಗ್ರೆಸ್ ಕಾರ್ಯಕರ್ತರು ಬಾಂಬ್ ಸ್ಫೋಟಿಸಿ ಸತ್ತರು. ನೂರ್‌ಜಹಾನ್ ಬೀಬೀ ಎಂಬ ಮತಹಾಕಲು ಬಂದ ಮಹಿಳೆ ಬಾಂಬ್ ದಾಳಿಯಲ್ಲಿ ಪ್ರಾಣ ಕಳೆದುಕೊಂಡರು. ಜಿಯಾಗಂಜ್‌ನಲ್ಲಿ ಮತದಾರರ ಸಾಲಿನ ಮೇಲೆ ತೃಣಮೂಲ ಗೂಂಡಾಗಳು ನಡೆಸಿದ ಗುಂಡಿನ ದಾಳಿಯಲ್ಲಿ ಇಬ್ಬರು ಸಿಪಿಐ(ಎಂ) ಬೆಂಬಲಿಗರು ಗಾಯಗೊಂಡರು. ಚುನಾವಣಾಧಿಕಾರಿಗಳು ಮತ್ತು ಗ್ರಾಮಸ್ಥರ ನಡುವೆ ತಿಕ್ಕಾಟ ನಡೆದು ಕೇಂದ್ರ ಮೀಸಲು ಪಡೆಯ ಗುಂಡಿ–ಗೆ ಮಾಲ್ಡಾದಲ್ಲಿ ಮತದಾರರೊಬ್ಬರು ಬಲಿಯಾದರು. ಇಂಗ್ಲೀಷ್ ಬಜಾರ್‌ನಲ್ಲಿ ಸಿಪಿಐ(ಎಂ)ನ ಮಹಿಳಾ ಅಭ್ಯರ್ಥಿಯ ಮೇಲೆ ದಾಳಿ ನಡೆಯಿತು. ಮಾನಭಂಗ ಕೂಡ ನಡೆಯಿತು. ಎಷ್ಟೋ ಕಡೆಗಳಲ್ಲಿ ಮತದಾರರ ಗುರುತು ಚೀಟಿಯನ್ನು ಹಿಂದಿನ ದಿನ ರಾತ್ರಿ ಅಪಹರಿಸಲಾಯಿತು. ಪರೈ ಎಂಬಲ್ಲಿ ಒಬ್ಬ ಸ್ವತಂತ್ರ ಅಭ್ಯರ್ಥಿ ಮತ್ತು ಆತನ ತಂದೆಯನ್ನು ಗುಂಡಿಕ್ಕಿ ಕೊಲ್ಲಲಾಯಿತು. ಮಯೂರೇಶ್ವರದಲ್ಲಿ ಮೂರು ಮೃತ ದೇಹಗಳು ದೊರೆತಿವೆ.

ಬಹಿರಂಗ ಸಭೆಗೆ ಅಡ್ಡಿ

ಕೂಚ್‌ಬಿಹಾರ್ ಜಿಲ್ಲೆಯ ಸಿತೈ ಎಂಬಲ್ಲಿ ಭೀಮನ್‌ಬಸು ಅವರು ಭಾಗವಹಿಸಲಿದ್ದ ಬಹಿರಂಗ ಸಭೆಯನ್ನು ನಡೆಯಗೊಡದಂತೆ ತೃಣಮೂಲ ಗೂಂಡಾಗಳು ಅಡ್ಡಿ ಮಾಡಿದರು. ಜನರು ಬಹಿರಂಗ ಸಭೆಗೆ ಹೋಗದಂತೆ ಬೆದರಿಸಲಾಯಿತು. ಅಂಗಡಿಗಳನ್ನು ಮುಚ್ಚಿಸಲಾಯಿತು. ಧ್ವನಿವರ್ಧಕದ ವೈರ್‌ಗಳನ್ನು ಕಿತ್ತು ಹಾಕಲಾಯಿತು. ಆದರೂ ಜನರು ಬಹಿರಂಗ ಸಭೆಗೆ ಬರುವುದನ್ನು ತಪ್ಪಿಸಲಾಗಲಿಲ್ಲ.

ಎಂ.ಪಿ. ಮತ ಚಲಾಯಿಸಲಾಗಲಿಲ್ಲ

ಕೊನೆಯ ಹಂತದ ಚುನಾವಣೆಯಲ್ಲಿ ಜಲಪೈಗುರಿ ಜಿಲ್ಲೆಯ ರಾಜ್‌ಗಂಜ್ ಪ್ರದೇಶದ ಕುಕುರ್‌ಜಾನ್‌ನಲ್ಲಿ ಸಿಪಿಐ(ಎಂ) ಲೋಕಸಭಾ ಸದಸ್ಯರಾದ ಮಹೇಂದ್ರ ರಾಯ್ ತಮ್ಮ ಮತ ಚಲಾಯಿಸಲಾಗಲಿಲ್ಲ. ತಮ್ಮ ಮಡದಿಯೊಂದಿಗೆ ಬಂದಿದ್ದ ಅವರ ಮೇಲೆ ಮತಗಟ್ಟೆಯ ಮುಂದೆಯೇ ದಾಳಿ ನಡೆಯಿತು. ಈ ಮತಗಟ್ಟೆಯ ಸು. 500 ಜನರು ಮತದಾನ ಮಾಡುವ ಅವಕಾಶದಿಂದ ವಂಚಿತರಾದರು. ಅಲ್ಲಿ ಗೂಂಡಾಗಳು ಬೆಳಗ್ಗಿನಿಂದಲೇ ಮತಗಟ್ಟೆಯನ್ನು ವಶಕ್ಕೆ ತೆ–ಗೆದುಕೊಂಡು ಬಿಟ್ಟಿದ್ದರು. ಎಷ್ಟೇ ದೂರು ನೀಡಿದರೂ ಯಾವ ಪ್ರಯೋಜನವೂ ಆಗಲಿಲ್ಲ. ಅಲ್ಲಿ ಕೇಂದ್ರ ಪಡೆಯ ಪೋಲಿಸರು ಇರಲಿಲ್ಲ. ಕೊನೆಯ ಹಂತದ ಚುನಾವಣೆ ನಡೆದ ನಾಲ್ಕು ಜಿಲ್ಲೆಗಳಲ್ಲೂ ಮತಗಟ್ಟೆ ವಶ, ಹಲ್ಲೆ, ದಾಳಿ ವ್ಯಾಪಕವಾಗಿ ನಡೆದವು. ಕೊಲೆಗಳು ಕೂಡ ನಡೆದವು.

ಉತ್ತರ ದಿನಾಜ್‌ಪುರಲ್ಲಿ ಸಿಪಿಐ(ಎಂ) ಬೆಂಬಲಿಗ ಅಬ್ದುಲ್ ಅಜೀಜ್ ಅವರನ್ನು ಕೊಲ್ಲಲಾಯಿತು. ಸಿರಜುಲ್ ಇಸ್ಲಾಮ್ ಅವರ ಬಲಗೈಯನ್ನು ಕತ್ತರಿಸಿ ಹಾಕಲಾಯಿತು. ಇದುದಾಸ್ ಎಂಬ ಸಿಪಿಐ(ಎಂ) ಅಭ್ಯರ್ಥಿಯ ಹೆಂಡತಿಯ ಕೈಬೆರಳುಗಳನ್ನು ತುಂಡರಿಸಲಾಯಿತು.

ಈ ಒಟ್ಟು ಬೆಳವಣಿಗೆಗಳ ಬಗೆಗೆ ಪ್ರತಿಕ್ರಿಯಿಸಿರುವ ಪಶ್ಚಿಮ ಬಂಗಾಳದ ಎಡರಂಗದ ಅಧ್ಯಕ್ಷ, ಸಿಪಿಐ(ಎಂ) ಪಾಲಿಟ್ ಬ್ಯೂರೋ ಸದಸ್ಯ ಭಿಮನ್ ಬಸು ಅವರು ಪಶ್ಚಿಮ ಬಂಗಾಳದ ಗ್ರಾಮೀಣ ಜನತೆಯ ಮತ ಚಲಾಯಿಸುವ ಹಕ್ಕನ್ನು ದ–ರೋಡೆ ಮಾಡಿ ಆ ಹಕ್ಕಿನಿಂದ ಅವರನ್ನು ವಂಚಿಸಲಾಗಿದೆ. ಇದು ರಾಜ್ಯ ಸರ್ಕಾರದ ... ಪ್ರಜಾಪ್ರಭುತ್ವದ ಮೇಲೆ ಎಸಗಲಾಗಿರುವ ಗಂಭೀರ ಹಲ್ಲೆ. 1972ರ ವಿಧಾನ ಸಭಾ ಚುನಾವಣೆಯಲ್ಲಿ ಇಡೀ ಚುನಾವಣೆಯನ್ನೇ ರಿಗ್ಗಿಂಗ್ ಮಾಡಿದ್ದನ್ನು ಇದು ನೆನಪಿಸುತ್ತದೆ ಎಂದು ಹಿಂಸೆಯನ್ನು ಖಂಡಿಸಿದರು.

ಪಶ್ಚಿಮ ಬಂಗಾಳ ವಿಧಾನ ಸಭೆಯ ವಿರೋಧ ಪಕ್ಷದ ನಾಯಕ ಸೂರ್ಯಕಾಂತ ಮಿಶ್ರ ಅವರು ಸ್ವತಃ ರಾಜ್ಯದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಚುನಾವಣಾ ಆಯೋಗ ಮತ್ತು ವಿರೋಧ ಪಕ್ಷಗಳನ್ನು ಬೆದರಿಸುವ ಪ್ರಯತ್ನ ಮಾಡಿದ್ದು. ಇಲ್ಲಿ ನಡೆದಿರುವ ಹಿಂಸೆ ಅಕ್ರಮಗಳ ಪೂರ್ಣ ಹೊಣೆ ಅವರದೇ ಎಂದಿದ್ದಾರೆ.

ಲೆಕ್ಕಪತ್ರದ ಕುರಿತು ಅಪಪ್ರಚಾರ

ಈ ನಡುವೆ ಚುನಾವಣೆಗಳಲ್ಲಿ ಮಮತಾ ಬ್ಯಾನರ್ಜಿ ಸಹ ಸೇರಿದಂತೆ ತೃಣಮೂಲಿಗರಿಂದ ಒಂದು ಅಪಪ್ರಚಾರ ನಡೆಯಿತು. ಪಶ್ಚಿಮ ಬಂಗಾಳದ ಸಿಪಿಐ(ಎಂ) ರಾಜ್ಯ ಸಮಿತಿಯ ಬ್ಯಾಂಕ್ ಖಾತೆಯನ್ನು ವೈಯುಕ್ತಿಕವಾಗಿ ನಿರ್ವಹಿಸಲಾಗುತ್ತಿದೆ ... ಸುಳ್ಳು ಸುಳ್ಳೇ ಆಪಾದಿಸಲಾಯಿತು.

ಈ ಬಗೆಗೆ ಸಿಪಿಐ(ಎಂ) ಪಾಲಿಟ್ ಬ್ಯೂ–ರೋ ಸ್ಪಷ್ಟೀಕರಣ ನೀಡಿ ಅಂತಹ ಆರೋಪ ಸುಳ್ಳು ಎಂದಿತು. ಸಿಪಿಐ(ಎಂ) ರಾಜ್ಯ ಸಮಿತಿಯ ಕಾರ್ಯದರ್ಶಿ ಭಿಮನ್ ಬಸು ಮತ್ತು ಸಿಪಿಐ(ಎಂ) ಪಾಲಿಟ್ ಬ್ಯೂ–ರೋ ಸದಸ್ಯ ನಿರುಪಮ್ ಸೇನ್ ಅವರು ಸಿಪಿಐ(ಎಂ) ರಾಜ್ಯ ಸಮಿತಿಯ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಖಾತೆಯನ್ನು ನಿರ್ವಹಿಸುತ್ತಿದ್ದಾರೆ. ಅದು ಅವರ ವೈಯಕ್ತಿಕ ಖಾತೆಯಲ್ಲ ಎಂದು ಅದು ಸ್ಪಷ್ಟನೆ ನೀಡಿದೆ. ಜೊತೆಗೆ ಪಶ್ಚಿಮ ಬಂಗಾಳ ರಾಜ್ಯ ಸಮಿತಿಯು ಕೇಂದ್ರ ಸಮಿತಿಗೆ ನೀಡಿರುವ ಲೆಕ್ಕಪತ್ರವು ಈ ಬ್ಯಾಂಕ್ ಖಾತೆಯ ವಿವರಗಳನ್ನು ಒಳಗೊಂಡಿದೆ ಹಾಗೂ ಸಿಪಿಐ(ಎಂ) ಕೇಂದ್ರ ಸಮಿತಿಯು ಆದಾಯ ತೆರಿಗೆ ಇಲಾಖೆಗೆ ಸಲ್ಲಿಸುತ್ತ ಬಂದಿರುವ ಕ್ರೋಢೀಕೃತ ಲೆಕ್ಕಪತ್ರವು ಯಾವತ್ತು ಈ ಬ್ಯಾಂಕ್ ಖಾತೆ–ಯ ಲೆಕ್ಕಪತ್ರವನ್ನು ಒಳಗೊಂಡಿದೆ ಎಂದು ಹೇಳಿದೆ.

ಜನಶಕ್ತಿ
ಕನ್ನಡ ವಾರಪತ್ರಿಕೆ

ಉದ್ಯೋಗ ಖಾತ್ರಿ ಕಾನೂನನ್ನು ಅಸಂಬದ್ಧಗೊಳಿಸುವ ಹುನ್ನಾರ

ಎಡಪಕ್ಷಗಳ ಬೆಂಬಲದ ಮೇಲೆ ಅಧಿಕಾರಕ್ಕೆ ಬಂದಿದ್ದ ಯುಪಿಎ-1 ಸರಕಾರ ಅವರ ಒತ್ತಡದಿಂದ ತಂದ ಉದ್ಯೋಗಖಾತ್ರಿ ಕಾನೂನು ಈಗ ಮಹಾತ್ಮ ಗಾಂಧಿಯವರ ಹೆಸರನ್ನು ಹೊತ್ತಿದೆ. ಆದರೆ ಎಡಪಕ್ಷಗಳ ಬೆಂಬಲ ಬೇಕಿಲ್ಲದ ಯುಪಿಎ-2 ಸರಕಾರ, ಒಂದೆಡೆ ಇದು ಕೇವಲ ಯುಪಿಎ ಯ ಮಹಾಸಾಧನೆ ಎಂದು ಸದಾ ಬೆನ್ನು ತಟ್ಟಿಕೊಳ್ಳುತ್ತಲೇ, ಇನ್ನೊಂದೆಡೆ, ಅದನ್ನು ಅಸಂಬದ್ಧಗೊಳಿಸಲು, ಅಪ್ರಸ್ತುತಗೊಳಿಸಲು ಪ್ರಯತ್ನಗಳನ್ನು ನಡೆಸುತ್ತಲೇ ಇರುವುದನ್ನು ಈ ಅಂಕಣದಲ್ಲಿ ಗಮನಿಸಿದ್ದೇವೆ. ಈ ಸರಕಾರದ ವರ್ಗಸ್ವಭಾವದ ಹಿನ್ನೆಲೆಯಲ್ಲಿ ಇದರಲ್ಲಿ ಆಶ್ಚರ್ಯವೇನಿಲ್ಲ ಎಂಬುದು ಬೇರೆ ಮಾತು.


ಇಂತಹ ಎರಡು ಪ್ರಯತ್ನಗಳು ಕಳೆದ ವಾರವೂ ನಡೆದಿವೆ. ಯುಪಿಎ-2 ರ ಒಬ್ಬ ಮಂತ್ರಿಗಳು ಈ 'ಯೋಜನೆ' ಕೃಷಿ ಕಾರ್ಮಿಕರನ್ನು ಸೋಮಾರಿಗಳಾಗಿ ಮಾಡಿದೆ ಎಂದು ಅಪ್ಪಣೆ ಕೊಡಿಸಿದರು. ಇದಕ್ಕೆ ಒದಗಿಸಿರುವ ಹಣದ ಅರ್ಧದಷ್ಟನ್ನು ಗ್ರಾಮೀಣ ಬಡವರ ಕೌಶಲ ಬೆಳವಣಿಗೆಗೆ ಖರ್ಚು ಮಾಡಬೇಕು ಎಂಬ ಅಮೋಘ ಸಲಹೆಯನ್ನು ಅವರು ಮಾಡಿದ್ದಾರೆ.

ಕೌಶಲ ಬೆಳವಣಿಗೆಯ ಯೋಜನೆಗಳನ್ನು ಯಾರೂ ವಿರೋಧಿಸುವುದಿಲ್ಲ, ಆದರೆ ಮಂತ್ರಿವರ್ಯರ ಈ ಹೇಳಿಕೆ ವಾಸ್ತವವಾಗಿ ಈ ಕಾನೂನನ್ನೇ ಮುರಿಯಲು ಕರೆ ಕೊಡುತ್ತದೆ ಎಂದು ನಮ್ಮ ಭಾವನೆ ಎಂದು ಅಖಿಲ ಭಾರತ ಕೃಷಿಕೂಲಿಕಾರರ ಸಂಘ ಈ ಹೇಳಿಕೆಗೆ ಪ್ರತಿಕ್ರಿಯಿಸಿದೆ. ಏಕೆಂದರೆ ರೇಗಾ ಒಂದು ಯೋಜನೆಯಷ್ಟೇ ಅಲ್ಲ, ಅದೊಂದು ಕಾನೂನು ಎಂಬುದನ್ನು ಮರೆತು ಇಂತಹ ಕರೆ ಕೊಡುವುದು ಮಂತ್ರಿಗಳಿಗೆ ಭೂಷಣವಲ್ಲ ಎಂದು ಅದು ಹೇಳಿದೆ. ಬದಲಾಗಿ ಈ ಮಂತ್ರಿಗಳು ತಮ್ಮ ಸರಕಾರ ಸರಿಯಾಗಿ ಕೂಲಿ ಪಾವತಿಯಾಗುವಂತೆ ಮತ್ತು 100ದಿನಗಳ ಕೆಲಸ ಕೊಡಲಾಗದಿದ್ದರೆ ನಿರುದ್ಯೋಗ ಪರಿಹಾರ ಕೊಡುವಂತೆ ಮಾಡಿ ಈ ಕಾನೂನಿನ ಸರಿಯಾದ ಅನುಷ್ಠಾನವಾಗುವಂತೆ ಮಾಡಲಿ ಎಂದು ಕೃಷಿ ಕೂಲಿಗಾರರ ಸಂಘ ಸಲಹೆ ನೀಡಿದೆ.

ಇದಾದ ನಂತರ ಈಗ ಮಹಾರಾಷ್ಟ್ರದ ರೇಗಾ ಕೂಲಿಗಾರರನ್ನು ನಂದುರ್ಬಾರ್‌ನಲ್ಲಿ ರೈಲ್ವೆ ಕಾಮಗಾರಿಗಳಲ್ಲಿ ಬಳಸುವ ಪ್ರಯತ್ನ ನಡೆದಿದೆ.

ಈ ಕಾನೂನಿನ ಒಂದು ಮುಖ್ಯ ಸ್ವರೂಪವೆಂದರೆ ಅದು ಸಾರ್ವಜನಿಕ ಆಸ್ತಿಯನ್ನು ನಿರ್ಮಿಸುವಂತದ್ದು. ಈಗಾಗಲೇ 'ಸಾರ್ವಜನಿಕ ಹಿತಸೃಷ್ಟಿ'ಯಿಂದ ರೇಗಾ ಕೂಲಿಗಾರರನ್ನು ವೈಯಕ್ತಿಕವಾಗಿ ಭೂಮಾಲಿಕರು ದುಡಿಸಿಕೊಳ್ಳು ಅವಕಾಶ ನೀಡಿ ಅದರ ಈ ಸಾರ್ವಜನಿಕ ಆಸ್ತಿ ನಿರ್ಮಾಣ ಸ್ವರೂಪವನ್ನು ಅಳಿಸುವ ಪ್ರಯತ್ನ ನಡೆಯಿತು. ಈಗ ಬಹುಪಾಲು ದೈಹಿಕವಲ್ಲದ, ಯಂತ್ರಚಾಲಿತ ಮತ್ತು ಕಾಂಟ್ರಾಕ್ಟರುಗಳ ಮೂಲಕ ಮಾಡುವ ರೈಲ್ವೇ ಕಾಮಗಾರಿಯಂತಹ ಕೆಲಸಕ್ಕೆ ಬಳಸುತ್ತಿರುವುದನ್ನೂ ಅಖಿಲ ಭಾರತ ಕೃಷಿಕೂಲಿಗಾರರ ಸಂಘ ವಿರೋಧಿಸಿದೆ.

ಯುಪಿಎ-2 ಸರಕಾರ ಹೀಗೆ ಈ ಕಾನೂನಿನೊಂದಿಗೆ ಆಟವಾಡುವುದನ್ನು ನಿಲ್ಲಿಸಿ, ಈ ಕಾನೂನಿನ ಅಡಿಯಲ್ಲಿ ದಿನಗೂಲಿಯನ್ನು 300ರೂ.ಗೆ ಹೆಚ್ಚಿಸಬೇಕು, ವರ್ಷದಲ್ಲಿ ಕನಿಷ್ಟ 250 ದಿನಗಳ ಕೆಲಸ ಸಿಗುವಂತೆ ಮಾಡಬೇಕು ಹಾಗೂ ಕೆಲಸ ಕೊಡಲಾಗದಿದ್ದರೆ ನಿರುದ್ಯೋಗ ಭತ್ಯೆ ಕೊಡುವತ್ತ ಗಮನ ಹರಿಸಬೇಕು, ಆಮೂಲಕ ಈ ಕಾನೂನನ್ನು ಹೆಚ್ಚು ಅರ್ಥಪೂರ್ಣಗೊಳಿಸಲು ಪ್ರಯತ್ನಿಸಬೇಕೇ ಹೊರತು, ಕಾಂಟ್ರಾಕ್ಟರುಗಳು ಮತ್ತು



ವೇದರಾಜ ಎನ್.ಕೆ.

ಯಂತ್ರಗಳ ಮೂಲಕ ಬಡ ಕೂಲಿಗಾರರ ಲೂಟಿ ಮಾಡುವ ತಮ್ಮ ಧೋರಣೆಗಳಿಗೆ ಈ ಕಾನೂನನ್ನು ಬಳಸಬಾರದು ಎಂದು ಅದು ಎಚ್ಚರಿಸಿದೆ.

ಇಂಗ್ಲಿಷ್ ಬರದ್ದರಿಂದ ಜಪಾನೀ ಬ್ಯಾಂಕುಗಳು ಪಾರಾದವೇ?

2008ರಲ್ಲಿ ಜಾಗತಿಕ ಹಣಕಾಸು ಬಿಕ್ಕಟ್ಟು ಜಪಾನನ್ನು ಅಷ್ಟಾಗಿ ಬಾಧಿಸಿರದಿದ್ದರೆ ಅದ-ಕ್ಕೆ ಅಲ್ಲಿನ ಬ್ಯಾಂಕಿಂಗ್ ವಲಯದಲ್ಲಿ ಕೆಲಸ ಮಾಡುವವರ ಇಂಗ್ಲಿಷ್ ಜ್ಞಾನ ಬಹಳ ದುರ್ಬಲವಾಗಿರುವುದೇ ಕಾರಣವಂತೆ. ಹೀಗೆಂದವರು ಸ್ವತಃ ಅಲ್ಲಿಯ ಹಣಕಾಸು ಮಂತ್ರಿಗಳು!

ವಿಲಕ್ಷಣ ಹೇಳಿಕೆಗಳಿಗೆ ಹೆಸರಾದ ವ್ಯಕ್ತಿಯೀತ ಎಂದು ಮಾಧ್ಯಮಗಳು ಅವರನ್ನು ಚಿತ್ರಿಸಿವೆ. ಇದರಲ್ಲಿ ನಿಜಾಂಶವಿರಬಹುದಾದರೂ ಕೂಡ ಅವರು ಕಳೆದ ತಿಂಗಳ ಕೊನೆಯಲ್ಲಿ ಟೋಕಿಯೋದಲ್ಲಿ ವಿಚಾರ ಸಂಕಿರಣವೊಂದರಲ್ಲಿ ಆಡಿದ ಈ ಮಾತುಗಳಲ್ಲಂತೂ ವ್ಯಂಗ್ಯಾಂಶವಿದ್ದಂತಿದೆ.

ಲೆಹ್ಮನ್ ಬ್ರದರ್ಸ್ ಮುಂತಾದ ಪಾಶ್ಚಿಮಾತ್ಯ ಆತ್ಯಾಧುನಿಕ ಬ್ಯಾಂಕುಗಳ ಪ್ರಮುಖರುಗಳು ಸೃಷ್ಟಿಸಿದ 'ಡಿರೈವೇಟಿವ್'ಗಳು, ಸಬ್‌ಪ್ರೈಮ್ ಲೋನ್(ಅಪಾತ್ರ ಸಾಲ) ಮುಂತಾದ ಹೊಸ-ಹೊಸ ಹೂಡಿಕೆ ಸಾಧನಗಳು ಈ ಜಾಗತಿಕ ಬಿಕ್ಕಟ್ಟಿನ ಹಿಂದೆ ಇರುವಂತವುಗಳು, ಅತಿ ಬೇಗನೇ ಅತಿ ಹೆಚ್ಚು ಲಾಭ ಗಿಟ್ಟಿಸುವ ಇಂತಹ ಸಾಧನಗಳು ಈ ಹೂಡಿಕೆ ಬ್ಯಾಂಕುಗಳು ಎನಿಸಿಕೊಂಡವುಗಳಿಗೇ ಮುಳುವಾಗಿ ಅವರ ಸರಕಾರಗಳು ಮಧ್ಯಪ್ರವೇಶಿಸಿ ಅವನ್ನು ಪಾರು ಮಾಡಿರುವುದು ಈಗ ಇತಿಹಾಸ.

ಈ ಹಿನ್ನೆಲೆಯಲ್ಲಿ ಒಬ್ಬ ಅಮೆರಿಕನ್ ಬ್ಯಾಂಕರ್ ಜಪಾನೀ ಬ್ಯಾಂಕುಗಳು ಆರೋಗ್ಯಪೂರ್ಣವಾಗಿವೆ ಎಂದನಂತೆ. ಇದನ್ನು ಆ ವಿಚಾರ ಸಂಕಿರಣದಲ್ಲಿ ಪ್ರಸ್ತಾಪಿಸುತ್ತ ಜಪಾನೀ ಹಣಕಾಸು ಮಂತ್ರಿಗಳು "ಅದು ಖಂಡಿತಾ ನಿಜವಲ್ಲ. ಜಪಾನೀ ಬ್ಯಾಂಕುಗಳ ಮ್ಯಾನೇಜರುಗಳಿಗೆ ಸರಿಯಾಗಿ ಇಂಗ್ಲಿಷ್ ಬಾರದ್ದರಿಂದ ,ಇಂತಹ ಹೂಡಿಕೆ ಸಾಧನಗಳನ್ನು ಖರೀದಿಸಲಿಲ್ಲ" ಎಂದರಂತೆ. ಅಂದರೆ ಅವರಿಗೆ ಇಂಗ್ಲಿಷ್ ಸರಿಯಾಗಿ ಅರ್ಥವಾಗದ್ದರಿಂದ ಅ ಜಪಾನೀ ಬ್ಯಾಂಕುಗಳು ಪಾಶ್ಚಿಮಾತ್ಯ ಬ್ಯಾಂಕರುಗಳ ಹೊಸ-ಹೊಸ 'ಅನ್ವೇಷಣೆ'ಗಳತ್ತ ಆಕರ್ಷಿತರಾಗಲಿಲ್ಲ, ಇದರಿಂದಾಗಿ ಈ 'ಅನ್ವೇಷಣೆ'ಗಳು ತಂದ ಬಿಕ್ಕಟ್ಟು ಅವರನ್ನು ಬಾಧಿಸಲಿಲ್ಲ ಎಂಬ ಅವರ ವಿಶ್ಲೇಷಣೆ ಜಾಗತಿಕ ಬಿಕ್ಕಟ್ಟಿನ ಸ್ವರೂಪದ ಹಿನ್ನೆಲೆಯಲ್ಲಿ ತಾರ್ಕಿಕವಾಗಿ ಕಾಣಿಸುವುದಿಲ್ಲವೇ? ●

ಈಗ ಇಂಡಿಯನ್ ಆಯಿಲ್ ಶೇರು ಮಾರಾಟದ ತರಾತುರಿ

ಒಂದೆಡೆ ಎಫ್‌ಡಿಐ, ಇನ್ನೊಂದೆಡೆ ಸಾರ್ವಜನಿಕ ವಲಯದ ಘಟಕಗಳ ಶೇರು ಮಾರಾಟ ಈ ಎರಡು ಗೀಳುಗಳು ಯುಪಿಎ-2 ಸರಕಾರವನ್ನು ಬಲವಾಗಿ ಆವರಿಸಿಕೊಂಡಿವೆ. ಇದು ನಮ್ಮ ದೇಶದ ಆರ್ಥಿಕ ಆಯಕಟ್ಟಿನ, ಅತ್ಯಂತ ಪ್ರಮುಖವಾದ ವಲಯಗಳಲ್ಲೇ ಹೆಚ್ಚು - ಅದರಲ್ಲೂ ಕಲ್ಲಿದ್ದಲು, ವಿದ್ಯುತ್ ಮತ್ತು ಪೆಟ್ರೋಲಿಯಂ ವಿಭಾಗಗಳಲ್ಲಿ.

ಇತ್ತೀಚೆಗೆ ಒಎನ್‌ಜಿಸಿ(ತೈಲ ಮತ್ತು ನೈಸರ್ಗಿಕ ಅನಿಲ ನಿಗಮ) ಮತ್ತು ಆಯಿಲ್ ಇಂಡಿಯಾ ಲಿಮಿಟೆಡ್(ಒಐಎಲ್) ಶೇರು ಮಾರಾಟಗಳಿಂದ ತೃಪ್ತಗೊಳ್ಳದ ಯುಪಿಎ-2 ಸರಕಾರ ಸಾರ್ವಜನಿಕ ವಲಯದ ಅತಿ ದೊಡ್ಡ ಶುದ್ಧೀಕರಣ ಘಟಕವಾದ ಇಂಡಿಯನ್ ಆಯಿಲ್ ಕಾರ್ಪೊರೇಷನ್‌ನ ಇನ್ನೂ 10ಶೇ. ಶೇರುಗಳ ಮಾರಾಟಕ್ಕೆ ಮುಂದಾಗಿದೆ. ಈ ಮೂಲಕ ಒಐಎಲ್‌ನಲ್ಲಿ ಸರಕಾರದ ಪಾಲು 68.9ಶೇ.ಕ್ಕೆ ಇಳಿಯುತ್ತದೆ. ಅಲ್ಲದೆ ಹೀಗೆ ಮಾರಾಟಕ್ಕಿಟ್ಟಾಗ ಬರುವ ಹೆಚ್ಚುವರಿ ಮೊತ್ತಗಳನ್ನು ಕೂಡ ಹಿಂದುರಿಗಿಸದೆ ಇಟ್ಟುಕೊಳ್ಳಬಹುದೇ ಎಂದು ಆರ್ಥಿಕ ವ್ಯವಹಾರಗಳ ಸಂಪುಟ ಸಮಿತಿ ನಿರ್ಧರಿಸಲಿದೆಯೆಂದು ಹೇಳಲಾಗಿದೆ. ಹೀಗಾದರೆ ಶೇರು ಮಾರಾಟ 10ಶೇ.ಕ್ಕಿಂತಲೂ ಹೆಚ್ಚಾಗುತ್ತದೆ. ಅಂದರೆ ಸರಕಾರದ ಪಾಲು ಇನ್ನೂ ಇಳಿಯುತ್ತದೆ.

ಇಷ್ಟೇ ಅಲ್ಲ, ಸಾರ್ವಜನಿಕ ವಲಯದ ಘಟಕಗಳ ಶೇರು ಮಾರಾಟದಲ್ಲಿ ಸಾಮಾನ್ಯವಾಗಿ ಶೇರುಗಳನ್ನು ಸಾರ್ವಜನಿಕ ಮಾರಾಟಕ್ಕೆ ಕೊಡುವ (ಎಫ್‌ಪಿಒ) ವಿಧಾನದ ಬದಲು 'ಮಾರಾಟಕ್ಕೆ ಕೊಡುವುದು' (ಒಎಫ್‌ಎಸ್) ದಾರಿ ಅನುಸರಿಸಲು ನಿರ್ಧರಿಸಲಾಗಿದೆಯಂತೆ. ಇದು ಶೇರು ಮಾರಾಟದ ಪ್ರಕ್ರಿಯೆಯನ್ನು ಶೀಘ್ರವಾಗಿ ನೆರವೇರಿಸುತ್ತದೆಯಂತೆ.ಆದರೆ

ಇದಕ್ಕೆ ಕಾನೂನು, ಪೆಟ್ರೋಲಿಯಂ ಸಾರ್ವಜನಿಕ ಉದ್ದಿಮೆಗಳು, ಹಣಕಾಸು ಇಲಾಖೆಗಳು ಮತ್ತು ಯೋಜನಾ ಆಯೋಗದ ಮಂಜೂರಾತಿ ಅಗತ್ಯವಿದ್ದು ಅದನ್ನು 5 ದಿನಗಳಲ್ಲಿ ಪಡೆಯುವಂತೆ ಪ್ರಧಾನ ಮಂತ್ರಿಗಳ ಕಚೇರಿ(ಪಿಎಂಒ) ಶೇರು ಮಾರಾಟ ಇಲಾಖೆಗೆ ಹೇಳಿದೆಯಂತೆ. ಐಒಸಿ ತೈಲ

ಪುಟ 15 ಕ್ಕೆ



'ಈಗ ನಾವು ಸರಿ ದಾರಿಯಲ್ಲಿದ್ದೇವೆಯೇ?'–'ಹಿಂದುಸ್ತಾನ್ ಟೈಮ್ಸ್'ನಲ್ಲಿ ಜಯಂತೋ ರವರ ವ್ಯಂಗ್ಯ

ಜಗದಗಲ

ನನ್ನ ಹೆಸರು ಎಡ್ವರ್ಡ್ ಸ್ನೋಡೆನ್

ಅನು : ಸುರೇಂದ್ರ ರಾವ್

ಹೌದು, ನನ್ನ ಹೆಸರು ಎಡ್ವರ್ಡ್ ಸ್ನೋಡೆನ್. ಕೇವಲ ಒಂದು ತಿಂಗಳ ಹಿಂದೆ ನನಗೆ ನನ್ನದೇ ಆದ ಒಂದು ಕುಟುಂಬ, ಸ್ವರ್ಗದಲ್ಲೊಂದು ಮನೆ ಇತ್ತು ಮತ್ತು ನಾನು ಸುಖದ ಸುಪ್ಪತ್ತಿಗೆಯಲ್ಲಿದ್ದೆ. ಯಾವುದೇ ವಾರಂಟ್ ಇಲ್ಲದೇ ನಿಮ್ಮ ಪತ್ರವ್ಯವಹಾರಗಳನ್ನು- ಯಾರದ್ದೇ ಪತ್ರವ್ಯವಹಾರವನ್ನು ಯಾವುದೇ ಸಮಯದಲ್ಲಿ- ಹುಡುಕುವ, ವಶಪಡಿಸಿಕೊಳ್ಳುವ ಮತ್ತು ಓದುವ ಪಶ್ನಾತೀತ ಅಧಿಕಾರ ಕೂಡ ನನಗಿತ್ತು. ಜನರ ಹಣೆಬರಹ ಬದಲಿಸುವ ಅಧಿಕಾರ ಅದಾಗಿತ್ತು.

ಅದು ಕಾನೂನಿನ ಗಂಭೀರ ಉಲ್ಲಂಘನೆ ಕೂಡ. ಅಂತಹ ಅಸಾಧಾರಣ ಸರ್ವವ್ಯಾಪೀ ಬೇಹುಗಾರಿಕೆ ವ್ಯವಸ್ಥೆಯನ್ನು ನನ್ನ ದೇಶದ ಸಂವಿಧಾನದ 4ನೇ ಮತ್ತು 5ನೇ ತಿದ್ದುಪಡಿಗಳು ನಿಷೇಧಿಸಿವೆ. ಮಾನವ ಹಕ್ಕುಗಳ ಸಾರ್ವತ್ರಿಕ ಘೋಷಣೆಯ 12ನೇ ನಿಬಂಧನೆ ಕೂಡ ಅದನ್ನು ನಿರ್ಬಂಧಿಸಿದೆ. ಅದಕ್ಕೂ ಮಿಗಿಲಾಗಿ ಅಸಂಖ್ಯಾತ ಕಾಯಿದೆಗಳು ಹಾಗೂ ಒಪ್ಪಂದಗಳು ಅದನ್ನು ನಿಷೇಧಿಸುತ್ತವೆ. ವಿಶ್ವದ ಬೇರಾರೂ ನೋಡಲು ಅನುಮತಿಯಿಲ್ಲದ ಕಾನೂನುಬಾಹಿರ ಅನೈತಿಕ ವ್ಯವಹಾರವದು. ಇಂತಹ ಕಾರ್ಯಕ್ರಮಗಳನ್ನು ಅಮೆರಿಕಾದ ಸಂವಿಧಾನವು ಕಾನೂನುಬಾಹಿರ ಎಂದು ಗುರುತಿಸುವಾಗಲೇ, ನ್ಯಾಯಾಲಯದ ಗುಪ್ತ ತೀರ್ಪುಗಳು ಅದ್ಹೇಗೋ ಕಾನೂನುಬದ್ಧಗೊಳಿಸಿವೆ ಎಂದು ನನ್ನ ಸರ್ಕಾರ ಸಮರ್ಥಿಸಿಕೊಳ್ಳುತ್ತಿದೆ. ಅದು ನ್ಯಾಯ ಎಂದು ಮೇಲ್ನೋಟಕ್ಕಾದರೂ ಕಾಣಬೇಕೆಂಬ ನ್ಯಾಯತತ್ವದ ಮೂಲಭೂತ ಕಲ್ಪನೆಯನ್ನೇ ಆ ತೀರ್ಪುಗಳು ನಿಸ್ಸಂಶಯವಾಗಿ ಭ್ರಷ್ಟಗೊಳಿಸಿವೆ. ಗುಪ್ತ ಕಾನೂನುಗಳ ಬಳಕೆಯಿಂದ ಅನೈತಿಕವಾದುದನ್ನು ನೈತಿಕವೆಂದು ಸಾರಲು ಸಾಧ್ಯವಿಲ್ಲ.



1945ರ ನ್ಯೂರಂಬರ್ಗ್‌ನಲ್ಲಿ ಘೋಷಿತವಾದ ತತ್ವವನ್ನು ನಾನು ನಂಬುತ್ತೇನೆ: "ತನ್ನ ದೇಶಕ್ಕೆ ವಿಧೇಯನಾಗಿರಬೇಕೆಂಬ ಕಟ್ಟುಪಾಡನ್ನೂ ಮೀರಿದ ಅಂತರ್‍ರಾಷ್ಟ್ರೀಯ ಕರ್ತವ್ಯಗಳು ಪ್ರತಿಯೊಬ್ಬ ವ್ಯಕ್ತಿಗೂ ಇರುತ್ತವೆ. ಆದ್ದರಿಂದ, ಶಾಂತಿ ಮತ್ತು ಮಾನವೀಯತೆಯ ವಿರುದ್ಧ ನಡೆಯುವ ದುಷ್ಕೃತ್ಯಗಳನ್ನು ತಡೆಯಲು ಪ್ರತಿಯೊಬ್ಬ ನಾಗರಿಕನೂ ತನ್ನ ದೇಶದ ಕಾನೂನನ್ನು ಉಲ್ಲಂಘಿಸಬೇಕಾಗುತ್ತದೆ."

ಇದರ ಅನುಸಾರವಾಗಿ, ನನಗೆ ಸರಿಯೆನಿಸಿದ್ದನ್ನು ನಾನು ಮಾಡಿದೆ ಮತ್ತು ಅಂತಹ ಅನ್ಯಾಯಗಳನ್ನು ಸರಿಪಡಿಸಲು ಪ್ರಚಾರ ಕೈಗೊಂಡೆ. ನನ್ನ ಶ್ರೀಮಂತಿಕೆಯನ್ನು ಹೆಚ್ಚುಮಾಡಿಕೊಳ್ಳಲು ನಾನು ಬಯಸಲಿಲ್ಲ. ನಾನು ಅಮೆರಿಕಾದ ರಹಸ್ಯಗಳನ್ನು ಮಾರಲು ಬಯಸಲಿಲ್ಲ.

ನನ್ನ ಸುರಕ್ಷತೆಯ ಖಾತರಿಗಾಗಿ ನಾನು ಯಾವುದೇ ವಿದೇಶಿ ಸರ್ಕಾರದೊಂದಿಗೆ ಪಾಲುದಾರನಾಗಲಿಲ್ಲ. ಅದರ ಬದಲು, ನನಗೆ ಗೊತ್ತಿರುವುದನ್ನು ಸಾರ್ವಜನಿಕರ ಕೊಂಡೊಯ್ದೆ, ನಮ್ಮ ಮೇಲೆ ಪರಿಣಾ ಬೀರುವುದರ ಬಗ್ಗೆ ಎಲ್ಲರೂ ಬಹಿರಂಗವಾ ಹಗಲಿನಲ್ಲೇ ಚರ್ಚೆ ಮಾಡಲು ಸಾಧ್ಯವಾಗಬೇ ಮತ್ತು ಆ ಮೂಲಕ ನಾನು ಜಗತ್ತಿನಿಂ ನ್ಯಾಯ ಬೇಡುತ್ತಿದ್ದೇನೆ.

ಎಲ್ಲರನ್ನೂ ಬಾಧಿಸು ಬೇಹುಗಾರಿಕೆಯ ಬಗ್ಗೆ ಸಾರ್ವಜನಿಕರಿ ಹೇಳುವ ನೈತಿಕ ನಿರ್ಧಾರದಿಂದಾ ನಾನೀಗ ಬೆಲೆತೆರಬೇಕಾಗಿದೆ, ಆದ ಅದು ನ್ಯಾಯವಾದದ್ದು, ಆದ್ದರಿಂ ಅದಕ್ಕಾಗಿ ನನಗೇನೂ ವಿಷಾದವಿಲ್ಲ.

ಅವತ್ತಿನಿಂದಲೂ, ಅಮೆ ಸರ್ಕಾರ ಮತ್ತು ಬೇಹುಗಾರಿ ಸಂಸ್ಥೆ ನಾನು ಬಾಯಿ ಬಿಟ್ಟ ಹಾ ಬೇರೆಯವರೂ ರಹಸ್ಯ ಹೊರಗೆಡಹಿದ ಅವರ ಗತಿ ಏನಾಗುತ್ತದೆ ಎಂದ ನನ್ನನ್ನು ಉದಾಹರಿಸಿ ಎಚ್ಚರಿ ನೀಡುವ ಪ್ರಯತ್ನ ಮಾಡುತ್ತಿವೆ. ನ ರಾಜಕೀಯ ಅಭಿವ್ಯಕ್ತಿಯ ಅಪರಾಧಕ್ಕಾ ನನ್ನನ್ನು ದೇಶಭ್ರಷ್ಟನನ್ನಾಗಿ ಮಾ ಬೇಟೆಯಾಡುತ್ತಿವೆ. ಆಕಾಶದ ಹಾರಾಡದಂತೆ ನನ್ನ ಪಾಸ್‌ಪೋರ್ಟ್‌ನ ಮುಟ್ಟುಗೋಲು ಹಾಕಿಕೊಂಡ ಆದೇ ಹೊರಡಿಸಿದ ಅಮೆರಿಕಾ ಸರ್ಕಾರ ನನ್ನನ ತನಗೊಪ್ಪಿಸಬೇಕೆಂದು ಹಾಂಗ್‌ಕಾಂಗ್‌ನ ಕೇಳಿತ್ತು.

ಕವನ

ಕೊಂದು ಬಿಡುವೆ ನಿನ್ನನ್ನು ! ತೊಲಗಾಚೆ ..!

ಧಿಕ್ಕಾರವಿರಲಿ ನಿನಗೆ, ದುಷ್ಟ ಬಿಗುಮಾನವೇ
ದುರುಳ ಅಹಂ ಭಾವವೇ,
ದ್ರೋಹಿ ನೀನು, ಕೊಲ್ಲುತ್ತಿರುವೇ ವಿಶ್ವಾಸವಾ
ಹೇ., ತೊಲಗು, ತೊಲಗಾಚೆ ಬಿಟ್ಟು ಜಗವಾ.
ಸದ್ದಿಲ್ಲದೇ ನನ್ನೊಳಗೆ ಸೇರಿದೆ
ಹಿತವಾಗಿರುವಿಯೆಂದು ನೀನೇ ನಾನಾದೆ
ನನ್ನವರೊಳಗೂ ಬೆಳೆದೆ
ಅವರಿಗೂ ಹಿತವಾಗಿ ನೀನೇ ಅವರಾದೆ.
ನಮ್ಮನ್ನೆ ನಾವು ಮರೆತ ಮೇಲೆ
ಈರ್ವರ ಮುಖಾ ಮುಖಿಯಾಗಿಸಿ ಹೆಮ್ಮರವಾದೆ
ಅಬ್ಬಾ ನಿನ್ನ ಸಹವಾಸವೇ
ನಮ್ಮೊಳಗೆ ಬಿಕ್ಕಟ್ಟನಿಟ್ಟೆ, ಗೋಡೆಗಳ ನೆಟ್ಟೇ,
ಅಪ್ರಾಮಾಣಿಕರನ್ನಾಗಿಸಿಟ್ಟೆ,

ಅಯ್ಯೋ.. ಪ್ರೀತಿಯನ್ನೇ ಕೊಂದು ಬಿಟ್ಟೆ
ಚದುರ ನೀನು, ಅಮ್ಮಾ...ವಿಷವನ್ನೇ ಬಿತ್ತೇ,
ದ್ವೇಷ-ಅಸೂಯೆಯನ್ನೆ ಬೆಳೆಸಿಬಿಟ್ಟೆ,
ಹೊಂದಾಣಿಕೆಯನ್ನು ಹಣಿದಣಿದು
ಎಲ್ಲರ ದೂರ ಮಾಡಿ ಬಿಟ್ಟೆ,
ಗಗನವೇ ಬಿರಿಯುವಂತೆ ಗಹ ಗಹಿಸಿ
ಗೆಲುವಿನ ನಗೆಯ ಅಲೆಯ ತೇಲಿ ಬಿಟ್ಟೆ
ಭಲೇ, ಎಂತೆಂತವರ ಕೆಡವಿ ಬಿಟ್ಟೆ
ಕ್ರೂರಿ ನೀನು ಸಾಕಿನ್ನು ನಿನ್ನ ಸಹವಾಸ
ನೀ ತಿನ್ನುವುದು ಹೊಂದಾಣಿಕೆ, ಕುಡಿಯುವುದು ವಿಶ್ವಾಸ
ಜಗಿಯುವುದು ಪ್ರೀತಿ, ಹುಗಿಯುವುದು ದ್ವೇಷ
ನೀನು ಇದ್ದಷ್ಟು ನಾವು ದೂರ ಬಹು ದೂರ
ಛೀ.. ಬೇಗನೇ ತೊಲಗಾಚೆ ನೀ ಬಲು ಭಾರಾ.
ನಿನ್ನಿಂದ ಮನ ಹಾಳು, ಮನೆ ಪಾಳು,
ಹೊಲ ಬೀಳು, ಬದುಕು ಹಾಳು !
ಮತ್ತೆ ಕೇಳು ದೇಶ, ವಿಶ್ವವೇ ಹಾಳು !!
ನನ್ನ ಬಿಟ್ಟರಷ್ಟೇ ಅಲ್ಲಾ
ಬದುಕಿನಿಂದಾಚೆ ತೊಲಗು ನಮ್ಮೆಲ್ಲಾ

ಯಾಕೇ, ವಿಶ್ವದಾಚೆಗೇ..
ತೊಲಗು ನೀ ತೊಲಗು ತೊಲಗಾಚೆಗೆ.
ನೀನು ಬೇಕಿಲ್ಲಾ
ನಿನ್ನ ಅಗತ್ಯವೇ ನಮಗಿಲ್ಲ.
ಮರಳಿ ಬರಬೇಡಾ, ಇತ್ತ ಸುಳಿಯ ಬೇಡಾ!
ಸುಳಿದೀಯ ಜೋಕೆ...? ಮರೆತು ಎಚ್ಚರವನ್ನಾ!
ಇಟ್ಟು ನೋಡು ನೆನಪನ್ನು,
ನಾ ಸತ್ತರೂ ಚಿಂತೆಯಿಲ್ಲಾ
ಎಲ್ಲಿ, ಎಲ್ಲೆಲ್ಲಿ ಅವಿತರೂ,
ಒಬಾಮನೇ ನ್ಯಾಟೋದೊಂದಿಗೆ ಅಡ್ಡ ಬಂದರೂ
ತ್ರಿಮೂರ್ತಿಗಳೇ ರಕ್ಷಣೆಗೆ ನಿಂತರೂ
ಬಿಡುವುದಿಲ್ಲ ಕೊಲ್ಲದೇ ನಿನ್ನನ್ನಾ..?
ಕೇಳು. ಕೇಳಿಲ್ಲಿ. ತೊಲಗಿ ಬಿಡು. ಕೊಲ್ಲುವ ಮುನ್ನ !
ಕೊಡುವೆ ಇದಕ್ಕೆ, ಸುಂದರಯ್ಯನ ಸಾಕ್ಷಿಯನ್ನಾ !!
ನೀವ್ ಬನ್ನಿ ಬಂಧುಗಳೇ,
ಕೈ ಜೋಡಿಸೋಣ
ವಿಶ್ವದೊಳಗೇ ಪ್ರೀತಿಯನ್ನು ಬೆಸೆಯೋಣ !
ದುಷ್ಟ ಬಿಗುಮಾನವಾ,
ದುರುಳ ಅಹಂ ಭಾವವಾ ಬಡಿದು ಓಡಿಸೋಣ !!
ಸದೆ ಬಡಿದು ಓಡಿಸೋಣ !!!

-ಬಸು-ಬಳ್ಳಾರಿ

ಜನಶಕ್ತಿ
ಕನ್ನಡ ವಾರಪತ್ರಿಕೆ

ೇರಳ ಯುಡಿಎಫ್........

ಟ 10 ರಿಂದ

ತ್ಯಾಚಾರ ಪ್ರಕರಣದ ಹಿನ್ನೆಲೆಯಲ್ಲಿ ಜನವರಿ ಂದು ಸುಪ್ರೀಂ ಕೋರ್ಟ್, 17 ವರ್ಷದ ಂದಿನ ಪ್ರಕರಣದ ಪುನರ್‌ವಿಚಾರಣೆಗೆ ಭಾಗೀಯ ಪೀಠವನ್ನು ನೇಮಕ ಮಾಡಿತು. ರು ತಿಂಗಳೊಳಗೆ ಈ ಪ್ರಕರಣ-ಸಂಬಂಧಿಸಿದಂತೆ ತೀರ್ಪು ನೀಡುವಂತೆ ೂಚಿಸಿತ್ತು. ಪಿ.ಜೆ. ಕುರಿಯನ್ ಸಹಿತ ಎಲ್ಲ ೬ ಆರೋಪಿಗಳು ಮೂರು ತಿಂಗಳೊಳಗೆ ್ಯಾಯಾಲಯಕ್ಕೆ ಶರಣಾಗಿ ಹೊಸ ಜಾಮೀನು ಡೆಯುವಂತೆ ಸೂಚಿಸಲಾಯಿತು.

ಈ ಬೆಳವಣಿಗೆ ಕೇರಳದ ರಾಜಕೀಯ ಂಗದಲ್ಲಿ ಪ್ರತಿರೋಧದ ಹೊಸ ಲೆಯನ್ನು ಎಬ್ಬಿಸಿತು. ಕುರಿಯನ್ ವಿರುದ್ಧ ೀಕಾಪ್ರಹಾರವೇ ನಡೆಯಿತು. ತನ್ನ ೇಳಿಕೆಯನ್ನು ಬದಲಾಯಿಸಲಾರೆ ಎಂದು ಣದ ಸಂತ್ರಸ್ತೆ ಮಾಧ್ಯಮಕ್ಕೆ ಪತ್ರ ಬರೆದರು. ದಾದ ಎರಡೇ ದಿನದಲ್ಲಿ ಸುಪ್ರೀಂಕೋರ್ಟ್ ೀ ಆದೇಶ ಹೊರಡಿಸಿತು.

ನಾಚಿಕೆಗೇಡಿನ ಸಂಗತಿ ಎಂದರೆ, ಕೇರಳ ುಖ್ಯಮಂತ್ರಿ ಉಮ್ಮನ್ ಚಾಂಡಿ ಮತ್ತು ಪಿಸಿಸಿ ಅಧ್ಯಕ್ಷ ರಮೇಶ್ ಚನ್ನಿತ್ತಲ ಅವರಿಂದ ುರಿಯನ್ ಅವರನ್ನು ರಕ್ಷಿಸುವ ಪ್ರಯತ್ನ ನಡೆಯಿತು. ಸೂರ್ಯನೆಲ್ಲಿ ಪ್ರಕರಣವನ್ನು ಪುನರ್ ವಿಚಾರಣೆ ನಡೆಸುವುದಿಲ್ಲ ಎಂದು ಎಂ ಚಾಂಡಿ ಹೇಳಿದ್ದು, ನ್ಯಾಯಾಲಯಗಳು ಈಗಾಗಲೇ ಈ ಪ್ರಕರಣದ ತೀರ್ಪು ನೀಡಿವೆ ಎಂದು ಹೇಳಿದರು. ಇದೇ ವೇಳೆ, ಪಕ್ಷ ುರಿಯನ್ ಅವರ ಬೆಂಬಲಕ್ಕೆ ನಿಲ್ಲಲಿದೆ ಎಂದು ರಮೇಶ್ ಚನ್ನಿತ್ತಲ ಹೇಳಿಕೆ ನೀಡಿದರು.

ಮಹಿಳಾ ಸಂಘಟನೆಗಳು ಬೀದಿಗಿಳಿದು ಆಗ್ರಹಿಸಿದವು. ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ನೇತೃತ್ವದಲ್ಲಿ ಕೇರಳ ಾನಸಭೆಯ ಮುಂದೆ ಪ್ರತಿಭಟನೆ ಇತ್ಯಾದಿ ೋರಾಟಗಳು ಮುಂದುವರಿದಿವೆ.

ನೀರಿನ ಖಾಸಗಿಕರಣ, ಪವರ್‌ಕಟ್ ೇರಿದಂತೆ ಕೇರಳ ಸರ್ಕಾರದ ಜನವಿರೋಧಿ ನೀತಿಗಳ ವಿರುದ್ಧ ಸಿಪಿಐ(ಎಂ) ನೇತೃತ್ವದ ಎಲ್‌ಡಿಎಫ್ ಕರೆಗೆ ಭಾರೀ ಜನಬೆಂಬಲ ವ್ಯಕ್ತವಾಗಿದೆ. ಜಿಲ್ಲಾ ಕಚೇರಿಗಳ ಮುಂದೆ ನಡೆದ ಪ್ರತಿಭಟನಾ ಪ್ರದರ್ಶನಕ್ಕೆ ಅಭೂತಪೂರ್ವ ಬೆಂಬಲ ದೊರಕಿದೆ. ವಿಧಾನಸಭೆಯ ಮುಂದೆ ತೀವ್ರ ಪ್ರತಿಭಟನೆ ನಡೆದಿದೆ.

ನೀರಿನ ಪೂರೈಕೆಯಲ್ಲಿ ಖಾಸಗಿ ಸಹಭಾಗಿತ್ವದ ಮೂಲಕ ಖಾಸಗೀಕರಣಕ್ಕೆ ಪ್ರೋತ್ಸಾಹ ನೀಡುವ ಪ್ರಸ್ತಾಪವನ್ನು ಈ ಮೂಲಕ ಪ್ರಬಲವಾಗಿ ವಿರೋಧಿಸಲಾಯಿತು.

ಇದೇ ವೇಳೆ, ದುಬಾರಿ ವಿದ್ಯುತ್ ದರ ಏರಿಕೆ ಮೂಲಕ ರಾಜ್ಯ ಸರ್ಕಾರ ಜನರ ೆ ಮತ್ತೊಂದು ಪ್ರಹಾರ ಮಾಡಿತು. ಜನತೆ ಅದನ್ನು ಕೂಡ ಪ್ರತಿಭಟಿಸುತ್ತಿದ್ದಾರೆ.

ಬಿಸಿಯೂಟದ ಕೊರತೆಗಳಿಗೆ.....

ಪುಟ 11 ರಿಂದ

ಹಣ, ಅಡುಗೆ ಕೋಣೆ ಮತ್ತು ಶಾಲೆಗೆ ಬೇಕಾದ ಮೂಲಭೂತ ಸೌಲಭ್ಯಗಳು, ಅಡುಗೆ ಸಿಬ್ಬಂದಿಗೆ ಬದುಕುಳಿಯಬೇಕಾದ ಸಂಭಾವನೆಗಳನ್ನು ಸರಿಯಾಗಿ ಕೊಟ್ಟರೆ ಮತ್ತು ಅದರಲ್ಲಿನ ಭ್ರಷ್ಟಾಚಾರಗಳನ್ನು ತಡೆಯಲು ಸಾಧ್ಯವಾದರೆ ಇದೊಂದು ಉತ್ತಮ ಯೋಜನೆಯಾಗುತ್ತದೆ.

ಆದರೆ ಸರ್ಕಾರದ ಈ ಪಾರದರ್ಶಕತೆಯನ್ನು ಕಾಪಾಡಲು ಶಕ್ಯವಿಲ್ಲದೆ ತನ್ನ ತಲೆಯ ಮೇಲಿನ ಜವಾಬ್ದಾರಿಯನ್ನು ಇಳಿಸಿಕೊಳ್ಳುವ ಸಲುವಾಗಿ ಮಕ್ಕಳ ಹಸಿವನ್ನು ಲಾಭ ಮಾಡಿಕೊಳ್ಳುವ ಸ್ವಯಂ ಸೇವಾ ಸಂಘಟನೆಗಳಿಗೆ ಕೊಟ್ಟು ಕೈ ತೊಳೆದು ಕೊಳ್ಳಲು ನಿರಂತರವಾಗಿ ಪ್ರಯತ್ನಿಸಲಾಗುತ್ತಿದೆ.

ಶಿಕ್ಷಣ ಸಚಿವರ ಕಾರ್ಪೋರೇಟ್ ಮೋಹ

ಕರ್ನಾಟಕದ ಇಂದಿನ ಶಿಕ್ಷಣ ಸಚಿವರಾದ ಕಿಮ್ಮನೆ ರತ್ನಾಕರ್‌ರವರು ಈ ವಿಷಯಗಳನ್ನು ಕೂಲಂಕುಷವಾಗಿ ತಿಳಿಯದೆ ಜುಲೈ 23. 2013 ರಂದು ವಿಧಾನ ಪರಿಷತ್‌ನಲ್ಲಿ ಸದಸ್ಯರು ಕೇಳಿದ ಪ್ರಶ್ನೆಗೆ ಉತ್ತರವಾಗಿ "ನಾನೇ ಖುದ್ದು ನಿಂತು ಕಾರ್ಪೊರೇಟ್ ಸಂಸ್ಥೆಗಳ ಬಳಿ ಮಾತನಾಡುತ್ತೇನೆ" ಎಂದು ಹೇಳಿರುವುದು. ಇವರು ಎಷ್ಟು ನಂಬಿಕೆಯನ್ನು ಈ ಸಂಸ್ಥೆಗಳ ಮೇಲೆಟ್ಟಿದ್ದಾರೆ ಎಂಬುದು ಹಾಗೂ ಆಹಾರದ ವಿಷಯದಲ್ಲಿಯೂ ಹೇಗೆ ಕಾರ್ಪೊರೇಟ್ ಸಂಸ್ಥೆಗಳು ತಮ್ಮ ಅಧೀನಕ್ಕೆ ತೆಗೆದುಕೊಳ್ಳಲು ತಯಾರಾಗಿವೆ ಎಂಬುದನ್ನು ಗ್ರಹಿಸಬೇಕಿದೆ.

ಇಷ್ಟಕ್ಕೂ ದೊಡ್ಡ ದೊಡ್ಡ ಕಾರ್ಪೊರೇಟ್ ಸಂಸ್ಥೆಗಳಲ್ಲಿ ಆಗುತ್ತಿರುವ ಅವಗಢಗಳು, ಅಲ್ಲಿ ಕೆಲಸ ಮಾಡುವ ನೂರಾರು ಜನರ ಜೀವ ಬಲಿ ತೆಗೆದುಕೊಳ್ಳುತ್ತಿರುವುದು ಹಾಗೂ ಕೋಟಿಗಟ್ಟಲೆ ಭ್ರಷ್ಟಾಚಾರದಲ್ಲಿ ಮುಳುಗಿರುವ ಈ ಸಂಸ್ಥೆಗಳು ಸರ್ಕಾರ ನಡಸಬೇಕಾದ ಈ ಯೋಜನೆ ನಡೆಸಲು ಪರ್ಯಾಯ ಖಂಡಿತ ಅಲ್ಲ. ಇದರ ವಿರುದ್ಧ ಎಲ್ಲ ಪ್ರಗತಿಪರ ಶಕ್ತಿಗಳು ಕೂಡಿ ಒಮ್ಮತದಿಂದ ಹೋರಾಡಬೇಕಿದೆ.

ಅಪರಾಧಿಗಳನ್ನು ಶಿಕ್ಷಿಸಿ–ಬಿಸಿಯೂಟ ಯೋಜನೆಯನ್ನು ಬಲಪಡಿಸಿ

ಬಿಸಿಯೂಟ ಕಾರ್ಮಿಕರ ಅಖಿಲ ಭಾರತ ಸಮನ್ವಯ ಸಮಿತಿಯು ಶಾಲೆಯಲ್ಲಿ ವಿಷಪೂರಿತ ಊಟಸೇವಿಸಿ 27 ಮಕ್ಕಳು ಮತ್ತು ಒಬ್ಬ ಬಿಸಿಯೂಟ ಕಾರ್ಯಕರ್ತೆ ಪ್ರಾಣ ತೆತ್ತಿರುವ ದುರಂತದ ಕುರಿತು ತನ್ನ ತೀವ್ರ ಆಘಾತವನ್ನು ಮತ್ತು ದುಖಃವನ್ನು ವ್ಯಕ್ತ ಪಡಿಸಿದೆ. ಅದು ದುರಂತದ ಕುರಿತು ಸ್ವತಂತ್ರವಾದ ತನಿಖೆಗೆ ಮತ್ತು ಅಪರಾಧಿಗಳಿಗೆ ಉಗ್ರ ಶಿಕ್ಷೆಗೆ ಆಗ್ರಹಿಸಿದೆ. ಈ ದುರಂತವು ಎಲ್ಲ ಹಂತಗಳಲ್ಲಿರುವ ಭ್ರಷ್ಟಾಚಾರ ಹಾಗೂ ಶೋಚನೀಯ ಮೂಲಭೂತ ಸೌಕರ್ಯಗಳ ಪರಿಸ್ಥಿತಿ, ಯೋಜನೆಗೆ ಹಣಕಾಸು ಕೊರತೆ, ಮತ್ತು ಕಳಪೆ ಗುಣಮಟ್ಟದ ಆಹಾರ ಪದಾರ್ಥಗಳ ಬಳಕೆ ಮುಂತಾದ ಅಂಶಗಳನ್ನು ಎತ್ತಿ ತೋರಿಸುತ್ತಿದೆ ಎಂದು ಹೇಳಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಈ ಯೋಜನೆಯನ್ನು ಬಲಪಡಿಸುವ ನಿಟ್ಟಿನಲ್ಲಿ ಸೂಕ್ತ ಅಡುಗೆ ಮನೆ, ಶುದ್ಧ ಕುಡಿಯುವ ನೀರು, ಅಡುಗೆ ಅನಿಲ, ಉತ್ತಮ ಗುಣಮಟ್ಟದ ಆಹಾರ ಖರೀದಿಗೆ ಅಗತ್ಯವಾದಷ್ಟು ಅನುದಾನ ನೀಡಬೇಕೆಂದು, ಅಡುಗೆ ಮಾಡುವ ಬಿಸಿಯೂಟ ಕೆಲಸಗಾರರಿಗೆ ಸ್ವಚ್ಛವಾದ, ಗೌರವಯುತವಾದ ಕೆಲಸದ ವಾತಾವರಣವನ್ನು ಒದಗಿಸಬೇಕೆಂದು ಸಂಘ ಆಗ್ರಹಿಸಿದೆ. ಇದಲ್ಲದೇ 12 ನೇ ತರಗತಿಯ ಮಕ್ಕಳವರೆಗೆ ಸ್ಥಳೀಯವಾಗಿಯೇ ಸಿದ್ದಪಡಿಸಲಾದ ಉತ್ತಮ ಗುಣಮಟ್ಟದ ಬಿಸಿಯೂಟದ ಲಭ್ಯತೆಯನ್ನು ಖಾತ್ರಿಪಡಿಸಬೇಕೆಂದು ಸಂಘ ಒತ್ತಾಯಿಸಿದೆ. ಈ ದುರಂತದಿಂದ ಕೋಟ್ಯಾಂತರ ಮಕ್ಕಳು ಮತ್ತು ಪೋಷಕರ ಮನಸ್ಸಿನಲ್ಲಿ ಉಂಟಾಗಿರುವ ಭೀತಿ ಮತ್ತು ಸಂಶಯವನ್ನು ಹೋಗಲಾಡಿಸಲು ಸರ್ಕಾರಗಳು ಅಗತ್ಯ ಕ್ರಮಗಳನ್ನು ತುರ್ತಾಗಿ ಕೈಗೊಳ್ಳಬೇಕೆಂದು ಯೋಜನೆಯನ್ನು ಸಮರ್ಪಕವಾಗಿ ನಿರ್ವಹಿಸಬೇಕೆಂದು ಸಂಘ ಆಗ್ರಹಿಸಿದೆ.

ಇಂತಹ ದುರಂತಗಳು ಸಂಭವಿಸುವುದರ ವಿರುದ್ಧ ಸಂಬಂಧಿಸಿದ ಸರ್ಕಾರಿ ಇಲಾಖೆಗಳು ಕ್ರಮಕೈಗೊಳ್ಳುವಂತೆ ದೇಶದ 28 ಲಕ್ಷ ಬಿಸಿಯೂಟ ಕಾರ್ಮಿಕರು ಈಗ ವಹಿಸುತ್ತಿರುವ ಮುತುವರ್ಜಿಯನ್ನು ಯೋಜನೆಯ ಫಲಾನುಭವಿಗಳೊಂದಿಗೆ ಸೇರಿ ಮುಂದುವರಿಸಬೇಕೆಂದು ಸಂಘವು ಕೋರಿದೆ.

ಉದ್ಯೋಗ ಖಾತ್ರಿ.....

ಪುಟ 13 ರಿಂದ

ಶುದ್ಧೀಕರಣ ಮತ್ತು ಮಾರಾಟ ವಲಯದಲ್ಲಿ ನೇತೃತ್ವದ ಸ್ಥಾನದಲ್ಲಿರುವ ಸಾರ್ವಜನಿಕ ವಲಯದ ಘಟಕವಾಗಿದ್ದು, ಅದನ್ನು ಆ ಸ್ಥಾನದಿಂದ ಇಳಿಸುವ ತರಾತುರಿಯಲ್ಲಿರುವ ಯುಪಿಎ–2 ಸರಕಾರ ಈ ಆತ್ಮಹತ್ಯಾಕಾರಿ ಮಾರ್ಗ ಹಿಡಿದಿರುವುದು ಆಘಾತಕಾರಿ ಎಂದು ಸಿಐಟಿಯು ಕಾರ್ಯದರ್ಶಿ ಸ್ವದೇಶ್ ರಾಯ್ ಪ್ರಧಾನ ಮಂತ್ರಿಗಳಿಗೆ ಬರೆದಿರುವ ಪತ್ರದಲ್ಲಿ ಹೇಳಿದ್ದಾರೆ.

ಐಒಎಲ್ ಅತಿ ದೊಡ್ಡ ತೈಲ ಶುದ್ಧೀಕರಣ ಘಟಕ ಮಾತ್ರವೇ ಅಲ್ಲ, ಅತಿ ದೊಡ್ಡ ಚಿಲ್ಲರೆ ಮಾರಾಟ ಜಾಲವನ್ನೂ ಹೊಂದಿರುವ ಸಾರ್ವಜನಿಕ ವಲಯದ ಘಟಕ. ಈ ಚಿಲ್ಲರೆ ಮಾರಾಟ ಕೇಂದ್ರಗಳು ವಾಣಿಜ್ಯ ದೃಷ್ಟಿಯಿಂದ ಬಹಳ ಆಕರ್ಷಕ ಸ್ಥಳಗಳಲ್ಲಿವೆ. ಗಮನಾರ್ಹ ಲಾಭ ಗಳಿಸುತ್ತಿರುವ ಈ ಕಂಪನಿಯ ಶೇರು ಬೆಲೆ 600ರೂ. ಇದ್ದುದನ್ನು ಮೇ ತಿಂಗಳ ಅಂತ್ಯದ ವೇಳೆಗೆ 288.90ರೂ. ಗೆ ಇಳಿಸಲಾಗಿದೆ– ಇದು ಮಾರುಕಟ್ಟೆ ಶಕ್ತಿಗಳ ಕುತಂತ್ರದಿಂದಾಗಿ ಆಗಿದೆ.

ಯುಪಿಎ–2 ಸರಕಾರ ನೈಸರ್ಗಿಕ ಅನಿಲ, ಪೆಟ್ರೋಲಿಯಂ, ವಿದ್ಯುತ್ ಈ ಎಲ್ಲ ವಿಭಾಗಗಳಲ್ಲಿ ದೈತ್ಯ ಕಾರ್ಪೊರೇಟ್‌ಗಳ ಪರವಾದ ಧೋರಣೆಗಳನ್ನು ಅನುಸರಿಸುತ್ತಿರುವುದರಿಂದ ದೇಶದ ಇಂಧನ ವಲಯದ ಎಲ್ಲ ವಿಭಾಗಗಳಲ್ಲಿ ಖಾಸಗಿಯವರ ಹಿಡಿತ ಸತತವಾಗಿ ಬಿಗಿಗೊಳ್ಳುತ್ತಲೇಇದೆ, ಅವುಗಳ ಒಡೆತನ ಶೇರು ಮಾರಾಟದ ಹೆಸರಿನಲ್ಲಿ ನಿಧಾನವಾಗಿ ಖಾಸಗಿಯವರ ಪಾಲಾಗುತ್ತಿದೆ. ಸರಕಾರದ ಬೊಕ್ಕಸಕ್ಕೆ ವಿವಿಧ ರೀತಿಗಳಲ್ಲಿ ಹತ್ತಾರು ಸಾವಿರ ಕೋಟಿ ರೂ. ಆದಾಯಗಳನ್ನು ತರುತ್ತಿರುವ, ಚೆನ್ನಾಗಿ ನಡೆಯುತ್ತಿರುವ ಕಂಪನಿಗಳನ್ನು ಈ ರೀತಿಯಾಗಿ ಖಾಸಗಿಯವರ ಕೈಗೊಪ್ಪಿಸಿ ಚಿನ್ನದ ಮೊಟ್ಟೆಯಿಡುವ ಕೋಳಿಯನ್ನು ಕೊಲ್ಲಲಾಗುತ್ತಿದೆ ಎಂಬುದನ್ನು ಸ್ವದೇಶ್ ರಾಯ್ ಅವರು ಬರೆದ ಪತ್ರ ಪ್ರಧಾನ ಂತ್ರಿಗಳ ಗಮನಕ್ಕೆ ತಂದಿದೆ. ಇದನ್ನು ನಿಲ್ಲಿಸಬೇಕು ಎಂದು ಆಗ್ರಹಿಸಿದೆ.

ಬಡತನ ಇಳಿದಿದೆಯೆಂಬ......

ಪುಟ 07 ರಿಂದ

ಸಾಲದು. ಎಲ್ಲ ಆವಶ್ಯಕ ಸರಕುಗಳ ನಿರಂತರ ಬೆಲೆಯೇರಿಕೆ, ಅದರೊಂದಿಗೆ ಇಂಧನ ಮತ್ತು ಪೆಟ್ರೋಲಿಯಂ ಉತ್ಪನ್ನಗಳನ್ನು ಮತ್ತೆ–ಮತ್ತೆ ಸತತವಾಗಿ ಏರಿಸುತ್ತಿರುವುದು ನಮ್ಮ ಜನಗಳ ಬದುಕಿನ ಮಟ್ಟವನ್ನು ದಿನೆಗಳೆದಂತೆ ಇನ್ನಷ್ಟು ಹದಗೆಡಿಸುತ್ತಿವೆ. ಇದೂ ಸಾಲದೆಂಬಂತೆ ಸಬ್ಸಿಡಿಗಳ ಮಟ್ಟದಲ್ಲೂ ಭಾರೀ ಕಡಿತ, ಅದರಲ್ಲೂ ರಸಗೊಬ್ಬರದ ಮೇಲಿನ ಸಬ್ಸಿಡಿಗಳಲ್ಲಿ. ಇದು ಅದಾಗಲೇ ಭಾರೀ ಕೃಷಿ ಸಂಕಟದಿಂದ ನರಳುತ್ತಿರುವ ರೈತರ ಬದುಕನ್ನು ಚಿಂದಿ ಮಾಡುತ್ತಿದೆ. ಧಾನ್ಯ ಬಳಕೆಯ ತಲಾ ಪ್ರಮಾಣ 1991ರಲ್ಲಿ 480 ಗ್ರಾಂ ಇದ್ದದ್ದು 2010ರಲ್ಲಿ 440 ಗ್ರಾಂ ಗೆ ಇಳಿದಿದೆ ಎಂಬುದೇ ನಮ್ಮ ವಿಶಾಲ ಜನಸಮೂಹಗಳ ಜೀವನ ಪರಿಸ್ಥಿತಿಗಳು ಹದಗೆಡುತ್ತಿವೆ ಎಂಬುದನ್ನು ದೃಢ ಪಡಿಸುತ್ತದೆ.

ಇಂತಹ ಸನ್ನಿವೇಶದಲ್ಲಿ ಸಂಕಟ ಪಡುತ್ತಿರುವ ನಮ್ಮ ವಿಶಾಲ ಜನಸಮೂಹಗಳಿಗೆ ಯಾವುದೇ ಅರ್ಥಪೂರ್ಣ ಪರಿಹಾರ ಆಹಾರ ಭದ್ರತೆಯ ಒಂದು ಸಾರ್ವತ್ರಿಕ ಯೋಜನೆಯಿಂದ ಮಾತ್ರವೇ ಸಾಧ್ಯ. ಅಂ-ದರೆ ನಮ್ಮ ಜನಸಂಖ್ಯೆಯ ಕನಿಷ್ಟ 90ಶೇ. ಜನಕ್ಕೆ ಪ್ರತಿ ಕುಟುಂಬಕ್ಕೆ ಕನಿಷ್ಟ 35 ಕೆ.ಜಿ. ಆಹಾರಧಾನ್ಯಗಳನ್ನು ಕೆ.ಜಿ.ಗೆ 2ರೂ. ಮೀರದ ಬೆಲೆಗಳಲ್ಲಿ ಒದಗಿಸುವ ಒಂದು ಯೋಜನೆ ಅಗತ್ಯ. ಇದರ ಬದಲು ಯುಪಿಎ–2 ಸರಕಾರದ ಆಹಾರ ಭದ್ರತಾ ಮಸೂದೆ ಈ ಪ್ರಮಾಣವನ್ನು 25 ಕೆ.ಜಿ.ಗೆ ಇಳಿಸಿದೆ ಮತ್ತು ದರವನ್ನು ಕೆ.ಜಿ.ಗೆ 3ರೂ.ಗೇರಿಸಿದೆ. ಇದು ಹಚ್ಚೆಂದರೆ ನಮ್ಮ ಜನಸಂಖ್ಯೆಯ ಮೂರನೇ ಎರಡು ಭಾಗಕ್ಕಷ್ಟೇ ಅನ್ವಯವಾಗ ಬಲ್ಲದು. ಇದು ಏನೇನೂ ಸಾಲದು, ಜನತೆಗೆ ಇದು ಆಹಾರ ಭದ್ರತೆಯನ್ನು ಕೊಡುವ ಬದಲು ಆಹಾರ ಅಭದ್ರತೆಯನ್ನೇ ಕೊಡುತ್ತದೆ.

ಆದ್ದರಿಂದ, ಬಡತನವನ್ನು ತಗ್ಗಿಸುವ ಪ್ರಶ್ನೆಯ ಮೇಲೆ ಯುಪಿಎ–2 ಸರಕಾರ ಪ್ರಚಾರ ಮಾಡುತ್ತಿರುವ ಸುಳ್ಳುಗಳನ್ನು ಸಂಪೂರ್ಣವಾಗಿ ಬಯಲಿಗೆಳೆಯ ಬೇಕಷ್ಟೇ ಅಲ್ಲ, ನಮ್ಮೆಲ್ಲ ಜನಗಳಿಗೆ ಆಹಾರ ಭದ್ರತೆಯೊಂದಿಗೆ ಒಂದು ಅರ್ಥಪೂರ್ಣ ಬದುಕನ್ನು ಒದಗಿಸುವಂತೆ ಮಾಡಲು ಜನಗಳನ್ನು ಅಣಿನೆರೆಸಬೇಕು. ಹೋರಾಟಗಳನ್ನು ಬಲಪಡಿಸಬೇಕು.

RNI No. KARKAN /2006/17926 Posted on every
Licensed to Post without prepayment License No. WP

ಕೃಪೆ : ವಿಜಯ ಕರ್ನಾಟಕ
ಪಿ ಮಹಮ್ಮದ್



ಪಶ್ಚಿಮ ಬಂಗಾಳ ಪಂಚಾಯತ್ ಚುನಾವಣೆ :

ತೃಣ ಮೂಲ ಕಾಂಗ್ರೆಸಿಗರಿಂದ ವ್ಯಾಪಕ ಹಿಂಸಾಚಾರ, ಮತಗಟ್ಟೆಗಳನ್ನು ವಶಪಡಿಸಿಕೊಂಡು ನಡೆಸಲಾದ ರಿಗ್ಗಿಂಗ್

ಆರ್. ರಾಮಕೃಷ್ಣ

'ಜಗತ್ತಿನ ಅತಿ ದೊಡ್ಡ ಪ್ರಜಾಪ್ರಭುತ್ವ ದೇಶ' ಎನ್ನಲಾಗುವ ಭಾರತದ ಪಶ್ಚಿಮ ಬಂಗಾಳ ಎಂಬ ರಾಜ್ಯದಲ್ಲಿ ಇದೀಗ ಐದು ಹಂತಗಳ ಪಂಚಾಯತ್ ಚುನಾವಣೆಗಳು ಮುಗಿದಿವೆ.

ಇದೊಂದು ಚುನಾವಣೆ ಅನ್ನುವುದಕ್ಕಿಂತ ಓಟುಗಳ ಹಗಲು ದರೋಡೆಯಾಗಿತ್ತು, ಪಶ್ಚಿಮ ಬಂಗಾಳದ ಪೊಲೀಸರ ಪ್ರತ್ಯಕ್ಷ ಸಮ್ಮತಿಯೊಂದಿಗೆ, ಶಸ್ತ್ರದಾರಿ ತೃಣಮೂಲ ಕಾಂಗ್ರೆಸಿನ ಗ್ಯಾಂಗುಗಳು ಮತಗಟ್ಟೆಗಳನ್ನು ವಶಪಡಿಸಿಕೊಂಡು, ಸಂಪೂರ್ಣ ಖೊಟ್ಟಿ ಮತದಾನ ಮಾಡಿ, ಮತದಾರರು ಮತಗಟ್ಟೆಗೆ ಬರದಂತೆ ಅವರನ್ನು ಬೆದರಿಸಿ, ವಿರೋಧ ಪಕ್ಷಗಳ ಅಭ್ಯರ್ಥಿಗಳ ಮೇಲೆ ಮತ್ತು ಅವರ ಏಜೆಂಟರ ಮೇಲೆ ಮಾರಣಾತಿಕ ಹಲ್ಲೆ ನಡೆಸಿ ಪ್ರಜಾಪ್ರಭುತ್ವದ ಕಗ್ಗೊಲೆ ಮಾಡಿದ್ದಾರೆ.

ಮತಗಟ್ಟೆ ವಶ-ದಾಳಿ-ಕೊಲೆ-ರಿಗ್ಗಿಂಗ್

ಜುಲೈ 11 ರಂದು ನಡೆದ ಮೊದಲ ಹಂತದ ಚುನಾವಣೆಯಲ್ಲಿ ಮತಗಟ್ಟೆಗಳ ವಶಪಡಿಸುವಿಕೆ ವ್ಯಾಪಕವಾಗಿ ನಡೆಯಿತು. ಪಶ್ಚಿಮ ಮಿಡ್ನಾಪುರ ಜಿಲ್ಲೆಯಲ್ಲಿ ಸುಮಾರು 260 ಮತಗಟ್ಟೆಗಳನ್ನು ವಶಪಡಿಸಿಕೊಂಡು ರಿಗ್ಗಿಂಗ್ ನಡೆಸಲಾಯಿತು. ಸಿಪಿಐ(ಎಂ) ಮತಗಟ್ಟೆ ಏಜೆಂಟರನ್ನು ಹೊಡೆದು ಓಡಿಸಲಾಯಿತು. ಮತಗಟ್ಟೆ ಅಧಿಕಾರಿಗಳು ಮೂಕ ಪ್ರೇಕ್ಷಕರಾಗಿದ್ದರು. ಬಂಕುರಾ ಜಿಲ್ಲೆಯಲ್ಲಿ ಮುಕ್ತ ಮತದಾನದ ಯಾವುದೇ ಸೂಚನೆ ಕಂಡು ಬರಲಿಲ್ಲ. ಸಾವಿರಾರು ಮತದಾರರಿಗೆ ಮತದಾನ ಮಾಡಲು ಅವಕಾಶ ನೀಡಲಿಲ್ಲ. ಮಧ್ಯಾಹ್ನ 12 ಗಂಟೆ ನಂತರ ಎಲ್ಲಾ ಮತಗಟ್ಟೆಗಳನ್ನು ವಶಪಡಿಸಿ ಖೊಟ್ಟಿ ಮತದಾನ ಮಾಡಲಾಯಿತು. ಆದರೆ ಬುಡಕಟ್ಟು ಗಿರಿಜನರೇ ಅಧಿಕ ಸಂಖ್ಯೆಯಲ್ಲಿರುವ ಜಿಲ್ಲೆಯ ದಕ್ಷಿಣ ಭಾಗದಲ್ಲಿ ಮತದಾರರು ದೊಡ್ಡ ಸಂಖ್ಯೆಯಲ್ಲಿ ಮತದಾನ ಮಾಡಿದರು. ಪುರುಲಿಯಾ ಜಿಲ್ಲೆಯಲ್ಲಿ ಅಲ್ಲಲ್ಲಿ ತೃಣಮೂಲ ಕಾಂಗ್ರೆಸಿಗರಿಂದ ಹಿಂಸಾಚಾರ ನಡೆಯಿತು. ಆದಾಗ್ಯೂ ಮತದಾರರು ಧೈರ್ಯದಿಂದ ಬಂದು ಮತದಾನ ಮಾಡಿದರು.

ಮೊದಲ ಹಂತದ ಚುನಾವಣೆಯಲ್ಲಿ ಮತದಾನ ಮಾಡಲು ಹೋದ ಪಶ್ಚಿಮ ಬಂಗಾಳ ವಿಧಾನ ಸಭೆಯ ವಿರೋಧ ಪಕ್ಷದ ಮುಖಂಡ, ಸಿಪಿಐ(ಎಂ) ಪಾಲಿಟ್ ಬ್ಯುರೋ ಸದಸ್ಯ ಸೂರ್ಯಕಾಂತ ಮಿಶ್ರ ಅವರನ್ನು ಎಳೆದಾಡಲಾಯಿತು. ಇಲ್ಲಿಯವರೆಗೆ 21 ಜನರು ಪಂಚಾಯತ್ ಚುನಾವಣೆಯ ಸಂಬಂಧ ಪ್ರಾಣ ಕಳೆದುಕೊಂಡಿದ್ದಾರೆ. ಯಾವ ಕೋರ್ಟ್‌ಗಳ ತಾಕೀತುಗಳು ತಳಹಂತದಲ್ಲಿ ಸಮರ್ಪಕವಾಗಿ ಜಾರಿಗೆ ಬರಲಿಲ್ಲ.

ಕಗ್ಗೊಲೆಗಳು

ಎರಡನೇ ಹಂತದ ಚುನಾವಣೆಯಲ್ಲಿ ಬರ್ಧ್ವಾನ್ ಜಿಲ್ಲೆಯ ಮಧುನಗರ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಸಿಪಿಐ(ಎಂ) ಅಭ್ಯರ್ಥಿ ಮೊನೋವಾರ ಬೀಬಿ ಅವರನ್ನು ಥಳಿಸಲಾಯಿತು. ಅವರ ಗಂಡ ಶೇಕ್ ಹಸ್ಮತ್ ಅವರ ಮೇಲೆ ಬಾಂಬ್ ಹಾಕಿ ಅವರನ್ನು ಕೊಲ್ಲಲಾಯಿತು.


ಒಂದು ಊರಿನಲ್ಲಿ ಸಿಪಿಐ(ಎಂ) ಮತ್ತು ಕಾಂಗ್ರೆಸ್ ಪಕ್ಷಕ್ಕೆ ಸೇರಿದ ಒಟ್ಟು 40 ಜನರ ಮನೆಗಳಿಗೆ ಬೆಂಕಿ ಇಕ್ಕಲಾಯಿತು. ಪನುರಿಯಾ ಗ್ರಾಮ ಪಂಚಾಯತ್‌ನ ಸಿಪಿಐ(ಎಂ) ಅಭ್ಯರ್ಥಿ ಸಿದ್ದಾರ್ಥ ಬ್ಯಾನರ್ಜಿ ಅವರ ಮೇಲೆ ತೃಣಮೂಲ ಕಾಂಗ್ರೆಸಿಗರ ದಾಳಿ ನಡೆಯಿತು.

ಹೈಕೋರ್ಟ್ ತಾಕೀತು

ಜುಲೈ 17, 2013 ರಂದು ಕೊಲ್ಕೋತ್ತಾ



ಮಾಲ್ಡಾದ ಆಸ್ಪತ್ರೆಯಲ್ಲಿ ದಾಖಲಾಗಿರುವ ಸಿಪಿಐ(ಎಂ) ಕಾರ್ಯಕರ್ತರು



ಹೈಕೋರ್ಟು ಅದೇಶವೊ[...] ಹೊರಡಿಸಿ ಮುಂದಿನ ಹಂತದ ಚುನಾ[...] ಪ್ರಕ್ರಿಯೆಯಲ್ಲಿ ಕಾನೂನು ಸ[...]

ಮು[...]


ಆಗಸ್ಟ್ 7 -'ಪ್ರಜಾಪ್ರಭುತ್ವ ಉಳಿಸಿ ಪ್ರಚಾರಾಂದೋಲನ':

ಪಶ್ಚಿಮ ಬಂಗಾಳದಲ್ಲಿ ಪ್ರಜಾಪ್ರಭುತ್ವದ ಮೇಲಿನ ಅತ್ಯಾಚಾರವನ್ನು ಖಂಡಿಸಿ ಆಗಸ್ಟ್ 7, 2013 ರಂದು 'ಪಶ್ಚಿಮ ಬಂಗಾಳದಲ್ಲಿ ಹಿಂಸೆ ಮತ್ತು ಭೀತಿಯನ್ನು ಸೋಲಿಸಿ ಮತ್ತು ಪ್ರಜಾಪ್ರಭುತ್ವ ಉಳಿಸಿ' ಎಂಬ ರಾಷ್ಟ್ರವ್ಯಾಪಿ ಪ್ರಚಾರಾಂದೋಲನವನ್ನು ನಡೆಸಲು ಸಿಪಿಐ(ಎಂ) ಪಾಲಿಟ್ ಬ್ಯುರೋ ತನ್ನ ಎಲ್ಲ ಘಟಕಗಳಿಗೆ ಕರೆ ನೀಡಿದೆ. ಆ ಮೂಲಕ ಘಟಕಗಳು ಪಶ್ಚಿಮ ಬಂಗಾಳದಲ್ಲಿ ಹೇಗೆ ಪ್ರಜಾಪ್ರಭುತ್ವದ ಕಗ್ಗೊಲೆ ನಡೆದಿದೆ ಎಂದು ದೇಶದ ಜನತೆಗೆ ವಿವರಿಸಬೇಕೆಂದು ಮತ್ತು ಪ್ರಜಾಪ್ರಭುತ್ವ ರಕ್ಷಣೆಯ ಹೋರಾಟಕ್ಕೆ ಬೆಂಬಲ ನೀಡಬೇಕೆಂದು ಮನವಿ ಮಾಡಿ ಜನರನ್ನು ಅಣಿನೆರೆಸಬೇಕೆಂದು ಪಾಲಿಟ್ ಬ್ಯೂರೋ ಕರೆ ನೀಡಿದೆ. ಎಡರಂಗವನ್ನು ಮತ್ತು ವಿರೋಧ ಪಕ್ಷಗಳನ್ನು ದಮನ ಮಾಡುವ ತೃಣಮೂಲ ಕಾಂಗ್ರೆಸ್ ಪಕ್ಷದ ಹಿಂಸೆಯನ್ನು ದೇಶದ ಎಲ್ಲ ಪ್ರಜಾಪ್ರಭುತ್ವ ಶಕ್ತಿಗಳೂ ಖಂಡಿಸಬೇಕೆಂದು ಪಾಲಿಟ್ ಬ್ಯುರೋ ಮನವಿ ಮಾಡಿದೆ.

ಪ್ರತಿರೋಧ ಮತ್ತು ಪ್ರತಿಭಟನೆ

ಪಶ್ಚಿಮ ಬಂಗಾಳದ ಜನತೆ ತಾವು ಇಂತಹ ಅಪಪ್ರಚಾರಗಳನ್ನು ನಂಬುವುದಿಲ್ಲ ಎಂದು ಮತ್ತು ಪ್ರಜಾಪ್ರಭುತ್ವ ಹಕ್ಕುಗಳ ಮೇಲಿನ ದಾಳಿಗಳನ್ನು ಉದ್ದಕ್ಕೂ ಸಹಿಸಿಕೊಂಡು ಹೋಗುವುದಿಲ್ಲ ಎಂದು ಸೂಚನೆ ಕೊಡುತ್ತಿದ್ದಾರೆ. ಪೂರ್ವ ಮಿಡ್ನಾಪುರ, ಉತ್ತರ ಹಾಗೂ ದಕ್ಷಿಣ ಪರಗಣ ಜಿಲ್ಲೆಗಳಲ್ಲಿ ತೃಣಮೂಲ ಗೂಂಡಾಗಳ ಹಿಂಸಾಚಾರದ ವರ್ತಮಾನಗಳು ಬರುತ್ತಿದ್ದಂತೆ ನಗರ ಪ್ರದೇಶಗಳ ಸಾವಿರಾರು ಎಡರಂಗ ಬೆಂಬಲಿಗರು ಬೀದಿಗೆ ಬಂದು ಪ್ರತಿಭಟನೆ ಆರಂಭಿಸಿದರು. ನೈಹಾಟಿ, ಶ್ಯಾಮನಗರ್, ಸೋಡೇಪುರ್, ಡಂಡಂ, ಬಾಗುಯ್‌ಹಟಿ ಮುಂತಾದ ಕಡೆ ಜನರು ರಸ್ತೆ ತಡೆ, ರೈಲು ತಡೆಗಳನ್ನು ನಡೆಸಿ ಸರ್ಕಾರಕ್ಕೆ ತಮ್ಮ ಎಚ್ಚರಿಕೆ ನೀಡಿದರು. ಇಂತಹ ಪ್ರತಿಭಟನೆಗಳ ಮೇಲೂ ತೃಣಮೂಲ ಗೂಂಡಾಗಳು ದಾಳಿ ನಡೆಸಿ ಹಲವರನ್ನು ಗಾಯಗೊಳಿಸಿದ್ದಾರೆ.

ಬಾರಕ್‌ಪುರ್ ಸಿಪಿಐ(ಎಂ) ಸ[...] ಸಮಿತಿಯ ಕಛೇರಿಯನ್ನು [...] ಮಾಡಿದ್ದಾರೆ. ಜನತೆ ಯಾ[...] ಬೆದರದೆ ಪ್ರತಿಭಟನೆ ನಡೆಸಿದರು.



JANASHAKTHI KANNADA VARA PATRIKE: Printed by G.V.SRIRAMA REDDY, EMS Bhavana, No.37/A, 8th Cross, Mahalakshmi Layout, BANGALORE-560086Published by: G.V.SRIRAMA REDDY EMS Bhavana, No.37/A, 8th Cross, Mahalakshmi Layout, BANGALORE-560086. Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor NITHYANANDASWAMI EMS Bhavana, No.37/A, 8th Cross, Mahalakshmi Layout BANGALORE-560086 Editor : NITHYANANDASWAMI